"JANAPADA" Monthly - July 2016
"ಜನಪದ" ಮಾಸಿಕ – ಜುಲೈ 2016

Page No. -52
RNI No. KAR/KAN/2010/20676

REGD NO. : KA/BG/GPO-2526/2015-17 License to post without prepayment WPP 34
Dt. 29th & 30th Posted at (Every month) Bangalore PSO, Mysore Road, Bangalore-26




ಕಂಠೀರವ ಕ್ರೀಡಾಂಗಣದಲ್ಲಿ
ವಿಶ್ವ ಯೋಗ ದಿನಾಚರಣೆ

ವಾರ್ಷಿಕ ಚಂದಾ ರೂ.25/-

# ಜನಪದ

ಜುಲೈ 2016



ಕೃಷಿ ಅಭಿಯಾನಕ್ಕೆ ಚಾಲನೆ



## ಜನಸಂಖ್ಯೆ ಮತ್ತು ಅಭಿವೃದ್ಧಿ ಒಂದು ನೋಟ

ಬೆಂಗಳೂರು ನಗರ ಪ್ರದಕ್ಷಿಣೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ ಅಭಿವೃದ್ಧಿ ಕಾರ್ಯಗಳ ವೀಕ್ಷಣೆ










ಗೃಹ ಕಚೇರಿ ಕೃಷ್ಣಾದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು






# || ಪುಟ ತೆರೆದಂತೆ... ||


**05** ಜನಸಂಖ್ಯೆ ಮತ್ತು ಅಭಿವೃದ್ಧಿ
• ಡಾ|| ಆರ್. ಶಂಕರಪ್ಪ

**11** ಕೃಷಿ ಅಭಿಯಾನ

**12** ಮಕ್ಕಳ ಕಲಿಕೆಗೆ ಹೊಸ ಚೇತನವಾದ ರಚನಾವಾದ
• ಪರಮೇಶ್ವರಯ್ಯ ಸೊಪ್ಪಿಮಠ

**16** ಕೆ.ಸಿ ವ್ಯಾಲಿ ಯೋಜನೆಗೆ ಚಾಲನೆ
• ಕೆ. ಎಸ್. ಗಣೇಶ್

**19** ಮಾಧ್ಯಮ ಲೋಕದ ವಿಭಿನ್ನ ಪಯಣಿಗ ಪಿ. ಸಾಯಿನಾಥ್
• ಜಿ. ಎನ್. ಮೋಹನ್

**23** ನೀರೆಂಬ ನೀಲಿ ಚಿನ್ನ
• ಡಾ. ಜಗದೀಶ್ ಕೊಪ್ಪ

**26** ನೂತನ ಸಚಿವರುಗಳ ಪ್ರಮಾಣವಚನ ಸಮಾರಂಭ

**28** ಬಿಸಿಲ ನಾಡಿನಲ್ಲಿ ಜರ್ಬೆರಾ ಹೂಗಳ ಕಲರವ
• ಜೆ. ಚಂದ್ರಕಾಂತ್

**30** ಮಣಿಪಾಲ ಹೆರಿಟೇಜ್ ವಿಲೇಜ್
• ಮಟಪಾಡಿ ಕುಮಾರಸ್ವಾಮಿ

**36** ಹುಬ್ಬಳ್ಳಿಯ ಗತಕಾಲದ ಶಿಲ್ಪ ಕಲಾ ದೇಗುಲ
• ಪಿ. ಎಸ್. ಪರ್ವತಿ

**38** ರಂಗಭೂಮಿ ಫಕೀರ ನಟ ಫಕೀರಪ್ಪ ವರವಿ
• ಗುಡಿಹಳ್ಳಿ ನಾಗರಾಜ್

**41** ಕರ್ನಾಟಕದ ಕಸ್ತೂರ ಬಾ ಯಶೋಧರಮ್ಮ ದಾಸಪ್ಪ
• ವೇಮಗಲ್ ಸೋಮಶೇಖರ್

**44** ಸಾಮಾಜಿಕ ಅಭಿವೃದ್ಧಿ ಯೋಜನೆಯ ಹರಿಕಾರ ನಾಲ್ವಡಿ ಕೃಷ್ಣರಾಜ ಒಡೆಯರು
• ಹೆಚ್. ಹಾಲಪ್ಪ

**46** ಕೃಷಿಕರನ್ನು ಉತ್ತೇಜಿಸುವ ಕೃಷಿ ಜಯಂತಿ
• ಗಣಪತಿ ಹಾಸ್ಪುರ

**48** ಶಾಂತಿ ಮತ್ತು ಸಾಮರಸ್ಯಕ್ಕಾಗಿ ಯೋಗ
• ಮಂಜುನಾಥ ಉಲುವತ್ತಿ ಶೆಟ್ಟರ್



ಸಂಪುಟ–59 • ಸಂಚಿಕೆ–4

**ಜುಲೈ 2016**

ಪ್ರಧಾನ ಸಂಪಾದಕರು
**ಎನ್. ಆರ್. ವಿಶುಕುಮಾರ್**
ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
**ಬಸವರಾಜ ಕಂಬಿ**
ಉಪ ನಿರ್ದೇಶಕರು

ಉಪ ಸಂಪಾದಕರು
**ಸಿ. ರೂಪಾ**
ಸಹಾಯಕ ನಿರ್ದೇಶಕರು

ಪ್ರಕಾಶಕರು
ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ
ಬೆಂಗಳೂರು–560 001
Email : varthajanapada@yahoo.co.in

ಮುದ್ರಕರು
**ಲಾವಣ್ಯ ಮುದ್ರಣ**
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ
ಬೆಂಗಳೂರು–560 050




ಲೇಖಕರ ಅಭಿಪ್ರಾಯಗಳು, ಸರ್ಕಾರದ ಅಭಿಪ್ರಾಯಗಳಲ್ಲ




# ಓದುಗರಿಂದ...

'ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ




### ಶ್ರೀಗಂಧದ ಪರಿಮಳ

ಶ್ರೀಗಂಧದ ಪರಿಮಳವನ್ನು ಜಗತ್ತಿನಾದ್ಯಂತ ಪಸರಿಸಿದ ಮೈಸೂರು ಸ್ಯಾಂಡಲ್ ಸಾಬೂನು ಕಾರ್ಖಾನೆಗೆ ಈಗ ನೂರು ವರ್ಷದ ಸಂಭ್ರಮ. ಈ ಸಾಧನೆ ನಾಲ್ವಡಿ ಕೃಷ್ಣರಾಜ ಅರಸರ ಕಲ್ಪನೆಗಳನ್ನು ಹಾಗೂ ಅದನ್ನು ಅನುಷ್ಠಾನಗೊಳಿಸಿದ ಸರ್ ಎಮ್ ವಿಶ್ವೇಶ್ವರಯ್ಯನವರು ಹಾಗೂ ರಸಾಯನ ವಿಜ್ಞಾನಿ ಎಸ್ ಜೆ ಶಾಸ್ತ್ರಿ ಪರಿಶ್ರಮದ ಫಲ. ಹಳೆಯ ಮೈಸೂರು ಸ್ಯಾಂಡಲ್ ಸಾಬೂನಿನ ಜಾಹಿರಾತಿನೊಂದಿಗೆ ಪ್ರಕಟವಾದ ಲೇಖನ ಸೊಗಸಾಗಿದೆ.

**–ಈಶ್ವರ ಹೆಬ್ಬಳಕರ್**, ಬಸವಕಲ್ಯಾಣ

---

ಬರಡು ಭೂಮಿಯಲ್ಲಿ ಬಂಗಾರ ಬೆಳೆದ ದಿಟ್ಟ ಮಹಿಳೆ ಅನಕ್ಷರಸ್ಥಳಾದ ಶೇಖಮ್ಮ ಹಲವರಿಗೆ ಮಾದರಿಯಾಗಿದ್ದಾರೆ. ಬರಡು ಭೂಮಿಯನ್ನು ಫಲವತ್ತಾಗಿಸಿ ಲಕ್ಷಾಂತರ ರೂಪಾಯಿ ಲಾಭ ಪಡೆಯುವ ಮೂಲಕ ತಮ್ಮ ಅಪ್ರತಿಮ ಇಚ್ಛಾಶಕ್ತಿ ಪ್ರದರ್ಶಿಸಿ ಇತರರಿಗೆ ಮಾದರಿಯಾಗಿದ್ದಾರೆ. ಅವರು ಸಾವಯವ ಗೊಬ್ಬರ ಬಳಕೆ ಮಾಡುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಬಂಡೆಯಿದ್ದ ಭೂಮಿಯನ್ನು ಫಲವತ್ತಾಗಿ ಮಾಡಲು ಇವರು ಪಟ್ಟ ಶ್ರಮ ಶ್ಲಾಘನೀಯ. ಅನಕ್ಷರಸ್ಥ ಮಹಿಳೆಯ ಅಸಾಮಾನ್ಯ ಕೆಲಸ ರೈತರಿಗೆ ನಿಜಕ್ಕೂ ಆದರ್ಶವಾಗಿದೆ.

**–ವಿಲ್ಸನ್ ಅಲೆಕ್ಸಾಂಡರ್**, ಮುಂಡಗೋಡ

---

### ಜನಾಭಿಪ್ರಾಯ ಸಮಾವೇಶ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಕಳೆದ ವರ್ಷ ಆರಂಭಿಸಿರುವ 'ಜನಮನ' ಜನಮಾನಸದ ಆಸೆ, ಆಕಾಂಕ್ಷೆ, ನಿರೀಕ್ಷೆಗಳನ್ನು ಬಿಂಬಿಸುತ್ತದೆ. ಕ್ಷೀರಭಾಗ್ಯ, ಋಣಮುಕ್ತ, ಕ್ಷೀರಧಾರೆ, ಮೈತ್ರಿ, ಮನಸ್ವಿನಿ, ವಿದ್ಯಾಸಿರಿ ಫಲಾನುಭವಿಗಳು ಸಂವಾದದಲ್ಲಿ ನೇರವಾಗಿ ಪಾಲ್ಗೊಂಡು ಮುಖ್ಯಮಂತ್ರಿಗಳೊಂದಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡಿದ್ದು. ಮೆಚ್ಚುಗೆ ಮೂಡಿಸಿತು.

**–ಎಮ್ ಎಸ್ ಪ್ರಸನ್ನ ಕುಮಾರ್,**
ತುಮಕೂರು

---

'ಜನಪದ' ಮಾಸಿಕಕ್ಕೆ
ಚಂದಾದಾರರಾಗುವವರು
ರೂ. 25/– ಅನ್ನು ಕಡ್ಡಾಯವಾಗಿ
ಡಿ.ಡಿ. ಮುಖಾಂತರವೇ ಕಳಿಸಬೇಕು.
ಮನಿ ಆರ್ಡರ್ ಹಣವನ್ನು
ಸ್ವೀಕರಿಸುವುದಿಲ್ಲ.

ವಾರ್ಷಿಕ ಚಂದಾ
ರೂ.25/–

---

ಜೂನ್ ಸಂಚಿಕೆಯಲ್ಲಿ ನಗುಮೊಗದ ಮಾನ್ಯ ಮುಖ್ಯಮಂತ್ರಿಗಳ ಮುಖಪುಟ ಚಿತ್ರ ಬಹಳ ಆಕರ್ಷಣೀಯವಾಗಿತ್ತು. ಸರ್ಕಾರದ ಜನಾಭಿಪ್ರಾಯ ಸಮಾವೇಶ ಜನ–ಮನ ಒಂದು ಸಾರ್ಥಕ ಸಮಾವೇಶವೆನಿಸಿದ್ದು ಸಾಧನೆಯ ಮೂರು ವರ್ಷಗಳು ನುಡಿದಂತೆ ನಡೆಯುತ್ತಿರುವುದಕ್ಕೆ ಸಾಕ್ಷಿ ಎನಿಸುವಂತಿದೆ.

ಬರಗಾಲದ ಸಂಕಷ್ಟದಲ್ಲಿ ಜನರ ಜೊತೆಯಾಗಿ ಲೇಖನ ಸಕಾಲಿಕವಾಗಿದೆ. ಜಾಗತಿಕ : ತಾಪಮಾನ–ನಿಮ್ಮ ಕೊಡುಗೆ ಎಷ್ಟು? ಚಿಂತನೀಯ ಲೇಖನವೆನಿಸಿತು. ಮೈಸೂರು ಗಂಧದ ಸಾಬೂನು ತಯಾರಿಕೆಗೆ ನೂರು ವರ್ಷ ಲೇಖನದಲ್ಲಿ ಮೈಸೂರು ಸ್ಯಾಂಡಲ್ ಸೋಪಿನ ಇತಿಹಾಸ ತಿಳಿಸಿಕೊಟ್ಟಿರುವುದಕ್ಕೆ ಧನ್ಯವಾದಗಳು. ಬರಡು ಭೂಮಿಯಲ್ಲಿ ಬಂಗಾರ ಬೆಳೆದ ದಿಟ್ಟ ಮಹಿಳೆ ಲೇಖನ ಓದಿ ಬಹಳ ಸಂತೋಷವೆನಿಸಿತು. ಆಕೆ ನಿಜಕ್ಕೂ ಒಬ್ಬ ಧೀರ ಮಹಿಳೆಯೆ.

**–ವಿ. ಹೇಮಂತಕುಮಾರ,**
ಬೆಂಗಳೂರು

---

### 'ಮನಗೆದ್ದ ಜನಮನ'

ಸರ್ಕಾರವು ಮೂರು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಹಲವಾರು ಯೋಜನೆಗಳ ಕುರಿತು ಫಲಾನುಭವಿಗಳು ತಮ್ಮ ಆಸೆ ಆಕಾಂಕ್ಷೆಗಳನ್ನು ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ನಿವೇದಿಸಿಕೊಂಡದ್ದು ಬಹಳ ಮೆಚ್ಚುಗೆಯಾಯಿತು. ಯೋಜನೆಗಳ ಸದುಪಯೋಗವಾಗಬೇಕಾದರೆ ಈ ತೆರನಾದ ಪುನರಾವಲೋಕನ ಸೂಕ್ತ. ಸಾಧನೆಯ ಮೂರು ವರ್ಷಗಳ ಫಲಶೃತಿಯು ಜನಾಭಿಪ್ರಾಯ ಸಮಾವೇಶದಲ್ಲಿ ಪ್ರಕಟಗೊಂಡಿದ್ದು ಅತ್ಯಂತ ಸ್ವಾಗತಾರ್ಹ.

**–ಕೊತ್ತಲ ಮಹಾದೇವಪ್ಪ,**
ಲಕ್ಷ್ಮೇಶ್ವರ

---

ಜನಪದಕ್ಕೆ ಚಂದಾ ಹಣವನ್ನು ಡಿಡಿ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು
**ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪ್ರಕಟಣಾ ಶಾಖೆ ವಿಭಾಗ**
ವಾರ್ತಾಸೌಧ, 17, ಭಗವಾನ್ ಮಹಾವೀರ ರಸ್ತೆ (ಇನ್ಫೆಂಟ್ರಿ ರಸ್ತೆ), ಬೆಂಗಳೂರು–560 001





# ಜನಸಂಖ್ಯೆ ಮತ್ತು ಅಭಿವೃದ್ಧಿ

▪ ಡಾ|| ಆರ್. ಶಂಕರಪ್ಪ



ನಿಖರವಾದ ಕಾರ್ಯನೀತಿಯ ಅಂಗೀಕಾರದಿಂದ ಪರಿಸರದೊಂದಿಗೆ ಸಾಮರಸ್ಯ ಹಾಗೂ ಅಭಿವೃದ್ಧಿ ಸಾಧ್ಯ. ಮಾನವ ಸಂಪನ್ಮೂಲ ಅಭಿವೃದ್ಧಿಯಿಂದ ಪ್ರಕೃತಿ ಒಡ್ಡುವ ಎಲ್ಲಾ ಸವಾಲುಗಳನ್ನು ಎದುರಿಸಬಹುದು. ನಮ್ಮ ಜನರಲ್ಲಿ ಸದೃಢತೆ ಮೂಡಿಸಲು ಹಾಗೂ ಪ್ರಾಕೃತಿಕ ಸಂಪನ್ಮೂಲದ ಬಳಕೆಯ ಸಲುವಾಗಿ ರಾಷ್ಟ್ರವು ಸಂರಕ್ಷಣಾ ಅಭಿವೃದ್ಧಿ ಹೊಂದಬೇಕಾಗಿದೆ. ಇದಕ್ಕಾಗಿ ನಾವೆಲ್ಲ ರಾಷ್ಟ್ರವ್ಯಾಪಿ ಜನಾಂದೋಲನ ಪ್ರಾರಂಭಿಸಬೇಕಾಗಿದೆ.

ಭಾರತ ಈಗ 126 ಕೋಟಿ ಜನಸಂಖ್ಯೆ ಇರುವ ದೇಶ. ಇದು ವಿಶ್ವದ ಶೇ.2.4 ರಷ್ಟು ಭೌಗೋಳಿಕ ಭೂಪ್ರದೇಶದ ಮೇಲೆ ವಾಸ ಮಾಡುತ್ತಿರುವ ವಿಶ್ವದ ಶೇ. 17 ರಷ್ಟು ಜನಸಂಖ್ಯೆ. ಇದೇ ರೀತಿ ಮುಂದುವರೆದರೆ 2045 ರ ಹೊತ್ತಿಗೆ ಭಾರತ, ಚೀನಾ ದೇಶವನ್ನು ಹಿಂದೆ ಹಾಕಿ ಪ್ರಪಂಚದ ಹೆಚ್ಚು ಜನಸಂಖ್ಯಾ ದೇಶವಾಗುವುದರಲ್ಲಿ ಸಂಶಯವಿಲ್ಲ. ಈ ಶತಮಾನದಲ್ಲಿ ಪ್ರಪಂಚದ ಜನಸಂಖ್ಯೆ 3 ಪಟ್ಟು ಅಂದರೆ 2 ಶತಕೋಟಿಯಿಂದ 6 ಶತಕೋಟಿಯವರೆಗೆ ಏರಿದ್ದು, ಇದರಲ್ಲಿ ಭಾರತದ ಜನಸಂಖ್ಯೆ 5 ಪಟ್ಟು ಅಂದರೆ 23 ಕೋಟಿಯಿಂದ 126 ಕೋಟಿಯಷ್ಟು ಹೆಚ್ಚಾಗಿದೆ.

ಭಾರತದ ಈಗಿನ ಜನಸಂಖ್ಯೆಯ ವಾರ್ಷಿಕ ಏರಿಕೆ 15.5 ದಶಲಕ್ಷ. ಸಂಪನ್ಮೂಲ ಕ್ರೋಢೀಕರಣ ಮತ್ತು ಪರಿಸರ ಸಂರಕ್ಷಣೆಯ ಶ್ರಮವನ್ನು ಸ್ಥಗಿತಗೊಳಿಸಲು ಸಾಕಾಗಿದೆ.

ಸಂರಕ್ಷಣಾ ಅಭಿವೃದ್ಧಿಯನ್ನು ಉತ್ತೇಜನಗೊಳಿಸಿ, ಸಂಪನ್ಮೂಲದ ಸಮಹಂಚಿಕೆ ಮತ್ತು ಬಡತನ ನಿರ್ಮೂಲ ಮಾಡಲು ಜನಸಂಖ್ಯೆ ನಿಯಂತ್ರಣ ಬಹಳ ಅಗತ್ಯ. ಏರುತ್ತಿರುವ ಜನಸಂಖ್ಯೆ, ಆಹಾರ ಮತ್ತು ಜಲ, ಭದ್ರತೆ, ಆರೋಗ್ಯ, ರಕ್ಷಣೆ ಗ್ರಾಮೀಣ ಮತ್ತು ನಾಗರೀಕ ಸೇವೆ ಹಾಗೂ ಪ್ರಕೃತಿಯ ಸಂರಕ್ಷಣೆ ಮೇಲೆ ಆಗಾಧವಾದ ಪರಿಣಾಮ ಬೀರುತ್ತದೆ.

ಬಡತನದಿಂದಾಗಿ ಶೀಘ್ರ ಕೈಗಾರೀಕರಣ, ಅವ್ಯವಸ್ಥಿತ ನಾಗರೀಕರಣ, ಪ್ರಕೃತಿ ಸಂಪನ್ಮೂಲದ ನಾಶ ಹಾಗೂ ಅದರ ವಿಪರೀತ ಬಳಕೆಯಿಂದ ಪರಿಸರದ ಮೇಲೆ ಅತಿಯಾದ ಒತ್ತಡ ಬೀಳುತ್ತಿದೆ. ಪರಿಸರದ ಅವನತಿಯಿಂದಾಗಿ ಜಲ ಮತ್ತು ವಾಯುಮಾಲಿನ್ಯ, ಮಣ್ಣಿನಲ್ಲಿ ಅಪಕ್ವತೆ, ಕಾಡುಗಳ ನಾಶ, ಬರ ಪ್ರವಾಹ, ಅಸಮರ್ಪಕ ಗ್ರಾಮೀಣ ಸೇವೆ, ಮತ್ತು ಅನೈರ್ಮಲ್ಯ ಕಾಡುತ್ತಿದೆ. ಗ್ರಾಮಗಳಲ್ಲಿನ ಪರಿಸರ ಮಾಲಿನ್ಯ, ಜಲ ಅಭಾವ, ಕನಿಷ್ಠ ಮಟ್ಟದ ನದಿ ಹರಿವಿನ ಅಭಾವ ತಲೆದೋರಿದೆ. ಬೆಳೆಯುತ್ತಿರುವ ಜನಸಂಖ್ಯೆಗೆ ಆಹಾರ ಭದ್ರತೆ ನೀಡುವ ಸಲುವಾಗಿ ನೀರಾವರಿಗಾಗಿ ಅತಿಯಾದ ಅಂತರ್ಜಲ ಬಳಕೆ ನಡೆದಿದೆ.



**ಭಾರತದ ಜನಸಂಖ್ಯಾ ಸಾಧನೆ**

ರಾಷ್ಟ್ರೀಯ ಜನಸಂಖ್ಯಾ ನೀತಿಯನ್ನು ರೂಪಿಸಿ, ಜಾರಿಗೆ ತಂದ ನಂತರ ಆರು ದಶಕಗಳಲ್ಲಿ ಭಾರತ ಮುಂದಿನ ಸಾಧನೆಗಳನ್ನು ಮಾಡಿದೆ.

- ಜನನ ಪ್ರಮಾಣವನ್ನು 40.8 (1951) ರಿಂದ 26.4 ಕ್ಕೆ ಇಳಿಸುವುದರಲ್ಲಿ ಯಶಸ್ವಿಯಾಗಿದೆ.
- ಪ್ರತಿ ಸಾವಿರ ಜನಸಂಖ್ಯೆಗೆ ಶಿಶು ಮರಣ ಪ್ರಮಾಣವನ್ನು 146 ರಿಂದ (1951) 72 ಕ್ಕೆ ಇಳಿಸಲಾಗಿದೆ.
- ದಂಪತಿಗಳಿಗೆ ನೀಡಲಾದ ರಕ್ಷಣಾ ಸೌಲಭ್ಯವನ್ನು ಶೇಕಡಾ 10.4 ರಿಂದ (1971) ಶೇಕಡಾ 44 ಕ್ಕೆ ಹೆಚ್ಚಿಸಲಾಗಿದೆ.
- ಮರಣ ಪ್ರಮಾಣವನ್ನು 25 ರಿಂದ (1951) 9 ಕ್ಕೆ ಇಳಿಸಲಾಗಿದೆ.
- ಆಯುಪ್ರಮಾಣವನ್ನು 37 ವರ್ಷಗಳಿಂದ 62 ವರ್ಷಗಳಿಗೆ ಅಂದರೆ 25 ವರ್ಷಗಳಷ್ಟು ಹೆಚ್ಚಿಸಲಾಗಿದೆ.
- ಕುಟುಂಬ ನಿಯಂತ್ರಣ ಕಾರ್ಯಕ್ರಮದ ಬಗ್ಗೆ ಅರಿವನ್ನು ಸಾರ್ವಜನಿಕರಲ್ಲಿ ಮೂಡಿಸುವ ನಿಟ್ಟಿನಲ್ಲಿ ಸಾಧನೆ ಕಂಡು ಬಂದಿದೆ.
- ಸಂತಾನ ಶಕ್ತಿಯನ್ನು 6 ರಿಂದ (1951) 3.3. ಕ್ಕೆ ಇಳಿಸಲಾಗಿದೆ.

ಕೆಟ್ಟ ಪರಿಸರದಿಂದ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ಜೊತೆಗೆ ಅಸಮರ್ಪಕ ಅಭಿವೃದ್ಧಿ ಪರಿಸರ ಸಂಪನ್ಮೂಲವನ್ನು ನಾಶಗೊಳಿಸುತ್ತದೆ. ಸಂರಕ್ಷಣ ಅಭಿವೃದ್ಧಿಗೆ ಸಂಪನ್ಮೂಲ ಬಳಕೆ ಬಹಳ ಮುಖ್ಯ. ಇದರ ಬಳಕೆಯಿಂದ ಪರಿಸರ ನಾಶವಾಗದಂತೆ ನೋಡಿಕೊಂಡು ಮುಂದಿನ ಜನಾಂಗಕ್ಕೆ ಬದುಕಲು ಅನುವು ಮಾಡಿಕೊಡಬೇಕಾಗಿದೆ.

- ಸಂರಕ್ಷಣಾ ಅಭಿವೃದ್ಧಿ ಕಾರ್ಯಾಚರಣೆ ಯಶಸ್ವಿಯಾಗಬೇಕಾದರೆ ಪರಿಸರದ ಮೇಲೆ ಪರಿಣಾಮ ಬೀರದಂತಹ ಅಭಿವೃದ್ಧಿ ಕೈಗೊಳ್ಳಬೇಕು. ಸಂರಕ್ಷಣಾ ಅಭಿವೃದ್ಧಿಯನ್ನು ಸುಲಭವಾಗಿ ಗಳಿಸಲು ಈ ಕೆಳಕಂಡ ಗುರಿಯನ್ನು ಪ್ರಥಮವಾಗಿ ಸಾಧಿಸಬೇಕು.
- ಜನಸಂಖ್ಯೆ ಮತ್ತು ಪರಿಸರದ ಬಳಕೆ ಒಂದಕ್ಕೊಂದು ಹೊಂದಿಕೊಂಡಿರಬೇಕು.
- ವ್ಯವಸ್ಥಿತ ಉದ್ಯೋಗಾವಕಾಶಗಳನ್ನು ಕಲ್ಪಿಸಿ ಬಡಜನತೆಯ ಜೀವನ ಮಟ್ಟವನ್ನು ಸುಧಾರಿಸಬೇಕು.
- ಆಹಾರ ಉತ್ಪಾದನೆಯನ್ನು ಹೆಚ್ಚು ಮಾಡಿ ಆಹಾರ ಭದ್ರತೆಯನ್ನು ದೃಢಪಡಿಸಬೇಕು.
- ತಲಾವಾರಿಗೆ ಸಮನಾದ 250 ಕೆ.ಜಿ. ಅಡುಗೆ ಇಂಧನದ ವಾರ್ಷಿಕ ಅವಶ್ಯಕತೆಯನ್ನು ಪೂರೈಸಿಕೊಳ್ಳಬೇಕು.
- ವಸತಿ ನೀರು ಸರಬರಾಜು, ನೈರ್ಮಲ್ಯ, ಆರೋಗ್ಯ ಸಂರಕ್ಷಣೆ ಮತ್ತು ಮಾನವನ ಅತ್ಯಾವಶ್ಯಕ ಕೊರತೆಯನ್ನು ನೀಗಿಸಿಕೊಂಡು ಭವಿಷ್ಯದಲ್ಲಿ ಇವುಗಳನ್ನು ಪಡೆಯಲು ವ್ಯವಸ್ಥಿತ ಯೋಜನೆ ಮಾಡಬೇಕು.
- ಭೂಮಿ ಹಾಗೂ ನೀರಿಗೆ ಸಂಬಂಧಪಟ್ಟ ಹಾಗೆ ಕಾರ್ಯನೀತಿಯನ್ನು ರೂಪಿಸಬೇಕು.






- ಪ್ರಕೃತಿ ಸಂಪನ್ಮೂಲದ ಉತ್ಪಾದನೆಗೆ ಹಾಗೂ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ವ್ಯವಸ್ಥಿತ ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸಿ ಅಳವಡಿಸಿಕೊಳ್ಳಬೇಕು.
- ಬದಲಿ ಶಕ್ತಿ ಮೂಲಗಳನ್ನು ಬದಲಿಯಲ್ಲದವುಗಳಿಂದ ಬದಲಾಯಿಸಬೇಕು.
- ಸಮಾಜದ ದುರ್ಬಲ ವರ್ಗಗಳಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗ ಅಲ್ಪಸಂಖ್ಯಾತರು ಮತ್ತು ಮಹಿಳೆಯರನ್ನು ಶಕ್ತಿಯುತರನ್ನಾಗಿ ಮಾಡಬೇಕು.
- ಬೆಳೆಯುತ್ತಿರುವ ಜನ ಸಮುದಾಯಕ್ಕೆ ಅವಶ್ಯವಿರುವ ವ್ಯವಸ್ಥಿತ ಸೇವೆಯನ್ನು ಕಲ್ಪಿಸಿಕೊಡಬೇಕು.
- ಸಂಪನ್ಮೂಲದ ತಳಹದಿಯನ್ನು ಬಲಪಡಿಸಿ, ವೃದ್ಧಿಪಡಿಸಿ ದೇಶದ ಸಮೃದ್ಧತೆಯನ್ನು ಹೆಚ್ಚಿಸಬೇಕು.
- ಪ್ರಕೃತಿ ಪ್ರಪಂಚದ ವಿವಿಧತೆಯನ್ನು ಪೋಷಿಸಿ ಅದರ ಸದ್ಬಳಕೆ ಮಾಡಿಕೊಳ್ಳಬೇಕು.

**ರಾಷ್ಟ್ರೀಯ ಜನಸಂಖ್ಯಾ ನೀತಿ**

ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಪ್ರಮುಖ ಧ್ಯೇಯ ಜನತೆಯ ಜೀವನ ಮಟ್ಟ ಸುಧಾರಣೆ, ಆ ಮೂಲಕವೇ ಜನತೆಗೆ ಸಲ್ಲಬೇಕಾದ ಸದವಕಾಶಗಳನ್ನು ಒದಗಿಸಿ ಸಮಾಜದಲ್ಲಿ ಅವರ ಉತ್ಪಾದಕತಾ ಶಕ್ತಿಯನ್ನು ಹೆಚ್ಚಿಸುವ ಪ್ರಯತ್ನ ಮಾಡಬೇಕಾಗಿದೆ.

ಜನಸಂಖ್ಯೆಯನ್ನು ಅದಷ್ಟು ಕಡಿಮೆ ಮಾಡಲು 1952ರಲ್ಲಿ ಭಾರತ ರಾಷ್ಟ್ರೀಯ ಕಾರ್ಯಕ್ರಮವನ್ನು ಜಾರಿಗೆ ತಂದಿತು. ಜನಸಂಖ್ಯಾ ನಿಯಂತ್ರಣಕ್ಕಾಗಿ ರಾಷ್ಟ್ರೀಯ ಯೋಜನೆಯನ್ನು ರೂಪಿಸಿದ ರಾಷ್ಟ್ರಗಳಲ್ಲಿ ಭಾರತ ಇಡೀ ವಿಶ್ವದಲ್ಲೇ ಮೊದಲ ರಾಷ್ಟ್ರ. 1952ರ ನಂತರದಲ್ಲಿ ಜನಸಂಖ್ಯೆ ಸ್ವಲ್ಪ ಸ್ವಲ್ಪವಾಗಿ ಕಡಿಮೆಯಾದರೂ ಮರಣ ಪ್ರಮಾಣದಲ್ಲಿ ಇಳಿಕೆ ಕಂಡು ಬಂದ ಕಾರಣ ಉದ್ದೇಶ ಸಂಪೂರ್ಣ ಸಾಧನೆಯಾಗಲಿಲ್ಲ ಎಂದೇ 1983 ರಲ್ಲಿ ರಾಷ್ಟ್ರೀಯ ಆರೋಗ್ಯ ನೀತಿಯನ್ನು ರೂಪಿಸಿ 2000ರ ವೇಳೆಗೆ ಗುರಿ ಸಾಧನೆಯತ್ತ ಪ್ರಯತ್ನಿಸಲಾಯಿತು.

2016ರ ವೇಳೆಗೆ ಭಾರತದ ಜನಸಂಖ್ಯೆ 126 ಕೋಟಿಗಳಿಗೇರಿದೆ. ಅಂದರೆ ಇದು ವಿಶ್ವದ ಜನಸಂಖ್ಯೆಯಲ್ಲಿ ಶೇಕಡಾ 17 ರಷ್ಟು ಇದೆ. ಆದರೆ ಪ್ರಪಂಚದ ಒಟ್ಟು ಭೂ ವಿಸ್ತೀರ್ಣದಲ್ಲಿ ಭಾರತ ಹೊಂದಿರುವ ನೆಲೆ ಕೇವಲ ಶೇಕಡ. 2.4 ರಷ್ಟು ಜನಸಂಖ್ಯಾ ಬೆಳವಣಿಗೆಯ ಸದ್ಯದ ಪ್ರವೃತ್ತಿ ಹೀಗೆ ಮುಂದುವರಿದರೆ 2045 ರ ವೇಳೆಗೆ ಭಾರತ ಚೀನಾ ಜನಸಂಖ್ಯೆಯನ್ನು ಮೀರಿಸಲಿದ್ದು, ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರವಾಗಲಿದೆ. ಈ ಶತಮಾನದಲ್ಲಿ ವಿಶ್ವದ ಜನಸಂಖ್ಯೆಯ ಪ್ರಮಾಣ 2 ಶತಕೋಟಿಗಳಿಂದ 6 ಶತಕೋಟಿಗಳು ಅಂದರೆ ಮೂರು ಪಟ್ಟು ಹೆಚ್ಚಿದರೆ ಭಾರತದ ಜನಸಂಖ್ಯಾ ಏರಿಕೆ ಪ್ರಮಾಣ ಐದು ಪಟ್ಟು ಹೆಚ್ಚಿದೆ. ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಭಾರತದ ಜನಸಂಖ್ಯೆ 23.8 ಕೋಟಿ ಇದ್ದರೂ ಶತಮಾನದ ಅಂತ್ಯದ ವೇಳೆಗೆ 126 ಕೋಟಿಗಳೀಗೇರಿದೆ. ಪ್ರತಿ ವರ್ಷದ ಏರಿಕೆ ಪ್ರಮಾಣ 15.5 ದಶಲಕ್ಷಗಳಿದ್ದು, ಸಂಪನ್ಮೂಲಗಳನ್ನು ಸಂರಕ್ಷಿಸುವ ಪ್ರಯತ್ನಕ್ಕೆ ಅಡಚಣೆ ಉಂಟು ಮಾಡಿದೆ.

ಸಮನಾದ ವಿತರಣೆಯನ್ನು ಆಧರಿಸಿ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಜನಸಂಖ್ಯೆಯನ್ನು ಸ್ಥಿರೀಕರಿಸುವುದು ಎಂದಿಗೂ ಅತ್ಯಗತ್ಯ. ಅಷ್ಟೇ ಅಲ್ಲ ಸಮಾಜದಲ್ಲಿ ಸಂತಾನ ಶಕ್ತಿಯನ್ನು

## ಈ ದೇಶಗಳಿಗೆ ಜನಸಂಖ್ಯೆ ಬೇಕು!

ಸಿಂಗಾಪುರ ಸರ್ಕಾರವು ಜನಸಂಖ್ಯಾ ಹೆಚ್ಚಳಕ್ಕೆ ಒತ್ತು ನೀಡುತ್ತಿದ್ದು, 2012 ರ ಆಗಸ್ಟ್ ನಲ್ಲಿ ನ್ಯಾಷನಲ್ ನೈಟ್ ಎಂಬ ಆಂದೋಲನವನ್ನು ಆರಂಭಿಸಿದೆ. ಈ ಆಂದೋಲನದ ಮೂಲಕ ದಂಪತಿಗಳಲ್ಲಿ ದೇಶಭಕ್ತಿ ಮೂಡಿಸುವ ಜತೆಗೆ ದೇಶದ ಜನಸಂಖ್ಯಾ ಹೆಚ್ಚಳಕ್ಕೆ ಕೊಡುಗೆ ನೀಡುವಂತೆ ಕೋರಲಾಗುತ್ತಿದೆ.

****

ದಕ್ಷಿಣ ಕೊರಿಯಾದಲ್ಲಿ ಜನನ ಪ್ರಮಾಣ ಹೆಚ್ಚಿಸಲು ಲೈಟ್ ಔಟ್ ಡೇ ಜಾರಿಗೆ ತರಲಾಗಿದೆ. ಪ್ರತಿ ಮೂರನೇ ಬುಧವಾರ ಎಲ್ಲ ಕಛೇರಿಗಳು ಏಳು ಗಂಟೆಗೆ ಬಾಗಿಲು ಹಾಕುವ ಮೂಲಕ ನೌಕರರನ್ನು ಬೇಗ ಮನೆಗೆ ಕಳುಹಿಸಬೇಕು. ಆ ದಿನವನ್ನು ಫ್ಯಾಮಿಲಿ ಡೇ ಎಂದು ಕರೆಯಲಾಗುತ್ತದೆ.

****

ರಷ್ಯಾದಲ್ಲಿ ಸೆಪ್ಟೆಂಬರ 12 ನ್ನು ರಾಷ್ಟ್ರೀಯ ಗರ್ಭಧಾರಣಾ ದಿನ ಎಂದು ಘೋಷಿಸಲಾಗಿದ್ದು, ಎಲ್ಲ ಕಛೇರಿಗಳಿಗೂ ಅರ್ಧ ದಿನ ರಜೆ ನೀಡಲಾಗುತ್ತದೆ. ಜೂನ್ 12 ರಷ್ಯಾದ ರಾಷ್ಟ್ರೀಯ ದಿನ ಆಚರಿಸಲಾಗುತ್ತದೆ. ಅಂದು ಮಗುವಿಗೆ ಜನ್ಮ ನೀಡುವ ತಾಯಂದಿರಿಗೆ ಫ್ರಿಜ್, ಹಣ , ಕಾರನ್ನು ಉಡುಗೊರೆಯಾಗಿ ನೀಡಲಾಗುತ್ತದೆ.

****

ರೋಮೇನಿಯಾದಲ್ಲಿ ಮಕ್ಕಳನ್ನು ಹೊಂದಿರುವ ವಿವಾಹಿತ ಹಾಗೂ ಅವಿವಾಹಿತರ ಮೇಲೆ ಹೆಚ್ಚುವರಿ ಟ್ಯಾಕ್ಸ್ ವಿಧಿಸಲಾಗುತ್ತದೆ 25 ವರ್ಷ ಮೇಲ್ಪಟ್ಟ ಯುವಕ, ಯುವತಿಯವರು ಮದುವೆ ಆಗಿರಲಿ/ ಆಗದಿರಲಿ ಮಕ್ಕಳನ್ನು ಹೊಂದಿಲ್ಲ ಎಂದರೆ ಅವರ ಆದಾಯದ ಶೇ.20 ರಷ್ಟನ್ನು ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಪಾವತಿಸಬೇಕು.

****

ಅಭಿವೃದ್ಧಿ ಪಡಿಸುವಂತಹ ಆರೋಗ್ಯ ವರ್ಧನೆಯೂ ಅಷ್ಟೇ ಮುಖ್ಯ. ಸಾರ್ವಜನಿಕ ಆರೋಗ್ಯ, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ನೈರ್ಮಲೀಕರಣ ಶುದ್ಧ ಕುಡಿಯುವ ನೀರು ವಸತಿ ಸೌಲಭ್ಯಗಳಷ್ಟೇ ಮುಖ್ಯವಾದುದೆಂಬುದಲ್ಲಿ ಎರಡು ಅಭಿಪ್ರಾಯವಿಲ್ಲ. ಸಾಮಾಜಿಕ ಅಭಿವೃದ್ಧಿಯ ನಿಟ್ಟಿನಲ್ಲಿ ಮಹಿಳೆಯರಿಗೆ ಹೆಚ್ಚಿನ ಅಧಿಕಾರ ನೀಡುವುದು. ಸಾರಿಗೆ ಹಾಗೂ ಸಂಪರ್ಕ ಸೌಲಭ್ಯಗಳನ್ನು ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿಸುವುದೂ ಅಗತ್ಯ.

ರಾಷ್ಟ್ರೀಯ ಜನಸಂಖ್ಯಾ ನೀತಿ 2000 ರಲ್ಲಿ ಜನರ ಒಪ್ಪಿಗೆಯನ್ನು ಪಡೆದ ನಂತರವೇ ಕುಟುಂಬ ನಿಯಂತ್ರಣ ಯೋಜನೆಯನ್ನು ಅನುಸರಿಸುವಂತೆ ಮಾಡುವುದಕ್ಕೆ ಕ್ರಮಕೈಗೊಳ್ಳಲಾಗಿದೆ. ಮುಂದಿನ ಹತ್ತು ವರ್ಷಗಳಲ್ಲಿ ಜನಸಂಖ್ಯಾ ನಿಯಂತ್ರಣದ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳನ್ನು ಜನಸಂಖ್ಯಾ ನೀತಿಯಲ್ಲಿ ನಮೂದಿಸಲಾಗಿದೆ. ಶಿಶು ಸಂರಕ್ಷಣೆ, ಪ್ರಸೂತಿ, ಆರೋಗ್ಯ ಹಾಗೂ ಗರ್ಭನಿರೋಧಕಗಳಂತಹ ವಿಷಯಗಳನ್ನು ಒತ್ತಿ ಹೇಳಲಾಗಿದೆ ಕುಟುಂಬ ನಿಯಂತ್ರಣ ಆ ಮೂಲಕ ಜನಸಂಖ್ಯಾ ಸ್ಥಿರತೆಗೆ ಸಂಬಂಧಿಸಿದಂತೆ ಸರ್ಕಾರೇತರ ಸಂಸ್ಥೆಗಳ ನೆರವು ಹಾಗೂ ಸರ್ಕಾರ ಮತ್ತು ಸ್ವಯಂ ಚಾಲಿತ ಸಂಘ ಸಂಸ್ಥೆಗಳ ನಡುವಣ ಮೈತ್ರಿ ಬಗ್ಗೆಯೂ ಪ್ರಸ್ತಾಪವಿದೆ.

ಗುರಿ: ರಾಷ್ಟ್ರೀಯ ಜನಸಂಖ್ಯಾ ನೀತಿ –2000 ದ ಶೀಘ್ರದಲ್ಲಿ ಸಾಧಿಸಬೇಕಾದ ಮುಖ್ಯಗುರಿಗಳೆಂದರೆ ಗರ್ಭನಿರೋಧಕ, ಆರೋಗ್ಯ ವರ್ಧನೆಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳ ವಿಸ್ತರಣೆ ಹಾಗೂ ಸಂತಾನಶಕ್ತಿ ಮತ್ತು ಶಿಶು ಆರೋಗ್ಯ ಸೌಲಭ್ಯಗಳನ್ನು ಹೆಚ್ಚು ಪ್ರಮಾಣದಲ್ಲಿ ಒದಗಿಸುವುದೇ ಆಗಿದೆ. 2010 ರ ವೇಳೆಗೆ ಅಂತಹ ವಿಭಾಗ ಕಾರ್ಯತಂತ್ರಗಳ ಮೂಲಕ ಬರುವ ಸಂತಾನ ಶಕ್ತಿಯನ್ನು

ಗುರಿಮಟ್ಟಕ್ಕೆ ತರುವುದು ಮಧ್ಯಾವಧಿ ಗುರಿಯಾದರೆ ದೀರ್ಘಾವಧಿಯಲ್ಲಿ 2045 ರ ವೇಳೆಗೆ ಜನಸಂಖ್ಯೆ ಸ್ಥಿರೀಕರಣ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಆರ್ಥಿಕಾಭಿವೃದ್ಧಿ ಹಾಗೂ ಪರಿಸರ ಸಂರಕ್ಷಣೆ ಮೂಲಕ ದೀರ್ಘಾವಧಿ ಗುರಿಸಾಧನೆಯತ್ತ ಪ್ರಯತ್ನಿಸಲಾಗುವುದು.

ಗುರಿ ಸಾಧನೆ ಕಷ್ಟ ಸಾಧ್ಯವೇನಲ್ಲ. ರಾಷ್ಟ್ರೀಯ ಸಾಮಾಜಿಕ ಜನಸಂಖ್ಯಾ ಗುರಿಯನ್ನು 2010 ರ ವೇಳೆಗೆ ಸಾಧಿಸಲು ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

**2010 ರ ವೇಳೆಗೆ ನಿಗದಿ ಪಡಿಸಿದ್ದ ರಾಷ್ಟ್ರೀಯ ಸಾಮಾಜಿಕ ಜನಸಂಖ್ಯಾ ಗುರಿ**

- ಈವರೆಗೆ ಒದಗಿಸಲಾದ ಸಂತಾನೋತ್ಪನ್ನ ಹಾಗೂ ಶಿಶು ಆರೋಗ್ಯ ಸೇವಾ ಸೌಲಭ್ಯಗಳು ಮತ್ತು ಮೂಲಭೂತ ಸೌಲಭ್ಯಗಳನ್ನು ದೊರಕಿಸಿಕೊಡುವುದು.
- 14 ನೇ ವಯಸ್ಸಿನವರೆಗೆ ಶಾಲಾ ಶಿಕ್ಷಣವನ್ನು ಕಡ್ಡಾಯಗೊಳಿಸುವುದು ಹಾಗೂ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳು ಶಾಲೆ ಬಿಡುವುದನ್ನು ಶೇಕಡಾ 20 ಕ್ಕಿಂತ ಕೆಳಗಿಳಿಸುವುದು.
- ಪ್ರತಿ ಸಾವಿರ ಜನಸಂಖ್ಯೆಗೆ ಶಿಶು ಮರಣ ಪ್ರಮಾಣವನ್ನು 30 ಕ್ಕಿಂತ ಕಡಿಮೆ ಮಾಡುವುದು.
- ಪ್ರತಿ 1,00,000 ಜನನಗಳಿಗೆ ಸಂಬಂಧಿಸಿದಂತೆ ಮಾತ್ರ ಮರಣ ಪ್ರಮಾಣವನ್ನು 100 ಕ್ಕಿಂತ ಕಡಿಮೆ ಮಾಡುವುದು.
- ಎಲ್ಲ ಮಕ್ಕಳಿಗೆ ರೋಗ ನಿರೋಧಕ ಚುಚ್ಚುಮದ್ದು ನೀಡಿಕೆ.
- ಹೆಣ್ಣು ಮಕ್ಕಳು 18 ವರ್ಷದ ನಂತರ ಹಾಗೂ ಗಂಡಸರು 20ರ ನಂತರವೇ ವಿವಾಹ ಮಾಡಿಕೊಳ್ಳುವ ಗುರಿ ಸಾಧನೆ.
- ಆಸ್ಪತ್ರೆ ಹಾಗೂ ಪ್ರಸೂತಿ ಸೌಲಭ್ಯಗಳ ಲಭ್ಯವಿರುವ ಸಂಸ್ಥೆಗಳಲ್ಲೇ ಹೆರಿಗೆ ಮತ್ತು ತರಬೇತಿ ಪಡೆದವರಿಂದಲೇ ಹೆರಿಗೆಗೆ ನೆರವು.
- ಆಯ್ಕೆಗೆ ಅವಕಾಶವಿರುವ ವಿವಿಧ ಗರ್ಭನಿರೋಧಕಗಳ ಪೂರೈಕೆ.
- ಜನನ, ಮರಣ, ವಿವಾಹ, ಹಾಗೂ ಗರ್ಭಧಾರಣೆಯ ನೂರಕ್ಕೆ ನೂರರಷ್ಟು ದಾಖಲಾತಿ.
- ಏಡ್ಸ್ ನಂತಹ ಮಾರಕ ರೋಗಗಳು ಮತ್ತು ಲೈಂಗಿಕ ಸಂಪರ್ಕಗಳ ಮೂಲಕ ಹರಡುಬಹುದಾದ ಕಾಯಿಲೆಗಳನ್ನು ತಡೆಯುವುದು
- ಸಾಂಕ್ರಾಮಿಕ ರೋಗಗಳನ್ನು ತಡೆಯುವುದು ಹಾಗೂ ನಿಯಂತ್ರಿಸುವುದು.
- ಭಾರತೀಯ ವೈದ್ಯಕೀಯ ಪದ್ಧತಿಗೆ ಉತ್ತೇಜನ.
- ಒಟ್ಟು ಸಂತಾನ ಶಕ್ತಿಯನ್ನು ನಿಗದಿತ ಹಂತಕ್ಕೆ ತರುವ ಸಲುವಾಗಿ ಕುಟುಂಬ ಯೋಜನಾ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನ.
- ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಮತ್ತಷ್ಟು ಜನಪ್ರಿಯಗೊಳಿಸುವ ಸಲುವಾಗಿ ಸಾಮಾಜಿಕ ಕಾರ್ಯಯೋಜನೆಗಳನ್ನು ರೂಪಿಸಿ ಜಾರಿಗೊಳಿಸುವುದು.

ಇವು ರಾಷ್ಟ್ರೀಯ ಸಾಮಾಜಿಕ ಜನಸಂಖ್ಯಾ ಯೋಜನೆಯ ಗುರಿ. ಆದರೂ ಜನಸಂಖ್ಯೆ ಏರಿಕೆ ವರ್ಷದಿಂದ ವರ್ಷಕ್ಕೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಅತಿ ಹೆಚ್ಚಿನ ಜನಸಂಖ್ಯೆಯಿಂದ ಅನೇಕ ಸಮಸ್ಯೆಗಳು ಉದ್ಭವವಾಗುತ್ತವೆ.

**ಮಾನವ ಸಂಪನ್ಮೂಲ:** ಭಾರತದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಹಲವು ಸಮಸ್ಯೆಗಳನ್ನು ಸೃಷ್ಟಿಸಿದೆ ಎಂಬುದು ಎಷ್ಟು ಸತ್ಯವೋ ಅದು ಒಂದು ಶಕ್ತಿಯಾಗಿಯೂ ಪರಿಣಮಿಸಿದೆ ಎಂಬುದೂ ಅಷ್ಟೇ ಸತ್ಯ. ಕಾರಣ, ಭಾರತ ವಿಶ್ವದಲ್ಲೇ ಅತಿ ಹೆಚ್ಚು ಯುವಕರನ್ನು ಹೊಂದಿರುವ ದೇಶ. ಆದ್ದರಿಂದ ದುಡಿಯುವ ಕೈಗಳು ಹೆಚ್ಚಿ ಉತ್ಪಾದಕತೆಯೂ ಹೆಚ್ಚುತ್ತಿದೆ.

ಇದರಿಂದ ಆರ್ಥಿಕ, ಸಾಮಾಜಿಕ ರಂಗಗಳು ಬಲಗೊಳ್ಳುತ್ತಿವೆ ಎಂಬುದನ್ನು ಸರ್ಕಾರವೇ ಒಪ್ಪಿಕೊಂಡಿದೆ.

ಹಲವು ಕ್ಷೇತ್ರಗಳ ಬೆಳವಣಿಗೆಯಲ್ಲಿ ಯುವ ಮಾನವ ಸಂಪನ್ಮೂಲ ನಿರ್ಣಾಯಕ ಪಾತ್ರ ವಹಿಸಿದೆ. ಭಾರತದಲ್ಲಿ 13 ರಿಂದ 35 ವರ್ಷದೊಳಗಿನವರ ಸಂಖ್ಯೆ 60 ಕೋಟಿ ಪ್ರಪಂಚದ ಯಾವ ದೇಶವೂ ಈ ಪ್ರಮಾಣದ ಯುವಶಕ್ತಿಯನ್ನು ಹೊಂದಿಲ್ಲ. 2020 ರ ಹೊತ್ತಿಗೆ ಭಾರತದ ಸರಾಸರಿ ವಯಸ್ಸು 29 ಆಗಲಿದೆ. ಅದೇ ಚೀನಾ 37, ಅಮೆರಿಕ 45, ಯುರೋಪ್ ಹಾಗೂ ಜಪಾನ್‌ನ ಸರಾಸರಿ ವಯಸ್ಸು 48 ಆಗಲಿದೆ. ಅಂದರೆ ಭಾರತದ ಯೌವನದ ತೇಜಸ್ಸು ದೀರ್ಘಾವಧಿಯವರೆಗೆ ಮುಂದುವರಿಯಲಿದ್ದು, ಸ್ವಾಭಾವಿಕವಾಗಿ ನಮ್ಮಲ್ಲಿನ ವರ್ಕಿಂಗ್ ಪೀಪಲ್ (ಕಾರ್ಯನಿರತರು) ಸಂಖ್ಯೆ ಗಣನೀಯವಾಗಿ ಹೆಚ್ಚಲಿದೆ. ಇದು ಅಭಿವೃದ್ಧಿ ನಿಟ್ಟಿನಲ್ಲಿ ಇರುವ ಸಕಾರಾತ್ಮಕ ಅಂಶ.

ಮಾನವ ಸಂಪನ್ಮೂಲವನ್ನು ರಚನಾತ್ಮಕ ದಿಕ್ಕಿನಲ್ಲಿ ಬಳಸಿಕೊಂಡರೆ ಅಭಿವೃದ್ಧಿಯ ಹೊಸ ಮಜಲುಗಳನ್ನು ತಲುಪಬಹುದು ಎಂಬುದು ಸಮಾಜ ವಿಜ್ಞಾನಿಗಳ ಅಭಿಮತ ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಚೀನಾ ಈ ನಿಟ್ಟಿನಲ್ಲಿ ಮಾದರಿಯಾಗಬಹುದು. ಅದು ತನ್ನೆಲ್ಲ ಮಾನವ ಸಂಪನ್ಮೂಲವನ್ನು ಸಮರ್ಥವಾಗಿ ಬಳಸಿಕೊಂಡಿದೆ. ಭಾರತ ಕೂಡ ಈ ದಿಸೆಯಲ್ಲಿ ಹೆಜ್ಜೆ ಇಟ್ಟಿದೆ. ಕೇಂದ್ರ ಸರ್ಕಾರ ಕೌಶಲ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು, ಯುವಜನರಿಗೆ, ತರಬೇತಿ ನೀಡಲಾಗುತ್ತಿದೆ. ದುಡಿಯುವ ಕೈಗಳು ಇರುವಾಗ ಅದಕ್ಕೆ ತಕ್ಕದಾಗಿ ಕೆಲಸಗಳೂ ಸೃಷ್ಟಿಸಬೇಕಾಗುತ್ತದೆ, ಆ ನಿಟ್ಟಿನಲ್ಲಿ ಸರ್ಕಾರ ಹಾಗೂ ಸಮುದಾಯ ಯಶಸ್ವಿಯಾದಲ್ಲಿ ಮಾನವ ಸಂಪನ್ಮೂಲ ವರದಾನವಾಗುವುದರಲ್ಲಿ ಅನುಮಾನವಿಲ್ಲ.

**ಜನಸಂಖ್ಯೆಗೆ ಬ್ರೇಕ್:** ಚೀನಾ:– ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಚೀನಾ 1978 ರಲ್ಲಿ ಈ ನಿಟ್ಟಿನಲ್ಲಿ ಜಾರಿಗೆ ತಂದ ಒಂದು ಮಗು ನಿಯಮ ಪರಿಣಾಮಕಾರಿಯಾಗಿತ್ತು. ಒಂದಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ದಂಪತಿಗಳಿಗೆ ಸರ್ಕಾರ ವಿವಿಧ ಸೌಲಭ್ಯಗಳನ್ನು ಕಡಿತಗೊಳಿಸಿತ್ತು. ಚೀನಾದ ಅಧಿಕಾರಿಗಳ ಪ್ರಕಾರ ಈ ನಿಯಮದಿಂದ ದೇಶದ ಜನಸಂಖ್ಯೆ 40 ಕೋಟಿ ಸೇರ್ಪಡೆಯಾಗುವುದನ್ನು ತಡೆಯಲು ಸಾಧ್ಯವಾಗಿದೆ. 2014ರ ನವೆಂಬರ್‌ನಲ್ಲಿ ಸರ್ಕಾರ ಈ ನಿಯಮದಲ್ಲಿ ಸಡಿಲಿಕೆ ತರುವ ಮೂಲಕ 2 ಮಕ್ಕಳನ್ನು ಹೊಂದಲು ಅವಕಾಶ ನೀಡಿತ್ತು.

**ಭಾರತ:–** ನಾವಿಬ್ಬರು, ನಮಗಿಬ್ಬರು, ಎಂಬ ಘೋಷವಾಕ್ಯದ ಮೂಲಕ ಕುಟುಂಬ ಯೋಜನೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಸರ್ಕಾರ ಪ್ರಯತ್ನಿಸಿತು. ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ನೌಕರರಿಗೆ ವಿವಿಧ ಸೌಲಭ್ಯಗಳನ್ನು ಕಡಿತಗೊಳಿಸಿತ್ತು. ಕುಟುಂಬ ಯೋಜನೆಗೆ ಒಪ್ಪಿದ ಕುಟುಂಬಗಳಿಗೆ ಸರ್ಕಾರ ಪ್ರೋತ್ಸಾಹಧನ ನೀಡಿತು. 1951ರಲ್ಲೇ ಭಾರತ ಜನಸಂಖ್ಯಾ ನಿಯಂತ್ರಣಕ್ಕೆ ಯೋಜನೆಗಳನ್ನು ರೂಪಿಸಿತ್ತು.



**2016ರ ವೇಳೆಗೆ ಭಾರತದ ಜನಸಂಖ್ಯೆ 126 ಕೋಟಿಗಳಿಗೇರಿದೆ. ಅಂದರೆ ಇದು ವಿಶ್ವದ ಜನಸಂಖ್ಯೆಯಲ್ಲಿ ಶೇಕಡಾ 17 ರಷ್ಟು ಇದೆ. ಆದರೆ ಪ್ರಪಂಚದ ಒಟ್ಟು ಭೂ ವಿಸ್ತೀರ್ಣದಲ್ಲಿ ಭಾರತ ಹೊಂದಿರುವ ನೆಲೆ ಕೇವಲ ಶೇಕಡ. 2.4 ರಷ್ಟು ಜನಸಂಖ್ಯಾ ಬೆಳವಣಿಗೆಯ ಸದ್ಯದ ಪ್ರವೃತ್ತಿ ಹೀಗೆ ಮುಂದುವರಿದರೆ 2045 ರ ವೇಳೆಗೆ ಭಾರತ ಚೀನಾ ಜನಸಂಖ್ಯೆಯನ್ನು ಮೀರಿಸಲಿದ್ದು, ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರವಾಗಲಿದೆ.**

**ಇರಾನ್:–** 1980–2010 ರ ಅವಧಿಯಲ್ಲಿ ಜನನ ಪ್ರಮಾಣ ತಗ್ಗಿಸುವಲ್ಲಿ ಇರಾನ್ ಯಶಸ್ವಿಯಾಗಿತ್ತು. ಮದುವೆಗೆ ಮುನ್ನ ಗಂಡು ಮತ್ತು ಹೆಣ್ಣು ಇಬ್ಬರು ಜನನ ನಿಯಂತ್ರಣ ಯೋಜನೆಗಳ ಕುರಿತಾದ ಕೋರ್ಸ್‌ಗೆ ಹಾಜರಾಗುವುದನ್ನು ಕಡ್ಡಾಯ ಮಾಡಲಾಗಿತ್ತು. ಆದರೆ 2012 ರಲ್ಲಿ ಜನಸಂಖ್ಯಾ ಹೆಚ್ಚಳಕ್ಕೆ ಒತ್ತು ನೀಡುವ ಯೋಜನೆಗಳನ್ನು ಘೋಷಿಸಲಾಯಿತು.

**ಲಿಂಗಾನುಪಾತ:** ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆಯ 2015 ರ ಮಾರ್ಚ್ ವರದಿ ಅನ್ವಯ ಜಗತ್ತಿನ ಲಿಂಗಾನುಪಾತ 98.33 ಅಂದರೆ 100 ಪುರುಷರಿಗೆ 98.33 ಮಹಿಳೆಯಿರಿದ್ದಾರೆ. ಜಗತ್ತಿನಲ್ಲಿ ಅತಿ ಹೆಚ್ಚು ಲಿಂಗಾನುಪಾತ ಹೊಂದಿರುವ ರಾಷ್ಟ್ರ ಕುರಸಾವೊ ಇಲ್ಲಿ ಪುರುಷ– ಮಹಿಳೆ ಅನುಪಾತ 100:121.8.

**ದ್ವಿತೀಯ ಸ್ಥಾನದಲ್ಲಿರುವ ಲಾಟ್ವಿಯಾದಲ್ಲಿ ಪುರುಷ :** ಮಹಿಳೆ ಅನುಪಾತ 100:118.5. ಅತಿ ಕಡಿಮೆ ಲಿಂಗಾನುಪಾತ ಹೊಂದಿರುವ ರಾಷ್ಟ್ರ ಕತಾರ್, ಅನುಪಾತ 100:30.

ಲಿಂಗಾನುಪಾತ ಪಟ್ಟಿಯಲ್ಲಿ ಭಾರತ 192 ನೇ ಸ್ಥಾನದಲ್ಲಿದ್ದು, ಅನುಪಾತ 100:94. ಜನಸಂಖ್ಯೆಯಲ್ಲಿ ವಿಶ್ವದ ಅತಿದೊಡ್ಡ ರಾಷ್ಟ್ರ ಚೀನಾ 193 ನೇ ಸ್ಥಾನದಲ್ಲಿದ್ದು, 100 ಪುರುಷರಿಗೆ 92.86 ಮಹಿಳೆಯರಿದ್ದಾರೆ.

**ಜನಸಂಖ್ಯಾ ನಿಯಂತ್ರಣ ಅಥವಾ ಸಮತೋಲನ ಕ್ರಮಗಳು**

ಏರುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸಲು ಅಥವಾ ಸಮತೋಲನದಲ್ಲಿಡಲು ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಕುಡಿಯುವ ನೀರಿನಿಂದ ಹಿಡಿದು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ರಾಷ್ಟ್ರೀಯ ಜನಸಂಖ್ಯಾ ನೀತಿಯಲ್ಲಿ ನಮೂದಿಸಲಾಗಿರುವ ವಿವಿಧ ಗುರಿಗಳ ಸಾಧನೆಯ ದೃಷ್ಟಿಯಿಂದ ಕಾರ್ಯಕ್ರಮ ಅನುಷ್ಠಾನಕ್ಕೆ ಹೆಚ್ಚಿನ ಆದ್ಯತೆ ನೀಡಿ ಹಣಕಾಸು ಸಂಪನ್ಮೂಲಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಬೇಕಾಗಿದೆ. ಪ್ರಸೂತಿ ಪೂರ್ವ ಹಾಗೂ ನಂತರದ ಶುಶ್ರೂಷೆ ರೋಗನಿರೋಧಕ ಚುಚ್ಚುಮದ್ದು, ಗರ್ಭನಿರೋಧಕ, ಸಾಧನಗಳ ಹಂಚಿಕೆಗಾಗಿ ಹೆಚ್ಚಿನ ಹಣ ವೆಚ್ಚವಾಗುವುದು. ವೈದ್ಯಕೀಯ ಮೂಲ ಸೌಲಭ್ಯಗಳನ್ನು ಒದಗಿಸಲು ಹಣ ಸಮಸ್ಯೆಯಾಗಬಾರದು, ಕುಟುಂಬ ಕಲ್ಯಾಣ ಇಲಾಖೆಗಳ ವಾರ್ಷಿಕ ವೆಚ್ಚವನ್ನು ದ್ವಿಗುಣಗೊಳಿಸಿದರೂ ಸಮಂಜಸ.

ಕುಟುಂಬ ನಿಯಂತ್ರಣಕ್ಕಾಗಿ ಈ ಕೆಳಕಂಡ ಹಲವು ಪ್ರೋತ್ಸಾಹಕಾರಿ ಕ್ರಮಗಳನ್ನು ಕೈಗೊಳ್ಳಲಾಗುವುದು

- ಸಣ್ಣ ಕುಟುಂಬ, ಶಿಶುಮರಣ ಹಾಗೂ ಜನನ ಪ್ರಮಾಣವನ್ನು ಕಡಿಮೆ ಮಾಡುವ ವಿಷಯದಲ್ಲಿ ಅತ್ಯುತ್ತಮ ಸಾಧನೆ ಗಳಿಸುವ ಗ್ರಾಮ ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ಗಳಿಗೆ ಬಹುಮಾನಗಳನ್ನು ನೀಡಲಾಗುವುದು.
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಆಶ್ರಯದಲ್ಲಿರುವ ಬಾಲಿಕಾ ಸಮೃದ್ಧ ಯೋಜನೆಯನ್ನು ಮುಂದುವರಿಸಲಾಗುವುದು. ಹುಟ್ಟಿದ ಪ್ರತಿ ಹೆಣ್ಣು ಮಗುವಿಗೆ ತಲಾ 500/– ರೂಪಾಯಿಗಳ ಪ್ರೋತ್ಸಾಹ ಧನವನ್ನು ನೀಡಲಾಗುವುದು.
- ಗ್ರಾಮಾಂತರ ಅಭಿವೃದ್ಧಿ ಇಲಾಖೆ ಹಮ್ಮಿಕೊಂಡಿರುವ ಪ್ರಸೂತಿ ಸೌಲಭ್ಯ ಯೋಜನೆಯನ್ನು ಮುಂದುವರಿಸಲಾಗುವುದು. 19ರ ವಯಸ್ಸಿನ ನಂತರ ಮೊದಲು ಮಗುವನ್ನು ಹೆತ್ತ ಪ್ರತೀ ಮಹಿಳೆಗೆ 500/– ರೂಪಾಯಿಗಳ ಪ್ರೋತ್ಸಾಹ ಧನವನ್ನು ನೀಡಲಾಗುವುದು.
- ಕುಟುಂಬ ಕಲ್ಯಾಣಕ್ಕೆ ಸಂಬಂಧಿಸಿದಂತೆ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತರಲಾಗುವುದು. ಬಡತನ ರೇಖೆಗಿಂತ ಕೆಳಗಿರುವ, ಎರಡು ಮಕ್ಕಳನ್ನು ಹೊಂದಿರುವ ದಂಪತಿಗಳ ಕುಟುಂಬ ಯೋಜನಾ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡರೆ ಅಂತಹ ವ್ಯಕ್ತಿಗಳ ವಿಮಾ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.
- ವಿವಾಹ ವಯೋಮಿತಿ ಸಂಬಂಧಿಸಿದ ಕಾನೂನನ್ನು ಅನುಸರಿಸಿದ ಮಹಿಳೆ 21 ವಯಸ್ಸಿನ ನಂತರ ಮಗುವನ್ನು ಹೆತ್ತ ಸಂದರ್ಭದಲ್ಲಿ ಹಾಗೂ ಅಂತಹ ದಂಪತಿ, ಕುಟುಂಬ ಯೋಜನಾ ವಿಧಾನಗಳನ್ನು ಅಳವಡಿಸಿಕೊಂಡರೆ ಅಂತಹವರಿಗೂ ಪ್ರೋತ್ಸಾಹ ಧನವನ್ನು ನೀಡಲಾಗುವುದು.
- ಗ್ರಾಮ ಪಟ್ಟಣದಲ್ಲಿ ವೈದ್ಯಕೀಯ ನೆರವನ್ನು ಒದಗಿಸುವ ಸಲುವಾಗಿ ವಿಶೇಷ ನಿಧಿಯನ್ನು ಸ್ಥಾಪಿಸಲಾಗಿದೆ.
- ಶಿಶುವಿಹಾರ ಮತ್ತು ಶಿಶುಸಂರಕ್ಷಣಾ ಕೇಂದ್ರಗಳನ್ನು ನಗರದ ಕೊಳಚೆ ಪ್ರದೇಶಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ತೆರಯಲಾಗುವುದು.
- ಕುಟುಂಬ ಯೋಜನೆಗಳನ್ನು ಅನುಸರಿಸಲು ವಿವಿಧ ಗರ್ಭ ನಿರೋಧಕ ವಿಧಾನಗಳನ್ನು ಅರ್ಹ ದಂಪತಿಗಳಿಗೆ ದೊರಕುವಂತೆ ಮಾಡಲಾಗುವುದು.
- ಸುರಕ್ಷಿತ ಗರ್ಭಪಾತಕ್ಕೆ ಕ್ರಮ ಕೈಗೊಳ್ಳಲಾಗುವುದು.
- ಜನತೆಗೆ ಎಟುಕುವ ರೀತಿ ವೈದ್ಯಕೀಯ ಮತ್ತು ಆರೋಗ್ಯ ಸೇವಾ ಸೌಲಭ್ಯಗಳನ್ನು ಒದಗಿಸುವುದು. ಆಂಬುಲೆನ್ಸ್ ಸೌಲಭ್ಯದ ದೃಷ್ಟಿಯಿಂದ ಸ್ಥಳೀಯ ಉದ್ಯಮಿಗಳಿಗೆ ಸಾಲ ನೆರವನ್ನು ನೀಡುವುದು.

ಮಾನವ ಸಂಪನ್ಮೂಲವನ್ನು ರಚನಾತ್ಮಕ ದಿಕ್ಕಿನಲ್ಲಿ ಬಳಸಿಕೊಂಡರೆ ಅಭಿವೃದ್ಧಿಯ ಹೊಸ ಮಜಲುಗಳನ್ನು ತಲುಪಬಹುದು. ಈ ನಿಟ್ಟಿನಲ್ಲಿ ಚೀನಾ, ಹೆಜ್ಜೆ ಇಟ್ಟು ಮಾದರಿಯಾಗಿದೆ. ಭಾರತ ಕೂಡ ಅದೇ ಹಾದಿಯಲ್ಲಿದೆ.



# ಕೃಷಿ ಅಭಿಯಾನ

ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ...

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಕೃಷಿ ಇಲಾಖೆಯ ಯೋಜನೆಗಳ ಕುರಿತು ರೈತರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಕೃಷಿ ಅಭಿಯಾನ ಕಾರ್ಯಕ್ರಮವನ್ನು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹಮ್ಮಿಕೊಂಡಿದೆ. ರೈತರಿಗೆ ಆಧುನಿಕ ಹಾಗೂ ಸುಧಾರಿತ ಕೃಷಿ ಪದ್ಧತಿಗಳ ಪರಿಚಯ , ಸಬ್ಸಿಡಿ ದರದಲ್ಲಿ ಸಿಗುವ ಬಿತ್ತನೆ ಬೀಜ, ಗೊಬ್ಬರಗಳ ಕುರಿತು ಮಾಹಿತಿ, ಕೃಷಿ ಯಂತ್ರೋಪಕರಣ ಬಾಡಿಗೆಗೆ ಪಡೆಯುವ ಸವಲತ್ತು, ಕೃಷಿ ಹೊಂಡ ನಿರ್ಮಾಣ ಕುರಿತು ಜಾಗೃತಿಯನ್ನು ರೈತರಲ್ಲಿ ಮೂಡಿಸುವ ಕೆಲಸವನ್ನು ಕೃಷಿ ಅಭಿಯಾನದ ಮೂಲಕ ಇಲಾಖೆ ಹಮ್ಮಿಕೊಂಡಿದೆ. ಮಾನ್ಯ ಮುಖ್ಯಮಂತ್ರಿಗಳು ಕೃಷಿ ಅಭಿಯಾನಕ್ಕೆ ಬೆಂಗಳೂರಿನಲ್ಲಿ ವಿಧಾನಸೌಧದ ಮುಂಭಾಗದಲ್ಲಿ ಚಾಲನೆ ನೀಡಿದರು.







# ಮಕ್ಕಳ ಕಲಿಕೆಗೆ ಹೊಸ ಚೇತನವಾದ 'ರಚನಾವಾದ'




ರಚನಾತ್ಮಕ ವಾದದಲ್ಲಿ ಕಲಿಕೆಯನ್ನು "ಜ್ಞಾನ ಕಟ್ಟಿಕೊಳ್ಳುವ" ಪ್ರಕ್ರಿಯೆ ಎಂದು ಅರ್ಥೈಸಿಕೊಳ್ಳಬಹುದು. ಈ ಪ್ರಕ್ರಿಯೆಯಲ್ಲಿ ಮಗು ಎಷ್ಟು ಕಲಿಯಿತು ? ಎನ್ನುವುದಕ್ಕಿಂತಲೂ ಮಗು ಹೇಗೆ ಕಲಿಯಿತು ? ಎನ್ನುವುದು ಮುಖ್ಯವಾಗುತ್ತದೆ. ನಮ್ಮ ವಿದ್ಯಾರ್ಥಿಗಳು ಮಾಹಿತಿಯನ್ನು ಕಲಿಯಬೇಕು. ಅವನ್ನು ತಮ್ಮದಾದ ಜ್ಞಾನವನ್ನಾಗಿಸಿಕೊಳ್ಳಬೇಕು. ಆ ಜ್ಞಾನಕ್ಕೆ ಒಂದು ಸಾರ್ವತ್ರಿಕ ಪ್ರಸ್ತುತತೆ ಇರಬೇಕು. ಅಂತಹ ಜ್ಞಾನದ ಗಳಿಕೆಯೇ ನಿಜವಾದ ಕಲಿಕೆ. ಅಂತಹ ಜ್ಞಾನ ಗಳಿಕೆಯನ್ನು ಅನುಕೂಲಿಸುವುದೇ ತರಗತಿ ಶಿಕ್ಷಣದ ಮೂಲ ಆಶಯ

▪ ಪರಮೇಶ್ವರಯ್ಯ ಸೊಪ್ಪಿಮಠ

ಮಕ್ಕಳ ಶಿಕ್ಷಣ ಹಕ್ಕು ಜಾರಿಯಾಗಿದೆ. ಶಿಕ್ಷಣ ಇಲಾಖೆಯಲ್ಲಿ ದಿನಮಾನಕ್ಕೆ ತಕ್ಕಂತೆ ಬದಲಾವಣೆಯ ಅಲೆ ಜೋರಾಗಿ ಬೀಸುತ್ತಲಿದೆ. ಅನೇಕ ನವೀನ ಯೋಜನೆಗಳು ರೂಪಗೊಂಡು ಅನುಷ್ಠಾನಗೊಳ್ಳುತ್ತಿವೆ. ಇವೆಲ್ಲವುಗಳ ಮೂಲ ಆಶಯವೆಂದರೆ ಮಗುವಿನಲ್ಲಿ ಅಪೇಕ್ಷಿತ ಬದಲಾವಣೆಯಾಗಬೇಕು. ಅಂದರೆ ಶಾಲೆಗೆ ಬಂದ ಮಗು ತನ್ನ ವಯಸ್ಸಿಗೆ ಅನುಗುಣವಾಗಿ ಬೆಳವಣಿಗೆ ಹೊಂದುವುದರ ಜೊತೆಗೆ ಅದನ್ನು ಬಲಪಡಿಸುವುದೇ ಆಗಿದೆ.



ವಿದ್ಯಾರ್ಥಿಯು ಶಾಲೆಯಲ್ಲಿ ಕಲಿಯುವ ವರ್ಷಗಳು ಬದುಕಿನುದ್ದಕ್ಕೂ ಆನಂದದ ನೆನಪಾಗಿ ಉಳಿಯಬೇಕು. ಶಿಕ್ಷಣ ಮತ್ತು ಕಲಿಕೆಗಳು ಅಖಂಡ ಪ್ರಕ್ರಿಯೆಗಳಾಗಬೇಕು. ಶಿಕ್ಷಣ ಪುಸ್ತಕಗಳಿಂದಷ್ಟೆ ಅಲ್ಲ, ನೆನಪಿನಂಗಳದಿಂದಷ್ಟೆ ಅಲ್ಲ, ನೋಡುವುದರಿಂದ, ಕೇಳುವುದರಿಂದ, ಪುಸ್ತಕಗಳು ಏನು ಹೇಳುತ್ತವೆ ಅವುಗಳಲ್ಲಿ ಸತ್ಯಾಂಶವೆಷ್ಟು, ಮಿಥ್ಯಾಂಶವೆಷ್ಟು ಎಂದೆಲ್ಲಾ ವಿವೇಚಿಸುವುದರಿಂದಲೂ ದೊರಕುತ್ತದೆ. ಹೂವಿನಂತ ಮಕ್ಕಳನ್ನು ಬಲವಂತದಿಂದ ಅರಳಿಸಬಾರದು. ಅವರು ಸಹಜವಾಗಿ ಅರಳಲು ಅವಕಾಶ ಕೊಡಬೇಕು. ಕಲಿಕೆ ಎನ್ನುವುದು ಅವರಿಗೆ ಆನಂದದಾಯಕ ಚಟುವಟಿಕೆಯಾಗಬೇಕು. ಅವರ ಮೆದುಳು ನಿರರ್ಥಕ, ನಿರುಪಯುಕ್ತ ಮಾಹಿತಿಗಳನ್ನು ಗುಡ್ಡೆ ಹಾಕುವ ಕಸದ ಬುಟ್ಟಿಯಲ್ಲ. ಯಾವುದು ಮಕ್ಕಳಿಗೆ ರುಚಿಸುವುದಿಲ್ಲವೋ, ಉಪಯುಕ್ತ ಎನಿಸುವುದಿಲ್ಲವೋ ಅವುಗಳ ಬಗ್ಗೆ ಅವರಿಗೆ ಆಸಕ್ತಿ ಇರುವುದಿಲ್ಲ. ಎಲ್ಲಿ ಆಸಕ್ತಿ ಇರುವುದಿಲ್ಲವೋ ಅಲ್ಲಿ ಕಲಿಕೆ ನಡೆಯುವುದಿಲ್ಲ.

ಈ ಹಿನ್ನೆಲೆಯಲ್ಲಿ ಅನೇಕ ಸಂಶೋಧನೆಗಳು, ಅಧ್ಯಯನಗಳು, ವರದಿಗಳು ಬೆಳಕು ಚೆಲ್ಲುತ್ತಲೇ ಇವೆ. ಸಂಶೋಧನೆ ಅಥವಾ ಅಧ್ಯಯನಗಳಿಂದ ಶಿಕ್ಷಣದ ವಿವಿಧ ಪ್ರಕ್ರಿಯೆಗಳನ್ನು ಅಳೆಯಬಹುದು. ಇತ್ತೀಚಿನ ಅಧ್ಯಯನಗಳು ಮಗುವಿನ ಆಂತರಿಕ ಮಾನಸಿಕ ನೆಲೆಯಲ್ಲಿ ಆಗುವ ಸಂದಿಗ್ಧತೆಯನ್ನು ಬಾಹ್ಯ ನೆಲೆಯಲ್ಲಿ ಕಾಣುವ ಸಾಮಾಜಿಕ ಸಂದಿಗ್ಧತೆಯೊಂದಿಗೆ ಗುರುತಿಸಿದ್ದಾರೆ. ಸಾಮಾಜಿಕ ಸಂದಿಗ್ಧತೆಯು ಸಂವೇದನಾ ಸಂದಿಗ್ಧತೆಯನ್ನು ಹುಟ್ಟುಹಾಕಬಲ್ಲದು ಎಂದು ಈ ಅಧ್ಯಯನಗಳು ಪ್ರತಿಪಾದಿಸಿವೆ. ತರಗತಿಯಲ್ಲಿ ಮುಕ್ತ ಸಂವಾದ ಹಾಗೂ ವಿಚಾರ ವಿನಿಮಯವನ್ನು ಉತ್ತೇಜಿಸಲು ಇದೇ ಕಾರಣವನ್ನು ಪಿಯಾಜೆ ಪ್ರಭಾವಿತ ಶಿಕ್ಷಣ ತಜ್ಞರೂ ಬಳಸುತ್ತಿದ್ದಾರೆ. ಇಂತಹ ನೂತನ ವಿಧಾನಗಳನ್ನು ಅಳವಡಿಸಿಕೊಳ್ಳುವುದರಿಂದ ಶಿಕ್ಷಣದ ಗುಣಮಟ್ಟ ಹೆಚ್ಚಳದ ಕೂಗಿಗೆ ಬಲ ಬರುತ್ತದೆ.

ಶಿಕ್ಷಣದ ಗುಣಮಟ್ಟಕ್ಕೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005 ಹಾಗೂ ಶಿಕ್ಷಣ ಹಕ್ಕು–2009 ಹೆಚ್ಚು ಆದ್ಯತೆ ನೀಡಿವೆ. ಶಾಲಾ ವಯಸ್ಸಿನ ಎಲ್ಲಾ ಮಕ್ಕಳೂ ಶಾಲೆಗೆ ಬರುವಂತಾಗಿ ಆ ಹಂತದ ಕಲಿಕೆಯನ್ನು ಯಶಸ್ವಿಗೊಳಿಸಬೇಕು. ಅದರಿಂದ ಕಲಿಕೆಯನ್ನು ಬಲಗೊಳಿಸಲು ಮಹತ್ವದ ಬದಲಾವಣೆಗಳನ್ನು ಕಲಿಕಾ ಪರಿಸರದಲ್ಲಿ ಕಾಣುತ್ತಿದ್ದೇವೆ. ಇಂತಹ ಮಹತ್ವಗಳಲ್ಲಿ ರಚನಾತ್ಮಕ ಕಲಿಕೆ ಇಂದು ಹೆಚ್ಚು ಮೌಲ್ಯ ಪಡೆಯುತ್ತಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸಂರಚನಾತ್ಮಕ ಕಲಿಕಾ ವಿಧಾನವನ್ನು (constructivism approach)ಬಳಸುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದೆ.

ರಚನಾತ್ಮಕ ವಾದದಲ್ಲಿ ಕಲಿಕೆಯನ್ನು "ಜ್ಞಾನ ಕಟ್ಟಿಕೊಳ್ಳುವ" ಪ್ರಕ್ರಿಯೆ ಎಂದು ಅರ್ಥೈಸಿಕೊಳ್ಳಬಹುದು. ಈ ಪ್ರಕ್ರಿಯೆಯಲ್ಲಿ ಮಗು ಎಷ್ಟು ಕಲಿಯಿತು ? ಎನ್ನುವುದಕ್ಕಿಂತಲೂ ಮಗು ಹೇಗೆ ಕಲಿಯಿತು ? ಎನ್ನುವುದು ಮುಖ್ಯವಾಗುತ್ತದೆ. ನಮ್ಮ ವಿದ್ಯಾರ್ಥಿಗಳು ಮಾಹಿತಿಯನ್ನು ಕಲಿಯಬೇಕು. ಅವನ್ನು ತಮ್ಮದಾದ ಜ್ಞಾನವನ್ನಾಗಿಸಿಕೊಳ್ಳಬೇಕು. ಆ ಜ್ಞಾನಕ್ಕೆ ಒಂದು ಸಾರ್ವತ್ರಿಕ ಪ್ರಸ್ತುತತೆ ಇರಬೇಕು. ಅಂತಹ ಜ್ಞಾನದ ಗಳಿಕೆಯೇ ನಿಜವಾದ ಕಲಿಕೆ. ಅಂತಹ ಜ್ಞಾನ ಗಳಿಕೆಯನ್ನು ಅನುಕೂಲಿಸುವುದೇ ತರಗತಿ ಶಿಕ್ಷಣದ ಮೂಲ ಆಶಯ.

ರಚನಾವಾದಿ ತತ್ವದಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುವ ಅಭಿವ್ಯಕ್ತಿ ಇದೆ. ಮಕ್ಕಳು ತಮ್ಮ ತಮ್ಮ ಜ್ಞಾನವನ್ನು ತಮ್ಮ ತಮ್ಮದೇ ರೀತಿಗಳಲ್ಲಿ ಕಟ್ಟಿಕೊಳ್ಳುತ್ತಾರೆ. ಅಂತಹ ಕಲಿಕೆಗೆ ಅವಕಾಶ ಮಾಡಿಕೊಟ್ಟಾಗ ಆ ಕಲಿಕೆ ವ್ಯಕ್ತಿತ್ವದ ಒಂದು ಭಾಗವೇ ಆಗಿ ಬಿಡುತ್ತದೆ. ಅದಕ್ಕಾಗಿ ಕಲಿಕಾ ಅನುಭವಗಳನ್ನು ತರಗತಿಯಲ್ಲಿ ಹೇಗೆ ನೀಡಲಾಗುತ್ತಿದೆ ಎನ್ನುವುದು ಇಲ್ಲಿ ಮುಖ್ಯವಾಗುತ್ತಿದೆ. ಈ ಹಿನ್ನಲೆಯಲ್ಲಿ ನಮ್ಮ ಶಿಕ್ಷಕರಿಗೆ ತರಗತಿಯಲ್ಲಿ ರಚನಾತ್ಮಕ ಕಲಿಕೆ ಹೇಗೆ ನಡೆಸಬೇಕು ಎಂಬುದರ ಕುರಿತಾಗಿ ಕಳೆದ ಕೆಲ ವರ್ಷಗಳಿಂದ ತರಬೇತಿಯನ್ನು ನೀಡಲಾಗುತ್ತಿದೆ.

**ರಚನಾತ್ಮಕ ಕಲಿಕೆ ಎಂದರೇ. . . .** 'ರಚನಾತ್ಮಕ' ಇಂಗ್ಲಿಷ್ ಶಬ್ದ Constructivism ದ ಕನ್ನಡ ಅನುವಾದ. ತನಗೆ ತಿಳಿದಿರುವ ಜ್ಞಾನ ಅಥವಾ ಅನುಭವಗಳನ್ನು ಹೊಸ ಕಲಿಕೆ ಅಥವಾ ಪರಿಕಲ್ಪನೆಗೆ ಹೊಂದಿಸಿ ಅರಿಯುವ/ಕಲಿಯುವ ವಿಧಾನವೇ 'ರಚನಾತ್ಮಕ ಕಲಿಕಾ ವಿಧಾನ'.

**ರಚನಾತ್ಮಕ ಕಲಿಕಾ ವಿಧಾನದ ಸಾಮಾನ್ಯ ಗುಣಲಕ್ಷಣಗಳು**

- ಕಲಿಕೆ ಸುಮ್ಮನೆ ಗ್ರಹಿಸುವ ನಿರಾಸಕ್ತ ಪ್ರಕ್ರಿಯೆಯಾಗಿರದೇ





ಅದು ಆಸಕ್ತಿಯೊಂದಿಗೆ ಅರ್ಥವತ್ತಾದ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಅವಶ್ಯವಾದ ಅರ್ಥಪೂರ್ಣವಾಗಿಸುವ ಪ್ರಕ್ರಿಯೆ.

- ಹೊಸ ಕಲಿಕೆಯು ಕಲಿಯುವವನ ಪೂರ್ವಜ್ಞಾನವನ್ನೇ ಅವಲಂಬಿಸಿದೆ. ಈ ಪೂರ್ವ ಜ್ಞಾನ/ಅನುಭವವು ಕೆಲವೊಮ್ಮೆ ಹೊಸ ಸಂಗತಿಯನ್ನು ಅರ್ಥಮಾಡಿಕೊಳ್ಳಲು ಅಡ್ಡಿಯಾಗಬಾರದು.
- ಕಲಿಕೆಯು ಸಮಾಜದ ಜೊತೆ, ವಿದ್ಯಾರ್ಥಿಗಳ ಜೊತೆ ನಡೆಯುವ ಸಂವಹನ ಕಲಿಕಾ ಪ್ರಕ್ರಿಯೆಯನ್ನು ಅವಲಂಬಿಸಿದೆ.
- ಕಲಿಕೆಯಲ್ಲಿ ಅರ್ಥಪೂರ್ಣ ಕಲಿಕೆಯು ಅವನ ಕಲಿಕೆಯ ಆಸಕ್ತಿಯ ಮೇಲೆ ಅವಲಂಬಿಸಿದೆ.
- ರಚನಾತ್ಮಕ ಕಲಿಕಾ ವಿಧಾನದಲ್ಲಿ, ಜ್ಞಾನ ರಚನೆ ಮತ್ತು ಬಹು ಆಯಾಮದ ಕಲಿಕೆಯು ಕಲಿಕಾ ಪರಿಸರದ ಮೇಲೆ



ಅವಲಂಬಿತವಾಗಿದೆ. ಕಲಿಕಾರ್ಥಿಯು ಪರಿಕಲ್ಪನೆಯ ಪರಿಪಕ್ವತೆಗೆ ಬೇರೆ ಬೇರೆ ಹಾದಿ/ಆಯಾಮದಲ್ಲಿ ವಿಚಾರಶೀಲರಾಗಿರಬೇಕು. ಈ ನಿಟ್ಟಿನಲ್ಲಿ ನೀಡುವ ವಿವರಣೆಗಳಿಗೆ ಶಿಕ್ಷಕರು/ಅನುಕೂಲಿಸುವವರು ನಮ್ಯವಾಗಿ ಸ್ಪಂದನೆ ನೀಡುತ್ತಾ ಸರಿಯಾದ ದಿಕ್ಕಿನಲ್ಲಿ ಕಲಿಕೆಯನ್ನು ಮುಂದುವರೆಸುವಂತೆ ಪ್ರೇರೇಪಿಸಬೇಕು.

- ಕಲಿಕೆಯು ರಚನಾತ್ಮಕ ವಿಧಾನದಲ್ಲಿ ಆಗಬೇಕಾದರೆ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಥವಾ ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಂಶಗಳೆಂದರೆ,
- ಕಲಿಕೆಯು ವಿಶ್ವಾಸಾರ್ಹವಾದ ಹಾಗೂ ನಿಜ ಜೀವನದ ವಾಸ್ತವಕ್ಕೆ ಸಂಬಂಧಿಸಿದ ಪರಿಸರಕ್ಕೆ ಹೊಂದಿಕೊಂಡಿರಬೇಕು.
- ಕಲಿಕೆಯು ಸಾಮಾಜಿಕ ಮತ್ತು ನೈತಿಕತೆಯ ತಳಹದಿಯಲ್ಲಿ ಒಳಗೊಂಡಿರಬೇಕು.
- ಕಲಿಕಾಂಶವು ಹಾಗೂ ಕೌಶಲವು ಕಲಿಕಾರ್ಥಿಯ ಹಿಂದಿನ ಜ್ಞಾನದ ಚೌಕಟ್ಟಿನಲ್ಲಿರಬೇಕು.
- ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ರೂಪಣಾತ್ಮಕವಾಗಿ ಮುಂದಿನ ಕಲಿಕೆಗೆ ಅನುಕೂಲವಾಗುವಂತೆ ಮಾಡಬೇಕು.
- ವಿದ್ಯಾರ್ಥಿಗಳು ಸ್ವ–ನಿಯಂತ್ರಣ, ಸ್ವ–ಕಲಿಕೆ, ಸ್ವ–ಅವಲೋಕನ ಮಾಡುವುದನ್ನು ಉತ್ತೇಜಿಸಬೇಕು.
- ಶಿಕ್ಷಕರು ವಿದ್ಯಾರ್ಥಿಗಳ ಕಲಿಕೆಗೆ ಸಹಾಯ ಮಾಡಬೇಕೇ ಹೊರತು ಕಲಿಕಾಂಶವನ್ನು ನೇರವಾಗಿ ಪಾಠ ಮಾಡುವಂತಿಲ್ಲ.
- **ಐದು E ಗಳ ಮಾದರಿ:–** ರಚನಾತ್ಮಕ ಕಲಿಕಾ ವಿಧಾನಗಳು ಸಾಕಷ್ಟಿದ್ದು, ಒಂದು ಐದು E ಗಳ ಮಾದರಿ. ಈ ಮಾದರಿಗಳ ಸಹಾಯದಿಂದ ರಚನಾತ್ಮಕ ಕಲಿಕಾ ವಿಧಾನದ ಬಗ್ಗೆ ತಿಳಿದುಕೊಳ್ಳಬಹುದು. ಐದು E ಗಳನ್ನು ನೋಡುವುದಾದರೆ, 1) Engage ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು. 2) Explore ಆವಿಷ್ಕಾರ/ಪತ್ತೆ ಹಚ್ಚುವಿಕೆ. 3) Express/Explain ಸ್ಪಷ್ಟಪಡಿಸು/ವಿವರಣೆ 4) Expand/Exaborate ವಿಸ್ತರಣೆ ಹಾಗೂ ದೃಢೀಕರಣ. 5) Evaluation ಮೌಲ್ಯಮಾಪನ.

**ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು(Engage):** ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಬೇಕಾದರೆ ಅವರಿಗೆ ಆ ಕಲಿಕೆಯಲ್ಲಿ ಆಸಕ್ತಿಯನ್ನು ಹೊಂದುವಂತೆ ಮಾಡಬೇಕು. ಹೀಗೆ ಮಾಡಬೇಕಾದರೆ ನಿಜಜೀವನದ ಸಮಸ್ಯಾತ್ಮಕ ಸಂದರ್ಭ ನೀಡುತ್ತಾ, ಅವರನ್ನು ಆ ಮುಖಾಂತರ ಚಟುವಟಿಕೆಯಲ್ಲಿ ತೊಡಗಿಸಬೇಕು. ಅಲ್ಲಿ ಅರ್ಥಪೂರ್ಣ ಚರ್ಚೆಗೆ ಆಸ್ಪದ ಮಾಡಿಕೊಡುವ ಪ್ರಶ್ನೆಯನ್ನು ಕೇಳುವುದರ ಮುಖಾಂತರ ಅವರನ್ನು ಉತ್ತೇಜಿಸುವುದು. ಈ ರೀತಿ ಮಕ್ಕಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ಮೊದಲನೆ ಹಂತವಾಗಿದೆ.

**ಆವಿಷ್ಕಾರ (Explore) :** ಈ ಹಂತದಲ್ಲಿ ಮಗುವು ಕಲಿಕೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಪರಿಕಲ್ಪನೆಯನ್ನು ಆವಿಷ್ಕರಿಸುವ ಮೂಲಕ ಹೆಚ್ಚಿನ ಜ್ಞಾನ ಪಡೆಯಲು ಹಾಗೂ ತನ್ನ ಜ್ಞಾನವನ್ನು ಸಂರಚಿಸಿಕೊಳ್ಳುತ್ತದೆ. ಅದಕ್ಕಾಗಿ ಕೆಲವು ಚಟುವಟಿಕೆಗಳನ್ನು ಶಿಕ್ಷಕರು ರೂಪಿಸಬೇಕಾಗುತ್ತದೆ. ಮಕ್ಕಳಿಗೆ ಸಂರಚಿಸಿದ ಚಟುವಟಿಕೆಗಳನ್ನು ನೀಡುತ್ತಾ, ಗುಂಪಿನಲ್ಲಿ ಕಲಿಯುವಂತೆ ಪ್ರೇರೇಪಿಸಲಾಗುತ್ತದೆ. ಕಲಿಕಾ ಸಾಮಗ್ರಿಗಳ ಬಳಕೆಗೆ ಅವಕಾಶ ನೀಡುವುದರ ಜೊತೆಗೆ ಅವರ ಅನ್ವೇಷಣೆ/ವಿಚಾರಗಳನ್ನು ಕಲಿಕಾ ಭಾಗವಾಗಿ ಮನವರಿಕೆ ಮಾಡಲು ಪ್ರೇರೇಪಿಸಲಾಗುತ್ತದೆ. ಸಮಸ್ಯೆಗಳಿಗೆ ಪರಿಹಾರದ ಹಂತಗಳನ್ನು ಗುರುತಿಸುವುದು ಈ ಹಂತದ ಪ್ರಮುಖ ಉದ್ದೇಶವಾಗಿದೆ.

**ಸ್ಪಷ್ಟಪಡಿಸು/ವಿವರಿಸು (Express/Explain):** ಕಲಿಕಾರ್ಥಿಯು ಹಿಂದಿನ ಹಂತದಲ್ಲಿ ಸಂರಚಿಸಿಕೊಂಡ ಜ್ಞಾನದ ವಿವರಣೆಯನ್ನು ಮಾತನಾಡುವ ಭಾಷೆಯಲ್ಲಿ ಸ್ಪಷ್ಟಪಡಿಸುತ್ತಾನೆ. ಕಲಿಕಾರ್ಥಿಯು ನೀಡುವ ವಿವರಣೆಯಲ್ಲಿನ ಪರಿಕಲ್ಪನೆಯ ಪರಿಪಕ್ವತೆಗೆ ಶಿಕ್ಷಕರು/ಅನುಕೂಲಿಸುವವರು ನಮ್ಯವಾದ ಸ್ಪಂದನೆ ನೀಡುತ್ತಾ ಸರಿಯಾದ ದಿಕ್ಕಿನಲ್ಲಿ ಕಲಿಕೆ ಮುಂದುವರೆಸುವಂತೆ ಪ್ರೋತ್ಸಾಹಿಸುತ್ತಾರೆ. ಉದಾಹರಣೆಗೆ ಸಂರಚನೆ ಮಾಡಿಕೊಂಡ ಜ್ಞಾನದ ವಿವರಣೆ ನೀಡುವುದು, ಮಾದರಿಯನ್ನು ರಚಿಸಿ–ವಿವರಣೆ ನೀಡುವುದು. ಸಮಸ್ಯೆಗೆ ನೀಡಿದ ಪರಿಹಾರವನ್ನು ಮತ್ತೆ



ಮತ್ತೆ ಪರಿಶೀಲಿಸಿ, ವಿಶ್ಲೇಷಣೆ ಮಾಡುವುದು. ವಿಚಾರಗಳನ್ನು ಚಿತ್ರ ಹಾಗೂ ನಕ್ಷೆಗಳಲ್ಲಿ ತೋರಿಸುವುದು. ಸಾಂಕೇತಿಕವಾಗಿ ತಿಳಿಸಬೇಕಾದ ವಿಷಯಗಳನ್ನು ಸೂಚಿಸುವುದು. ಮೌಖಿಕ ಹಾಗೂ ಬರಹ ರೂಪದ ವರದಿ ನೀಡುವುದು

**ವಿಸ್ತರಣೆ ಹಾಗೂ ದೃಢೀಕರಣ (Expand/Elaborate):** ಈ ಹಂತದಲ್ಲಿ ಸಂರಚಿಸಿದ ಜ್ಞಾನವನ್ನು ಹೆಚ್ಚಿಸುವ ಕಾರ್ಯವಾಗುತ್ತದೆ. ಸಂರಚಿತವಾದ ಜ್ಞಾನವನ್ನು ಇತರ ಜ್ಞಾನ/ಕಲಿಕಾ ಅನುಭವಗಳ ಜೊತೆಗೆ ಸಂಯೋಜಿಸಲಾಗುತ್ತದೆ. ಜ್ಞಾನದ ತಿಳುವಳಿಕೆಯನ್ನು ನಿತ್ಯ ಜೀವನದ ಸಂದರ್ಭದಲ್ಲಿ ಅನ್ವಯಿಸಿ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಕಲಿಕಾರ್ಥಿಯು ಜ್ಞಾನ ಮತ್ತು ಕೌಶಲವನ್ನು ಅನ್ವಯಿಸುತ್ತಾ, ಜ್ಞಾನ ಮತ್ತು ಕೌಶಲಗಳನ್ನು ಅಗತ್ಯಕ್ಕೆ ತಕ್ಕಂತೆ ಬದಲಾಯಿಸುತ್ತಾರೆ. ಸಂದೇಶ/ವಿಷಯಗಳನ್ನು ಮತ್ತು ಅಭಿಪ್ರಾಯ/ಯೋಚನೆಗಳನ್ನು ಹಂಚಿಕೊಳ್ಳುವುದರ ಜೊತೆಗೆ ಪೂರಕವಾದ ಹೊಸ ಹೊಸ ಪ್ರಶ್ನೆಗಳನ್ನು ಕೇಳುವ ಮನೋಭಾವ ವೃದ್ಧಿಸುವುದಾಗಿದೆ.

**ಮೌಲ್ಯಮಾಪನ (Evaluation):** ಕಲಿಕೆಯ ಪ್ರತಿ ಹಂತದಲ್ಲಿಯೂ ಕಲಿಕಾರ್ಥಿಯು ಜ್ಞಾನ ಸಂಯೋಜನೆಯು ಯಾವ ಮಟ್ಟದಲ್ಲಿ ಆಗಿದೆ ಎಂಬುದರ ಮೌಲ್ಯಮಾಪನ ಮಾಡುವುದು ಈ ಹಂತದ ಕೆಲಸ. ಅದಕ್ಕಾಗಿ ನೂತನವಾಗಿ ಜಾರಿಗೆ ಬಂದಿರುವ ಸಿಸಿಇ ಯನ್ನು ಅಳವಡಿಸುವುದು. ಅದರಲ್ಲಿ ಮಗು ಹೇಗೆ ಕಲಿಕೆಯಲ್ಲಿ ತೊಡಗಿಸಿಕೊಳ್ಳುತ್ತಿದೆ ಎಂಬುದನ್ನು ಗಮನಿಸುತ್ತಾ, ಸಮಸ್ಯೆ ಹಾಗೂ ಯೋಜನೆ ಒಳಗೊಂಡ ಕಲಿಕಾ ವಸ್ತುಗಳನ್ನು ನೀಡಲಾಗುತ್ತದೆ. ಕಲಿಕಾರ್ಥಿ ಸಂದರ್ಶನ ನಡೆಸುವುದು. ವಿವಿಧ ಸಾಧನ ತಂತ್ರಗಳನ್ನು ಬಳಸುವುದು. ಮುಂದಿನ ಕಲಿಕೆಗೆ ನೆರವಾಗುವಂತ ಮುಕ್ತ ಕಲಿಕಾ ಪ್ರಶ್ನೆಗಳನ್ನು ನೀಡುವುದು ಇಂತಹ ಇತರೆ ಚಟುವಟಿಕೆಗಳಿಂದ ಮಕ್ಕಳ ಕಲಿಕೆಯನ್ನು ಖಚಿತವಾಗಿ ಗುರುತಿಸಲಾಗುವುದು.

ಯಾವುದೇ ತರಗತಿಯಲ್ಲಾಗಲಿ ಮಗುವಿಗೆ ಬೋಧನೆ ಮಾಡುವಾಗ ಒಂದು ವಿಷಯವನ್ನು ಮರೆಯುವಂತಿಲ್ಲ. ಮಗುವಿನಲ್ಲಿ ಸೂಕ್ತ ಸಿದ್ಧತೆ ಇದ್ದರೆ ಮಾತ್ರ, ಅದು ಅಗತ್ಯ ವಿನ್ಯಾಸ ಹೊಂದಿದ್ದರೆ ಮಾತ್ರ ಬೋಧನೆ ಸಾಧ್ಯ. ಇಲ್ಲವಾದರೆ ನಾವು ಹೇಳಿಕೊಡಲು ಇಚ್ಛಿಸುವ ವಿಷಯವನ್ನು ಅದು ಅರ್ಥ ಮಾಡಿಕೊಳ್ಳಲಾರದು. ನಾವು ಬೋಧನೆಗಳ ಮೂಲಕ ಆ ಮಗುವಿನ ಮನಸ್ಸಿನಲ್ಲಿ ವಿನ್ಯಾಸಗಳನ್ನು ಹುಟ್ಟುಹಾಕಲು ಸಾಧ್ಯವಿಲ್ಲ. ವಿನ್ಯಾಸಗಳನ್ನು ಬದಲಾಯಿಸುವ ಪ್ರಯತ್ನವೂ ಫಲ ಕೊಡದಿರಬಹುದು. ಮಕ್ಕಳು ಈಗಾಗಲೇ ಸಿದ್ಧತೆ ಮಾಡಿಕೊಂಡಿರದ ವಿಷಯಗಳನ್ನು ಬಲವಂತವಾಗಿ ಕಲಿಸಿಕೊಡುವುದರ ಪರಿಣಾಮವನ್ನು ಇದು ಎತ್ತಿ ತೋರಿಸುತ್ತದೆ. ಮಕ್ಕಳು ಸುಮ್ಮನೆ ಹೊಂದಿಸಿಕೊಂಡು ಮಾದರಿಗಳನ್ನು ಅನುಕರಿಸುತ್ತಾ ಹೋಗಬಹುದು. ಆದರೆ ಈ ಪ್ರಕ್ರಿಯೆಗಳು ಮಕ್ಕಳ ಭಾವಗ್ರಹಣ ಬೆಳವಣಿಗೆಯನ್ನು ಪೋಷಿಸುವುದಿಲ್ಲ. ತಾರ್ಕಿಕ ಕ್ರೋಢೀಕರಣ ಹಾಗೂ ಹೊಂದಾಣಿಕೆ ಮೂಲಕ ಹೆಚ್ಚಿನ ಸಮತೋಲನಕ್ಕೆ ದಾರಿ ಮಾಡಿಕೊಡುವುದಿಲ್ಲ. ಇದು ಸಮಯ ವ್ಯರ್ಥ ಹಾಗೂ ಮಗುವಿನ ಸಹಜ ಬೆಳವಣಿಗೆಗೆ ಅಡ್ಡಿಯುಂಟುಮಾಡುತ್ತದೆ. ಇದಕ್ಕೆಲ್ಲಾ ಸೂಕ್ತವಾದ ಪರಿಹಾರವೇ ರಚನಾವಾದದ ಮೂಲಕ ಕಲಿಕೆ. ಆ ನಿಟ್ಟಿನಲ್ಲಿ ನಮ್ಮ ಎಲ್ಲಾ ಶಿಕ್ಷಣಾಸಕ್ತರು ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಬಳಸಿದಲ್ಲಿ ಅದೇ ನಾವು ನಾಳಿನ ಪ್ರಜೆಗಳಿಗೆ ಕೊಡುವ ಬಹು ದೊಡ್ಡ ಆಸ್ತಿ . . . .ಅಲ್ಲವೇ ?.

### ಬರ ಪೀಡಿತ ಕೋಲಾರ ಜಿಲ್ಲೆಯ 126 ಕೆರೆಗಳಿಗೆ ಜಲಭಾಗ್ಯ

# ಕೆ.ಸಿ ವ್ಯಾಲಿ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ



▪ ಕೆ. ಎಸ್. ಗಣೇಶ್

**ಜ**ಲ ಅಭಾವ ಜಾಗತಿಕ ಸಮಸ್ಯೆಯಾಗುತ್ತಿದೆ. ವರ್ಷಗಳು ಕಳೆದಂತೆ ಕುಡಿಯುವ ನೀರಿಗೂ ತತ್ವಾರ ಅನುಭವಿಸುತ್ತಿರುವ ದೇಶಗಳ ಸಂಖ್ಯೆಯೂ ಹೆಚ್ಚಾಗುತ್ತಲೇ ಇದೆ. ನೈಸರ್ಗಿಕವಾಗಿ ಸಿಗುತ್ತಿದ್ದ ಶುದ್ಧ ನೀರು ಇದೀಗ ಹಣವಂತರ ಸ್ವತ್ತಾಗಿದೆ. ಇಂತ ಸಂಕಷ್ಟದ ಸನ್ನಿವೇಶದಲ್ಲಿ ವಿಶ್ವದ ಅನೇಕ ರಾಷ್ಟ್ರಗಳು ನೀರಿನ ಸಂರಕ್ಷಣೆ ಮತ್ತು ಸದ್ಬಳಕೆಯ ವಿಚಾರದಲ್ಲಿ ಪರ್ಯಾಯ ಯೋಜನೆಗಳತ್ತ ಚಿಂತನೆ ನಡೆಸುತ್ತಿವೆ. ಭೂಮಿಗೆ ಬೀಳುವ ಪ್ರತಿ ಹನಿ ಮಳೆ ನೀರನ್ನು ಜತನದಿಂದ ಕಾಪಾಡಿಕೊಳ್ಳಬೇಕು, ಲಭ್ಯವಿರುವ ನೀರಿನ ಮೂಲಗಳನ್ನು ಸಂರಕ್ಷಿಸಬೇಕು, ನೀರಿನ ಬಳಕೆಯನ್ನು ಮಿತಗೊಳಿಸಬೇಕೆಂಬುದು ಜಾಗತಿಕ ತತ್ವವಾಗಿ ಮಾರ್ಪಡುತ್ತಿದೆ.

ಬಳಕೆ ಮಾಡಿದ ನೀರನ್ನು ಮರು ಸಂಸ್ಕರಿಸಿ ಬಳಸುವ ತಂತ್ರಜ್ಞಾನ ಜಾಗತಿಕ ಮಟ್ಟದಲ್ಲಿ ಈಗಾಗಲೇ ಅನೇಕ ರಾಷ್ಟ್ರಗಳು ಕೈಗೆತ್ತಿಕೊಂಡಿವೆ. ಭಾರತ ದೇಶದಲ್ಲಿ ಇಂತ ಪ್ರಯತ್ನಗಳು ನಿರೀಕ್ಷಿತ ಪ್ರಮಾಣದಲ್ಲಿ ನಡೆದಿಲ್ಲವಾದರೂ ಸಣ್ಣ ಪುಟ್ಟ ಯೋಜನೆಗಳನ್ನು ಅಲ್ಲಲ್ಲಿ ಕಾಣಬಹುದು. ದೇಶದಲ್ಲಿಯೇ ಅತಿ ದೊಡ್ಡ ಬಳಕೆ ಮಾಡಿದ ನೀರನ್ನು ಮರು ಸಂಸ್ಕರಿಸಿ ಮರು ಬಳಕೆ ಮಾಡಿಕೊಳ್ಳುವ ಮೊಟ್ಟ ಮೊದಲ ಯೋಜನೆಯನ್ನು ಕರ್ನಾಟಕ ರಾಜ್ಯ ಸರಕಾರವು ಕೈಗೆತ್ತಿಕೊಂಡಿದೆ. ಅದುವೇ ಕೆ.ಸಿ ವ್ಯಾಲಿ ಯೋಜನೆ.

**ಯೋಜನೆಗೆ ಚಾಲನೆ**

ಕೋಲಾರ ಜಿಲ್ಲೆಯ 121 ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ 5 ಕೆರೆಗಳಿಗೆ ಸಂಸ್ಕರಿತ ತ್ಯಾಜ್ಯ ನೀರು ಹರಿಸುವ ಕೆ.ಸಿ ವ್ಯಾಲಿ ಯೋಜನೆಗೆ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮೇ.30 ರಂದು ಸೋಮವಾರ ಕೋಲಾರ ತಾಲೂಕಿನ ನರಸಾಪುರ ಕೆರೆ ಅಂಗಳದಲ್ಲಿ ನೇರವೇರಿಸಿದ್ದಾರೆ.

ಕೋಲಾರ ಜಿಲ್ಲೆಯ ಜನತೆಯ ಶಾಶ್ವತ ನೀರಾವರಿ ಕೂಗಿಗೆ ಪರಿಹಾರವಾಗಿ ಸರಕಾರ ಈ ಯೋಜನೆಯನ್ನು ಮೊಟ್ಟ ಮೊದಲ ಯೋಜನೆಯಾಗಿ ಜಾರಿಗೆ ತರಲು ಮುಂದಾಗಿದ್ದು, ಈ ಯೋಜನೆಯ ಹಿನ್ನೆಲೆಯ ಹಿನ್ನೋಟದ ಮೇಲೆ ಒಂದು ಕಣ್ಣೋಟ.

**ಕೋಲಾರ ಜಿಲ್ಲೆಯ ನೀರಾವರಿ ಹೋರಾಟ**

ಕೋಲಾರ ಕೆರೆಗಳ ಜಿಲ್ಲೆ. ಇಂತ ಜಿಲ್ಲೆಯಲ್ಲಿ ಮಳೆ ಕುಂಠಿತಗೊಂಡ ನಂತರ ಪರಿಸ್ಥಿತಿ ಬಿಗಡಾಯಿಸಿದೆ. ಕೆರೆ ಕುಂಟೆಗಳು ಬತ್ತಿ ಹೋಗಿವೆ. ಅಂತರ್ಜಲ ಪಾತಾಳ ಸೇರಿದೆ. ಶುದ್ಧ ಕುಡಿಯುವ ನೀರು ಜನತೆಗೆ ಮರೀಚಿಕೆಯಾಗಿದೆ. ಇಂತ ಕೋಲಾರ ಜಿಲ್ಲೆಗೆ ಶಾಶ್ವತ ಕುಡಿಯುವ ನೀರು ಸರಬರಾಜು





ಮಾಡಬೇಕು ಎನ್ನುವ ಕೂಗಿಗೆ ಹದಿನಾರು ವರ್ಷಗಳ ಇತಿಹಾಸವಿದೆ. ಈ ಅವಧಿಯಲ್ಲಿ ಸಾಕಷ್ಟು ಯೋಜನೆಗಳ ಪ್ರಸ್ತಾಪನೆಯಾಗಿದೆ. ಆದರೆ, ಅನುಷ್ಠಾನ ಹಂತಕ್ಕೆ ಬಂದಿದ್ದು ಯಾವುದೂ ಇಲ್ಲವೇ ಇಲ್ಲ ಎನ್ನಬಹುದು.

ಇಂತ ಸನ್ನಿವೇಶದಲ್ಲಿ ಪರಮಶಿವಯ್ಯ ಯೋಜನೆಯ ಅನುಷ್ಠಾನಕ್ಕೆ ಆಗ್ರಹವಾದ ಹೋರಾಟವು ನೇತ್ರಾವತಿ ನದಿ ತಿರುವಿನಿಂದ ಆರಂಭವಾಗಿ, ಪಶ್ಚಿಮ ಘಟ್ಟಗಳಲ್ಲಿ ವ್ಯರ್ಥವಾಗಿ ಸುರಿಯುವ ಮಳೆ ನೀರನ್ನು ಬಯಲು ಸೀಮೆಯ ಕೆರೆಗಳಿಗೆ ಹರಿಸುವ ಯೋಜನೆಯಾಗಿ, ಜಲವಾಹಿನಿ ಹೋರಾಟದ ಮೂಲಕ ಕಾವೇರಿ ನೀರಿಗೆ ಬೇಡಿಕೆ ಇಟ್ಟು, ಮೇಕೆ ದಾಟು ಯೋಜನೆಯ ಬಗ್ಗೆ ಕನಸು ಕಂಡು, ಭದ್ರ ಮೇಲ್ದಂಡೆ ಯೋಜನೆಯ ಕೃಷ್ಣಾ ಬಿ ಸ್ಕೀಂ ಯೋಜನೆಯ ಪಾಲನ್ನು ಕೇಳಿ, ಇದ್ಯಾವುದು ಸಾಧ್ಯವಾಗದೆ ಎತ್ತಿನಹೊಳೆಯ ಮೂಲಕ ಕೋಲಾರ ಕೆರೆಗಳನ್ನು ತುಂಬಿಸುವ ಯೋಜನೆಯಾಗಿ ಮಾರ್ಪಟ್ಟು, ಅಘನಾಶಿನಿ ಯೋಜನೆಯನ್ನು ತೇಲಿ ಬಿಟ್ಟು ಹಲವಾರು ಯೋಜನೆಗಳು ಇಂದಿಗೂ ಹೋರಾಟದ ಹಂತದಲ್ಲಿ ಪ್ರಸ್ತಾಪವಾಗುತ್ತಲೇ ಇದೆ.

**ತ್ಯಾಜ್ಯ ನೀರಿಗೆ ಮೊದಲ ಬೇಡಿಕೆ**

ಇವೆಲ್ಲಾ ಹೋರಾಟಗಳು ನಡೆಯುತ್ತಿರುವಾಗಲೇ ಕೋಲಾರ ತಾಲೂಕಿನ ಜನಜಾಗೃತಿ ವೇದಿಕೆಯ ತ್ಯಾವನಹಳ್ಳಿಯ ಡಾ.ಗೋಪಾಲಗೌಡರು ಏಕಾಂಗಿ ಪ್ರಯತ್ನದ ಮೂಲಕ ಬೆಂಗಳೂರಿನ ತ್ಯಾಜ್ಯ ನೀರು ಮಾಲೂರು ತಾಲೂಕಿನ ಮುಗಳೂರು ಬಳಿ ತಮಿಳುನಾಡಿನ ಬಾಗಲೂರಿಗೆ ಹರಿದು ಹೋಗುತ್ತಿದ್ದು ಇದನ್ನು ಮಾಲೂರು ತಾಲೂಕಿನ ಕೆರೆಗಳಿಗೆ ಹರಿಸಿದರೆ ಕೃಷಿ ತೋಟಗಾರಿಕೆಗೂ ಅನುಕೂಲವಾಗುತ್ತದೆ, ಅಂತರ್ಜಲವೂ ಹೆಚ್ಚುತ್ತದೆ ಎನ್ನುವ ಬೇಡಿಕೆಯನ್ನು ಇಟ್ಟಿದ್ದರು.

ಬೆಂಗಳೂರಿನ ತ್ಯಾಜ್ಯ ನೀರನ್ನು ಬಳಸಿಕೊಂಡು ತಮಿಳುನಾಡಿನ ಮುಗಳೂರು, ಬಾಗಲೂರು ಸುತ್ತಮುತ್ತಲ ನೂರಾರು ರೈತರು ತರಕಾರಿ, ಹೂವು ಹಣ್ಣುಗಳನ್ನು ಬೆಳೆಯುತ್ತಿದ್ದಾರೆ ಈ ನೀರು ಕೋಲಾರಜಿಲ್ಲೆಯ ಕೆರೆಗಳಿಗೆ ಹರಿಸಬಾರದೇಕೆ ಎನ್ನುವುದು ಅವರ ಬೇಡಿಕೆಯ ಸಾರಂಶವಾಗಿತ್ತು.

**ಮೊದಲ ಪ್ರಯತ್ನ**

ತ್ಯಾವನಹಳ್ಳಿ ಡಾ.ಗೋಪಾಲಗೌಡರು ಸರಕಾರದ ಮುಖ್ಯಮಂತ್ರಿಗಳಿಗೆ ಈ ಕುರಿತು ಪತ್ರವನ್ನು ನಿರಂತರವಾಗಿ ಬರೆಯುವ ಮೂಲಕ ಸರಕಾರದ ಗಮನ ಸೆಳೆಯುವ ಪ್ರಯತ್ನ ಮಾಡಿದ್ದರು. ಮಾಲೂರಿನ ಆಗಿನ ಶಾಸಕ ಎಸ್.ಎನ್. ಕೃಷ್ಣಯ್ಯಶೆಟ್ಟಿ ಆಯ್ಕೆಯಾದ ನಂತರ ಈ ಯೋಜನೆಯ ಸಾಧಕ ಬಾಧಕಗಳ ಬಗ್ಗೆ  ಸರಕಾರ ಗಂಭೀರವಾಗಿ ಪರಿಗಣಿಸಿತು. ಆಗ ಮುಖ್ಯಮಂತ್ರಿಯಾಗಿದ್ದ ಧರಂಸಿಂಗ್ ಯೋಜನೆ ಸಾಧ್ಯತೆ ಕುರಿತಂತೆ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಿದ್ದರು. ಅಧಿಕಾರಿಗಳು ಈ ಯೋಜನೆಯ ಬಗ್ಗೆ ಸಕಾರಾತ್ಮಕವಾಗಿಯೇ ಸ್ಪಂದಿಸಿದ್ದರು. ಹದಿನೈದು ಕೋಟಿ ರೂ ವೆಚ್ಚದಲ್ಲಿ ಕರ್ನಾಟಕ ಜಲಮಂಡಳಿಯಿಂದ ಯೋಜನೆ ಅನುಷ್ಠಾನಕ್ಕೂ ಒಪ್ಪಿಗೆ ನೀಡಲಾಗಿತ್ತು. ಆದರೆ, ಆಗಿನ ರಾಜಕೀಯ ಬದಲಾವಣೆಯಲ್ಲಿ ಯೋಜನೆ ಮತ್ತೇ ನೆನೆಗುದಿಗೆ ಬೀಳುವಂತಾಗಿತ್ತು.

**ಮತ್ತೇ ಪ್ರಯತ್ನ**

2013 ರಲ್ಲಿ ಜರುಗಿದ ಬೆಂಗಳೂರು ವಿಭಾಗೀಯ ಲೋಕ ಅದಾಲತ್‌ನಲ್ಲಿ ಕೋಲಾರ ಜಿಲ್ಲೆಯವರೇ ಆದ ಜಸ್ಟೀಸ್ ಎಚ್.ಎನ್.ನಾಗಮೋಹನದಾಸ್, ಕೋರಮಂಗಲ – ಚೆಲ್ಲಘಟ್ಟ ಹಾಗೂ ಕಾಡುಬೀಸನಹಳ್ಳಿ ಕಲುಷಿತ ನೀರು ಸಂಸ್ಕರಣ ಘಟಕದಿಂದ ನೀರನ್ನು ನೈಸರ್ಗಿಕವಾಗಿ ಕೊಳ್ಳಗಳಿಗೆ ಬಿಡುತ್ತಿದ್ದು, ಈ ನೀರನ್ನು ಕೋಲಾರ ಜಿಲ್ಲೆಗೆ ತರುವುದು ಸೂಕ್ತ ಎಂದು ಅಭಿಪ್ರಾಯಪಟ್ಟಿದ್ದರು.

ಬೆಂಗಳೂರು ನೀರು ಸರಬರಾಜು ಮಂಡಳಿಯು ಹೆಬ್ಬಾಳ ವ್ಯಾಲಿಯಿಂದ ಎಲೆ ಮಲ್ಲಪ್ಪ ಶೆಟ್ಟಿ ಕೆರೆಯವರೆಗೆ ಮತ್ತೊಂದು ಕೋರಮಂಗಲ ಚೆಲ್ಲಘಟ್ಟ ವ್ಯಾಲಿಯಿಂದ ನೀರನ್ನು ಶುದ್ಧೀಕರಿಸಿ ಪ್ರತಿದಿನ 500 ಎಂಎಲ್‌ಡಿ ನೀರನ್ನು ಸಂಸ್ಕರಿಸಿ ಬಿಡುತ್ತಿತ್ತು.

ವಿವಿಧ ಹಂತಗಳ ಪರಿಶೀಲನೆಯ ನಂತರ ಪ್ರತಿ ವರ್ಷವು ಸುಮಾರು 5 ಟಿಎಂಸಿ ಅಧಿಕವಾಗಿ ಲಭ್ಯವಿರುವ ಶುದ್ಧೀಕರಿಸಿದ ನೀರನ್ನು ಕೋಲಾರ ಜಿಲ್ಲೆಯ ಎಲ್ಲಾತಾಲೂಕುಗಳ ವಿವಿಧ ಕೆರೆಗಳಿಗೆ ಹರಿಯ ಬಿಡುವ ಕೆ.ಸಿ ವ್ಯಾಲಿ ಯೋಜನೆ ಸಿದ್ಧವಾಯಿತು. ಈ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಸಕ್ತಿ ತೋರಿಸಿದ್ದರ ಫಲವಾಗಿ ಕೇವಲ ಎರಡೇ ವರ್ಷಗಳ ಅವಧಿಯಲ್ಲಿ ಯೋಜನೆ ಡಿಪಿಆರ್ ಆಗಿ, ಸರಕಾರದ ಅನುಮೋದನೆ ಪಡೆದು ಅನುಷ್ಠಾನದ ಹಂತಕ್ಕೆ ಬಂದು ನಿಲ್ಲುವಂತಾಗಿದೆ.

**ಏನಿದು ಯೋಜನೆ**

ಕೋರಮಂಗಲ ಹಾಗೂ ಚಲ್ಲಘಟ್ಟ ನಡುವಿನ ಕಣಿವೆ ಪ್ರದೇಶದಲ್ಲಿ ಬೆಂಗಳೂರಿನ ತ್ಯಾಜ್ಯ ನೀರು ಕಾಲುವೆ ರೂಪದಲ್ಲಿ ನಿರಂತರವಾಗಿ ಹರಿಯುತ್ತಿರುತ್ತಿದೆ.  ಎರಡು ಬಾರಿ ಸಂಸ್ಕರಿಸಿದ ಈ ನೀರನ್ನು ಏತ ನೀರಾವರಿಯಲ್ಲಿ  ಸುಮಾರು 52 .2 ಕಿ.ಮೀ

ಉದ್ದದ ಪೈಪುಗಳ ಮೂಲಕ ಬೆಂಗಳೂರು ಗ್ರಾಮಾಂತರ ಹೊಸಕೋಟೆ ಕೆರೆ ಹಾಗೂ ಕೋಲಾರ ತಾಲೂಕು ನರಸಾಪುರ ಕೆರೆಯನ್ನು ತುಂಬಿಸುವುದು.

ಕೋಲಾರದ ನರಸಾಪುರ ಕೆರೆಯಿಂದ ಈ ನೀರನ್ನು ಮೂರು ದಿಕ್ಕಿನಲ್ಲಿ ಹರಿಸಲು ಯೋಜಿಸಲಾಗಿದೆ. ಒಂದನೇಯದಾಗಿ ನರಸಾಪುರ ಕೆರೆ ಕೋಡಿ ಮಾರ್ಗವಾಗಿ ಮುದುವಾಡಿ ಕೆರೆಯ ಮೂಲಕ ಶ್ರೀನಿವಾಸಪುರ ಚಿಂತಾಮಣಿ ಕಡೆಗೆ ನೀರು ಹರಿಸುವುದು, ಎರಡನೇ ಮಾರ್ಗವಾಗಿ ಕೋಲಾರ ತಾಲೂಕು ಆರಾಭಿಕೊತ್ತನೂರು ಕೆರೆಗೆ ಏತ ನೀರಾವರಿ ಮೂಲಕ ಕೋಲಾರ ಮಾಲೂರು ಮಾರ್ಗವಾಗಿ ನೀರು ಹರಿಸಿ ಬಂಗಾರಪೇಟೆ ಮುಳಬಾಗಿಲು ಕಡೆಗೆ ತರುವುದು, ಮೂರನೇದಾಗಿ ನರಸಾಪುರ ಕಾಫಿ ಡೇ ಹಿಂಬದಿಯ ಮಾರ್ಗವಾಗಿ ಕೆರೆ ಸರಣಿಯಲ್ಲಿಯೇ ಜನ್ನಘಟ್ಟ ಇತರೇ ಕೆರೆಗಳಿಗೆ ನೀರು ತಂದು ಶ್ರೀನಿವಾಸಪುರ ಬಂಗಾರಪೇಟೆಯ ಇನ್ನಿತರ ಕೆರೆಗಳಿಗೆ ನೀರು ತುಂಬುವುದು ಯೋಜನೆ ನೀಲ ನಕ್ಷೆಯಾಗಿದೆ.

### ಎಷ್ಟು ಕೆರೆಗಳಿಗೆ ಎಷ್ಟು ನೀರು

ಕೋಲಾರ ವಿಧಾನಸಭಾ ಕ್ಷೇತ್ರದ 29, ಶ್ರೀನಿವಾಸಪುರ ಕ್ಷೇತ್ರದ 24, ಚಿಂತಾಮಣಿ ಕ್ಷೇತ್ರದ 5, ಮಾಲೂರು ಕ್ಷೇತ್ರದ 24, ಬಂಗಾರಪೇಟೆ ಕ್ಷೇತ್ರದ 12, ಕೆಜಿಎಫ್ ಕ್ಷೇತ್ರದ 2 ಮತ್ತು ಮುಳಬಾಗಿಲು ಕ್ಷೇತ್ರದ 30 ಕೆರೆಗಳಿಗೆ ಪ್ರತಿ ನಿತ್ಯವೂ 400 ಎಂಎಲ್‌ಡಿ ನೀರು ತುಂಬಿಸಲಾಗುತ್ತದೆ.

126 ಕೆರೆಗಳ ಪೈಕಿ 45 ಸಣ್ಣ ನೀರಾವರಿ ಇಲಾಖೆಯ ಕೆರೆಗಳು, 76 ಜಿಲ್ಲಾ ಪಂಚಾಯತ್ ಕೆರೆಗಳು, ಕರ್ನಾಟಕ ನೀರು ಸರಬರಾಜು ಇಲಾಖೆಯ 4 ಕೆರೆಗಳು ಮತ್ತು ಪುರಸಭೆ ವ್ಯಾಪ್ತಿಯ 1 ಕೆರೆ ಒಳಗೊಂಡಿದೆ. ಎರಡು ಬಾರಿ ಸಂಸ್ಕರಿಸಿದ 400 ಎಂಎಲ್‌ಡಿ ನೀರನ್ನು ಸತತವಾಗಿ ಹರಿಸುವುದರಿಂದ ಸುಮಾರು 19 ಸಾವಿರ ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ಅನುಕೂಲವಾಗಲಿದ್ದು, 5396 ಹೆಕ್ಟೇರ್ ಪ್ರದೇಶ ನೀರಾವರಿಯಾಗಿ ಮಾರ್ಪಡಲಿದೆಯೆಂದು ನಿರೀಕ್ಷಿಸಲಾಗಿದೆ.

### ಯಾವ ಕೆರೆಗೆ ನೀರು

ಕೋಲಾರ ವಿಧಾನಸಭಾ ಕ್ಷೇತ್ರದ ನರಸಾಪುರ ದೊಡ್ಡಕೆರೆ, ಕುರ್ಕಿ ವೆಂಗಯ್ಯನ ಕೆರೆ, ದೊಡ್ಡವಲ್ಲಭಿ ಕೆರೆ, ಸಿಂಗೇಹಳ್ಳಿ ಕೆರೆ, ಪರ್ಜೇನಹಳ್ಳಿ ದೊಡ್ಡಕೆರೆ, ಕೋಲಾರ ಅಮಾನಿಕೆರೆ, ಕೂತಾಂಡಹಳ್ಳಿ ಕೆರೆ, ಸೀಪುರ ದೊಡ್ಡಕೆರೆ, ಅರಹಳ್ಳಿ ದೊಡ್ಡಕೆರೆ, ಕೋಡಿಕಣ್ಣೂರು ಕೆರೆ, ನೆರ್ನಹಳ್ಳಿ ಕೆರೆ, ಅರಾಭಿಕೊತ್ತನೂರು ಕೆರೆ, ಕೆಂದಟ್ಟಿ ಕೆರೆ, ಮಡೇರಹಳ್ಳಿ ಕೆರೆ, ಅಮ್ಮೇರಹಳ್ಳಿ ಕೆರೆ, ಬೇನಕನಹಳ್ಳಿ ಕೆರೆ, ಬೆಟ್ಟದಹೊಸಹಳ್ಳಿ ಕೊಡಗಿನ ಕೆರೆ, ಚಲ್ಲಹಳ್ಳಿ ರಾಯನಕೆರೆ, ನಾಗಲಾಪುರ ಹಳೇಕೆರೆ, ಮಡಿವಾಳ ತಟ್ಟಲಕುಂಟೆ ಕೆರೆ, ಸೂಲೂರು ಕೆಗ್ಗೆರೆ, ಅಂದ್ರಹಳ್ಳಿ ಕೊಡಗಿನಕೆರೆ, ತಲಗುಂದ ದೊಡ್ಡಕೆರೆ, ಚನ್ನಾಪುರ ಕೆರೆ, ಶೆಟ್ಟಿಕೊತ್ತನೂರು ಕೆರೆ, ಶೆಟ್ಟಿಗಾನಹಳ್ಳಿ ಕೆರೆ, ಚೋಳಘಟ್ಟ ಕೆರೆ, ಚುಂಚದೇನಹಳ್ಳಿ ಕೆರೆ.

ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರದಲ್ಲಿ ಜನ್ನಘಟ್ಟ ಕೆರೆ, ಎಸ್.ಅಗ್ರಹಾರ ಕೆರೆ, ಮುದುವಾಡಿ ದೊಡ್ಡಕೆರೆ, ಚಿಲ್ಲಪ್ಪಲ್ಲಿ ಕೆರೆ, ಹೋಳೂರು ಕೆರೆ, ಶ್ರೀನಿವಾಸಪುರ ಅಮಾನಿಕೆರೆ, ಗುಮ್ಮರೆಡ್ಡಿಪುರ ದೊಡ್ಡಕೆರೆ, ಯದರೂರು, ಹೆಬ್ಬಟ, ಕೊತ್ತೂರು, ಮಂಜಲನಗರ, ತೆರ್ನಹಳ್ಳಿ, ಮಾಸ್ತೇನಹಳ್ಳಿ, ಬೀಸನಹಳ್ಳಿ, ಕಡದಹಳ್ಳಿ, ಕುರುತಹಳ್ಳಿ, ಕಾಚಹಳ್ಳಿ, ಹಂದಿಗೆರೆ, ಮುದುಚಿಕ್ಕಹಳ್ಳಿ, ಹನೂರು, ಚಿಕ್ಕಪುರ, ಬಿರುನಳ್ಳಿ, ಹೊಸಹಳ್ಳಿ, ಆಲವಟ್ಟ, ತೂಪಲ್ಲಿ, ಸಿಂಗನಪಾಳ್ಯ, ಕಲ್ಲೂರು, ಮೋಗೇಪಲ್ಲಿ ಕೆರೆಗಳಿಗೆ.

ಮಾಲೂರು ವಿಧಾನಸಭಾ ಕ್ಷೇತ್ರದಲ್ಲಿ ಪೆಮ್ಮಶೆಟ್ಟಿಹಳ್ಳಿ ಹೂವಿನಕೆರೆ, ಶಿವಾರಪಟ್ಟಣ ಕೆರೆ, ಅರಳೇರಿ, ದೊಡ್ಡಶಿವಾರ ಅಮಾನಿಕೆರೆ, ಹುಳದೇನಹಳ್ಳಿ, ತಿಮ್ಮನಾಯಕನಹಳ್ಳಿ, ಮಾರ್ಕಂಡೇಯ ಕೆರೆ, ಮಡಿವಾಳ, ಮಾಲೂರು ಅಮಾನಿ ಕೆರೆ, ಹುಂಗೇನಹಳ್ಳಿ, ಕೊಡಗಿನ ಬೆಲೆಕೆರೆ, ವಡಗೇನಹಳ್ಳಿ, ಚಿಕ್ಕಸಬ್ಬೇನಹಳ್ಳಿ, ತಿರುಮಲಹಟ್ಟಿ, ಹಿಜುವನಹಳ್ಳಿ, ಕಾರಂಗುಟ್ಟ, ನಿದರಮಂಗಲ, ತೋಗಡಿಗಾನಹಳ್ಳಿ, ತೋಟಗೌಡನಹಳ್ಳಿ, ಯಲುವಗುಳಿ, ಶೆಟ್ಟಿಹಳ್ಳಿ, ಭಾವನಹಳ್ಳಿ, ತಂಬಿಹಳ್ಳಿ, ಅಬ್ಬೇನಹಳ್ಳಿ ಕೆರೆ. ಬಂಗಾರಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಸೀಸಂದ್ರ, ಕೆಂಬೋಡಿ, ಪಾರೇಹೊಸಹಳ್ಳಿ, ಹೊಳಲಿ, ಕೊಪ್ಪದೊಡ್ಡಕೆರೆ, ಕಾಮಸಮುದ್ರ, ಬೂದಿಕೋಟೆ, ಮಾಗೇರಿ, ಮೂಗಳಬೆಲೆ, ಮಾದಮಂಗಲ, ಕೋಟರಾಮಗುಳ್ಳ, ಉಕ್ಕುಂದ ಕೆರಗಳಿಗೆ.

**ಕೆಜಿಎಫ್ ವಿಧಾಸಭಾ ಕ್ಷೇತ್ರದಲ್ಲಿ ಬೇತಮಂಗಲ, ರಾಮಸಾಗರ ಕೆರೆ.** ಮುಳಬಾಗಿಲು ವಿಧಾನಸಭಾ ಕ್ಷೇತ್ರದಲ್ಲಿ ಮಾರಂಡಹಳ್ಳಿ, ಕಪ್ಪಲಮಡಗು, ನಂಗಲಿ, ಬ್ಯಾಟನೂರು, ಸೊಣ್ಣವಾಡಿ, ಮೇಲಾಗಾಣಿ, ಕನ್ನಸಂದ್ರ, ತಾಯಲೂರು, ಮದ್ದೇರಿ, ಆವಣಿ, ಊರುಕುಂಟೆ ಮಿಟ್ಟೂರು, ನಾರಾಯಣದಾಸನಕುಂಟೆ, ಕದರೀಪುರ ಯಲಕಲಕುಂಟೆ, ಕದರೀಪುರ ಗೋಪನ ಕೆರೆ, ಲಿಂಗಾಪುರ, ದೊಡ್ಡದನಾಯನ ಕೆರೆ, ಸಿದ್ಧಘಟ್ಟ, ಸಿದ್ಧಘಟ್ಟ ನಕ್ಕೇನವಡ್ಡು, ಮರಹೇರು, ಕೆಂಗುಂಟೆ, ಸೋಮೇಶ್ವರ ಪಾಳ್ಯ ದೊಡ್ಡಕೆರೆ, ಇಂಡ್ಲು, ಕೌತನಹಳ್ಳಿ, ಗುಮ್ಮಳಾಪುರ, ವಿರೂಪಾಕ್ಷ, ಜಮ್ಮನಹಳ್ಳಿ, ವರದಗಾನಹಳ್ಳಿ, ವಿಜಲಾಪುರ, ಗಂಜಗುಂಟೆ, ಆವರಮರಕಲಘಟ್ಟ ಕೆರೆಗಳಿಗೆ ನೀರು ತುಂಬಿಸುವುದು ಯೋಜನೆಯ ಉದ್ದೇಶವಾಗಿದೆ.


### ಗುಣಮಟ್ಟದ ಖಾತ್ರಿ

ಸಂಸ್ಕರಿಸಿದ ನೀರು ಎಂದ ಕೂಡಲೇ ಗುಣಮಟ್ಟದ ಬಗ್ಗೆ ಅನುಮಾನ ಮೂಡುವುದು ಸಹಜ. ಯೋಜನೆಯನ್ನು ರೂಪಿಸಿರುವ ಸಣ್ಣ ನೀರಾವರಿ ಇಲಾಖೆಯ ಸಚಿವ ಶಿವರಾಜ್ ತಂಗಡಗಿ, ಇಲಾಖೆಯ ಮುಖ್ಯ ಇಂಜಿನಿಯರ್ ಪ್ರಭಾಕರ್ ಅವರು ಅಭಿಪ್ರಾಯಪಡುವಂತೆ, ಎರಡು ಬಾರಿ ಸಂಸ್ಕರಿಸಿದ ನೀರಿನ ಗುಣಮಟ್ಟ ಕುರಿತಂತೆ ಈಗಾಗಲೇ ಇಂಡಿಯನ್ ಇನ್ಸಿಸ್ಟಿಟ್ಯೂಟ್ ಆಫ್ ಸೈನ್ಸ್ ಮತ್ತು ಇತರೇ ಪ್ರಯೋಗಾಲಗಳಿಂದ ನೀರನ್ನು ಪರೀಕ್ಷಿಸಿ ವರದಿ ತರಿಸಿಕೊಂಡು ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲಾಗಿದೆ. ಗುಣಮಟ್ಟದ ಬಗ್ಗೆ ಯಾರೂ ಆತಂಕಪಡಬೇಕಾಗಿಲ್ಲ. ಕೆ.ಸಿ ವ್ಯಾಲಿ ನೀರು ಸತತ ಬರಗಾಲ ಪೀಡಿತ ಕೋಲಾರ ಜಿಲ್ಲೆಗೆ ವರದಾನವಾಗಲಿದೆ ಎನ್ನುತ್ತಾರೆ.

### ಕಾಲಮಿತಿ ಯೋಜನೆ

ಕೆ.ಸಿ ವ್ಯಾಲಿ ಯೋಜನೆಯಡಿ ಭೂಸ್ವಾಧೀನ ಅಗತ್ಯ ಇಲ್ಲದೇ ಇರುವುದರಿಂದ ಹಾಗೂ ವಿವಾದಗಳಿಂದ ಮುಕ್ತವಾಗಿರುವುದರಿಂದ ಯೋಜನೆ ಆರಂಭವಾದ ಎರಡು ವರ್ಷದೊಳಗೆ ಪೂರ್ಣಗೊಳಿಸುವ ಶರತ್ತನ್ನು ಗುತ್ತಿಗೆದಾರರಿಗೆ ವಿಧಿಸಲಾಗಿದೆ. ಆದರೆ, ಅಹಿರ್ನಿಷಿ ಆದ್ಯತೆ ಮೇರೆ ಕಾಮಗಾರಿ ಮಾಡಿ ಗರಿಷ್ಠ ಒಂದೂವರೆ ವರ್ಷದೊಳಗೆ ಕೋಲಾರದ ಕೆರೆಗಳಿಗೆ ನೀರು ತುಂಬಿಸಬೇಕೆಂದು ಸ್ವತಹ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸೂಚನೆ ನೀಡಿರುವುದರಿಂದ ಯೋಜನೆ ಕಾಲಮಿತಿಯೊಳಗೆ ಪೂರ್ಣಗೊಳ್ಳುವ ವಿಶ್ವಾಸ ಮೂಡಿಸಿದೆ.





# ಮಾಧ್ಯಮ ಲೋಕದ ಭಿನ್ನ ಪಯಣಿಗ ಪಿ. ಸಾಯಿನಾಥ್

▪ ಜಿ ಎನ್ ಮೋಹನ್



**ಪಾ**ಲಗುಮ್ಮಿ ಸಾಯಿನಾಥ್ ! ಹಾಗಂತ ಕರೆದರೆ ಎಷ್ಟು ಮಂದಿಗೆ ಅರ್ಥವಾಗುತ್ತದೋ ಗೊತ್ತಿಲ್ಲ. ಆದರೆ ಅದೇ ಪಿ. ಸಾಯಿನಾಥ್ ಎಂದು ಕರೆದು ನೋಡಿ, ದೇಶದ ಪ್ರಧಾನಿಯಿಂದ ಹಿಡಿದು ಅಮೆರಿಕಾದ ನೀತಿ ನಿರೂಪಕರವರೆಗೆ ಬೆಚ್ಚಿ ಬೀಳುತ್ತಾರೆ. ಪಿ. ಸಾಯಿನಾಥ್ ಬರೆಯುತ್ತಾರೆ ಎಂದರೆ ಇಂದು ಬರೀ ದೇಶವಲ್ಲ, ಇಡೀ ಜಗತ್ತು ಕುತೂಹಲದಿಂದ ಓದುತ್ತದೆ. ಸಾಯಿನಾಥ್ ಅಂಕೆ ಸಂಖ್ಯೆಗಳನ್ನು ಆಧರಿಸಿ, ದಾಖಲೆಗಳನ್ನು ತಿರುವಿ ಹಾಕಿ, ಹತ್ತು – ಹಲವು ಹಳ್ಳಿ ಸುತ್ತಿ, ನೂರೆಂಟು ಜನರ ಜತೆ ಮಾತನಾಡಿ, ಫೋಟೋ ಕ್ಲಿಕ್ಕಿಸಿ ಮುಂದಿಡುವ ಕಹಿ ಸತ್ಯಗಳು ಮಲೇರಿಯಾ ರೋಗಕ್ಕೆ ನೀಡುವ ಕ್ವಿನೈನ್ ನಂತೆಯೇ ಇರುತ್ತದೆ. ಕಹಿ, ಆದರೆ ಪರಿಣಾಮಕಾರಿ.

ಪಿ. ಸಾಯಿನಾಥ್ ಖಂಡಿತ 'ನ ಬ್ರೂಯಾತ್ ಸತ್ಯಂ ಅಪ್ರಿಯಂ' – ಅಪ್ರಿಯವಾದ ಸತ್ಯವನ್ನು ಹೇಳಬೇಡ ಎಂಬ ಗುಂಪಿಗೆ ಸೇರಿದವರಲ್ಲ. ಅಪ್ರಿಯವಾದ ಸತ್ಯಗಳನ್ನು ಅನಾವರಣ ಮಾಡಲೆಂದೇ ಲೇಖನಿ ಹಿಡಿದವರು.

ಹಾಗಾಗಿಯೇ ಪಿ. ಸಾಯಿನಾಥ್ ಗೆ 'ಭಾರತೀಯ ಪತ್ರಿಕೋದ್ಯಮದ ಕೆಟ್ಟ ಹುಡುಗ' ಎಂದು ಶಹಬ್ಬಾಸ್ ಗಿರಿ ಸಿಕ್ಕಿದೆ. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್ ಯು) ದಲ್ಲಿ ಚರಿತ್ರೆಯನ್ನು ಅಧ್ಯಯನ ಮಾಡಿದ ಪಿ. ಸಾಯಿನಾಥ್ ಹೊರಳಿಕೊಂಡದ್ದು ಮಾತ್ರ ಪತ್ರಿಕೋದ್ಯಮಕ್ಕೆ. ಚರಿತ್ರೆಗೆ ಇದರಿಂದ ಆದ ನಷ್ಟವೇನು ಎಂದು ನನಗೆ ಖಂಡಿತ ಗೊತ್ತಿಲ್ಲ. ಆದರೆ ಪತ್ರಿಕೋದ್ಯಮಕ್ಕಂತೂ ದೊಡ್ಡ ಲಾಭವಾಯಿತು. ಯುಎನ್ ಐ ಸುದ್ದಿ ಸಂಸ್ಥೆಯ ಮೂಲಕ ಪತ್ರಿಕೋದ್ಯಮ ಪ್ರವೇಶಿಸಿದ ಸಾಯಿನಾಥ್ ಅನಂತರ 'ದಿ

ಡೈಲಿ' ಪತ್ರಿಕೆಗೆ ವಿದೇಶ ಸಂಪಾದಕರಾದರು. ಅನಂತರ ಅವರನ್ನು ಕೈ ಹಿಡಿದು ಕರೆದುಕೊಂಡು ಹೋದದ್ದು ಭಾರತೀಯ ಪತ್ರಿಕೋದ್ಯಮದ ಶೋ ಮ್ಯಾನ್ ರೂಸಿ ಕರಾಂಜಿಯಾ. 'ಬ್ಲಿಟ್ಜ್' ಪತ್ರಿಕೆಯಲ್ಲಿ ಉಪ ಪ್ರಧಾನ ಸಂಪಾದಕರಾಗಿದ್ದ ಸಾಯಿನಾಥ್ ಇದ್ದಕ್ಕಿದ್ದಂತೆ ಕೈ ಕೊಡವಿ ಎದ್ದೇ ಬಿಟ್ಟರು. ನನ್ನ ಕೆಲಸ ಇರುವುದು ಈ ಬೃಹನ್ನಗರಿಯಲ್ಲಲ್ಲ ಎನ್ನುವುದು ಅವರಿಗೆ ಗೊತ್ತಾಗಿ ಹೋಗಿತ್ತು.


**ಬೃಹನ್ನಗರಿಗೆ ಬೆನ್ನು ಹಾಕಿ..**

ರಾಷ್ಟ್ರಪತಿಯಾಗಿದ್ದ ವಿ. ವಿ. ಗಿರಿಯವರ ಮೊಮ್ಮಗ ಎನ್ನುವ ಯಾವ ಹಮ್ಮೂ ಇಲ್ಲದ ಪಿ. ಸಾಯಿನಾಥ್ ಅವರ ಕೊಡುಗೆ ಇರುವುದು ಅವರು ಭಾರತದ ಪತ್ರಿಕೋದ್ಯಮಕ್ಕೆ ನೀಡಿದ ಕಣ್ಣೋಟದಲ್ಲಿ. ಅವರು ನೆನಪಾಗುವುದು ಸಹಾ ಅವರ 'ಬ್ಲಿಟ್ಸ್', 'ದಿ ಡೈಲಿ', 'ಯುಎನ್ ಐ' ಕೆಲಸಗಳಿಗಾಗಿಯಲ್ಲ. ಬದಲಿಗೆ ಆ ಸಮಯದಲ್ಲೇ ತಮ್ಮ ಗೆಳೆಯ ಸುಧೀಂದ್ರ ಕುಲಕರ್ಣಿಯ ಜತೆ ಸೇರಿ ರೂಪಿಸುತ್ತಿದ್ದ 'ಕೌಂಟರ್ ಮೀಡಿಯಾ' ಪತ್ರಿಕೆಯಿಂದಾಗಿ. ಕೇವಲ ಹತ್ತಾರು ಪುಟಗಳಲ್ಲಿ ಹರಡಿಕೊಂಡಿದ್ದ ಈ ಪತ್ರಿಕೆ ಮಾಧ್ಯಮದ ಹೊಸ ಪೀಳಿಗೆಗೆ ಗೊತ್ತಿರದಿದ್ದ ಹಲವು ವಿಷಯಗಳನ್ನು ಹೊರಗಿಡುತ್ತಾ ಹೋಯಿತು. ಮಾಧ್ಯಮ ಸಾಮ್ರಾಜ್ಯಶಾಹಿ ಅಂದರೆ ಏನು ಎನ್ನುವ ಮೊದಲ ಪಾಠ ಸಿಕ್ಕಿದ್ದು ಅಲ್ಲಿ. ಹೇಗೆ ಕೇವಲ ನಾಲ್ಕೇ ನಾಲ್ಕು ಸುದ್ದಿ ಸಂಸ್ಥೆಗಳು ಇಡೀ ಜಗತ್ತನ್ನು ಕುಣಿಸುತ್ತವೆ ಎನ್ನುವುದರ ಜಾತಕವನ್ನು ಈ ಪತ್ರಿಕೆ ಬಿಡಿಸಿಟ್ಟಿತ್ತು. ನಾವು ಓದುತ್ತಿರುವ ಸುದ್ದಿ ಅಮೆರಿಕಾ ಹಾಗೂ ಇಂಗ್ಲೆಂಡ್‌ಗೆ ಬೇಕಾದ ಸುದ್ದಿಯೇ ಹೊರತು, ನಮಗೆ ಬೇಕಾದದ್ದಲ್ಲ ಎಂಬುದನ್ನು ಎಳೆಎಳೆಯಾಗಿ ಬಿಡಿಸಿತ್ತು.

'ಕೌಂಟರ್ ಮೀಡಿಯಾ' ಪ್ರಕಟವಾಗಿದ್ದು ಕೈ ಬೆರಳೆಣಿಕೆಯಷ್ಟು ಸಂಚಿಕೆಗಳು ಮಾತ್ರ. ಆದರೆ ಅದು ತನ್ನದೇ ರೀತಿಯಲ್ಲಿ ಪತ್ರಿಕೋದ್ಯಮದ ಒಳಗೆ ಹೊಸ ನೋಟದ ಕಸಿ ಮಾಡಿತ್ತು. ಪತ್ರಿಕೋದ್ಯಮವನ್ನು ಇನ್ನೊಂದು ದಿಕ್ಕಿನಿಂದ ನೋಡುವಂತೆ ಪ್ರೇರೇಪಿಸಿತು.

ಸಾಯಿನಾಥ್ ಮುಂಬೈ ಮಹಾನಗರದಲ್ಲಿ ನೋಡಿದ ಪತ್ರಿಕೋದ್ಯಮ ಅವರನ್ನು ಅಲ್ಲಿಂದ ಎದ್ದು ಬರುವಂತೆ ಪ್ರೇರಣೆ ನೀಡಿತು. ಇನ್ನು ತನ್ನ ಪಯಣ ಹಳ್ಳಿಗಳತ್ತ ಎನ್ನುವುದು ಅವರಿಗೆ ಗೊತ್ತಾಗಿಹೋಗಿತ್ತು. ಆಗಲೇ ತಾವು ಸುತ್ತಲೂ ನಿಗದಿಪಡಿಸಿಕೊಂಡಿದ್ದ ಹತ್ತು ರಾಜ್ಯಗಳ ನಿಟ್ಟುಸಿರಿನ ಪಯಣಕ್ಕೆ ಆಸರೆಯಾಗಲು 'ಟೈಮ್ಸ್ ಆಫ್ ಇಂಡಿಯಾ'ದ ಕದ ತಟ್ಟಿದರು. ಹಸಿರು ನಿಶಾನೆ ಸಿಕ್ಕಿದ ತತ್ ಕ್ಷಣವೇ ಸಾಯಿನಾಥ್ ಕ್ಯಾಮೆರಾ ಬಗಲಿಗೇರಿಸಿಕೊಂಡು ಹೊರಟೇಬಿಟ್ಟರು.

'ಬೀದಿಯಲ್ಲಿ, ಗಲ್ಲಿಯಲ್ಲಿ, ಬೇಲಿಮರೆಯ ಮೆಳೆಗಳಲ್ಲಿ, ಯಜಮಾನರ ಹಟ್ಟಿಯಲ್ಲಿ, ಧಣಿ ಕೂರುವ ಪಟ್ಟದಲ್ಲಿ.. ' ಸಾಯಿನಾಥ್ ಸತತವಾಗಿ 80 ಸಾವಿರ ಕಿ. ಮೀ. ದೂರವನ್ನು ಸಂಚರಿಸಿದರು. ಕಾಡು, ಕಣಿವೆ, ಬೆಟ್ಟ – ಗುಡ್ಡ ಎಲ್ಲದರಲ್ಲಿಯೂ ಇದ್ದವರ ಕೈ ಕುಲುಕಿದರು. ಗುಳೆ ಹೋಗುವವರ ಜತೆ ಗುಳೆ ಎದ್ದು ಹೋದರು. ಸಂತಾಲರ ಮನೆಗಳ ಸುಂದರ ಗೋಡೆಯ ಮೇಲೆ ಕಾಣುತ್ತಿದ್ದ ಗಣಿ ಧೂಳು ಕಂಡು ಅದರ ಹಿಂದಿನ ಕಥೆ ಬೆಂಬತ್ತಿದರು. 'ಒಂದು ರಸ್ತೆ', 'ಒಂದು ಹೋರಿ', 'ಒಬ್ಬ ಆದಿವಾಸಿ', 'ನೊಂದ ದಲಿತ', 'ಹಾಡು ಬರೆದ ಕವಿ', 'ಸೈಕಲ್ ಕಲಿತ ಹುಡುಗಿ' ಎಲ್ಲವೂ ವರದಿಯೊಳಗೆ ಸೇರಿಹೋದವು. ಸೈಕಲ್ ನ ಒಂದು ಭಾಗದ ಪೆಡಲ್ ಇಲ್ಲದ್ದರ ಬಗ್ಗೆ ಕುತೂಹಲ ತಳೆದು ಅದರ ದೊಡ್ಡ ಕಥೆ ಹೊರಗೆಳೆದರು. 'ಬಾವಿಯಲ್ಲಿ



ನೀರಿಲ್ಲದ್ದರ ಬಗ್ಗೆ', 'ಕೆರೆ ಬತ್ತಿದ್ದರ ಬಗ್ಗೆ,' 'ಕೊಳವೆ ಬಾವಿ ಉಳ್ಳವರಿಗೆ ಮಾತ್ರ ನೀರು ಉಕ್ಕಿಸುವ ಬಗ್ಗೆ' ಬರೆದರು. 'ಶಾಲೆಗಳ ಕೊಠಡಿಯಲ್ಲಿ ಮೇಕೆಗಳು ಮನೆ ಮಾಡಿರುವ ಬಗ್ಗೆ,' 'ಆಸ್ಪತ್ರೆಯಲ್ಲಿ ಯಾಕೆ ವೈದ್ಯರಿಲ್ಲ ಎನ್ನುವುದರ ಬಗ್ಗೆ,' 'ಮುಂಬೈಯಲ್ಲಿ ಕೂಲಿಗಳಿಗೆ ಸ್ಟೆರಾಯ್ಡ್ ಚುಚ್ಚುಮದ್ದು ನೀಡಿ ಕೆಲಸ ತೆಗೆಸುವ ಬಗ್ಗೆ', 'ಬೀಡಿ ಕಟ್ಟುವ ಕೈಗಳ ಬಗ್ಗೆ,' 'ಅರಣ್ಯವನ್ನು ಪ್ರೀತಿಸುವ ಹೃದಯಗಳ ಬಗ್ಗೆ,' 'ಕಡುಕಷ್ಟದ ಕಾಲದಲ್ಲೂ ಒಟ್ಟಾಗಿ ಸೇರಿ ಮನೆ ಕಟ್ಟುವ ಬಗ್ಗೆ', 'ಕಲ್ಲಿನ ಗಣಿಯಲ್ಲಿ ಚಪ್ಪಲಿ ಇಲ್ಲದ ಆ ಧೈರ್ಯವಂತ ಹೆಂಗಸರು ಮಾಲೀಕರಾದದ್ದರ ಬಗ್ಗೆ', 'ಸಾರಾಯಿ ಅಂಗಡಿಯ ಬಾಗಿಲು ಮುಚ್ಚಿಸಿದ ಮನಸ್ಸುಗಳ ಬಗ್ಗೆ', ಎಲ್ಲದರ ಬಗ್ಗೆ ಬರೆದರು.

**ಹಳ್ಳಿಗಳ ಬೆಂಬತ್ತಿ ಕಣ್ಣು ತೆರೆಸಿದರು**


ಮಾಧ್ಯಮ ಲೋಕದ ಒಬ್ಬ ಭಿನ್ನ ಪಯಣಿಗ ಮಾಡುತ್ತಾ ಹೋಗಿದ್ದು ಹೀಗೆ. ಪಿ. ಸಾಯಿನಾಥ್ ಒಂದು ವ್ರತದಂತೆ ಹಳ್ಳಿಗಳನ್ನು ಸುತ್ತಿದರು. ಮತ್ತೆ ಮತ್ತೆ ಸುತ್ತಿದರು. ಸುತ್ತಿಲ್ಲದ ಹಳ್ಳಿಗಳ ಬೆಂಬತ್ತಿ ಹೋದರು. ಒಂದು ವಲಸೆಯ ಹಿಂದೆ ಇರುವ ತಲ್ಲಣ, ಒಂದು ಸ್ಥಳಾಂತರ ಕಡಿದು ಹಾಕುವ ಅಸ್ತಿತ್ವದ ಬೇರು, ಒಂದು ಯೋಜನೆ ಉಸಿರುಗಟ್ಟಿಸುವ ಪರಿ.. ಎಲ್ಲವೂ ಸೇರಿ ಒಬ್ಬ ಪಿ. ಸಾಯಿನಾಥ್ ರೂಪುಗೊಂಡರು. ವರ್ಷದ 300 ದಿನ ಹೀಗೆ ಜಗತ್ತು ಕಂಡರಿಯದ, ಕಾಣಬೇಕೆಂಬ ಯಾವ ಉತ್ಸಾಹವನ್ನೂ ಹೊಂದಿಲ್ಲದ ಗ್ರಾಮಗಳಲ್ಲಿ ಸುತ್ತುತ್ತಾ ಸಾಯಿನಾಥ್ ಕಟ್ಟಕಡೆಯ ಮನುಷ್ಯನ ಕಥೆ ಹೇಳುತ್ತಾ ಹೋದರು.

ಪಿ. ಸಾಯಿನಾಥ್ ಲೋಕದಲ್ಲಿ ಆದಿವಾಸಿಗಳಿದ್ದಾರೆ, ದಲಿತರಿದ್ದಾರೆ, ಅಸಹಾಯಕ ವೃದ್ಧರಿದ್ದಾರೆ, ತಿರುಗಿ ಬಿದ್ದ ಮಹಿಳೆಯರಿದ್ದಾರೆ. ಒಂದು ಹೊತ್ತಿನ ಊಟ ಸಿಗದೆ ಕಣ್ಣು ಮುಚ್ಚಿದ ಅಸಂಖ್ಯಾತ ಎಳೆಗೂಸುಗಳಿವೆ. ಸಾಯಲೆಂದೇ ಹುಟ್ಟಿದ ಒಂದು ಲೋಕವಿದೆ. ಹೀಗಿದೆ ಎಂದು ಯಾವ ತಜ್ಞ ಸಮಿತಿಗಳಿಗಾಗಲಿ, ಸರಕಾರದ ವರದಿಗಳಿಗಾಗಲಿ, ಸಂಸತ್ತಾಗಲಿ, ವಿಧಾನಸಭೆಗಳಾಗಲಿ ಬಿಚ್ಚಿಡಲಿಲ್ಲವಲ್ಲ. ಆ ಕಾರಣಕ್ಕಾಗಿಯೇ ಸಾಯಿನಾಥ್ ಮುಖ್ಯರು. ಇವರು ಭೇಟಿ ಕೊಟ್ಟ ಹಳ್ಳಿಗಳ ಕಡೆಗೆ ಪ್ರಧಾನಿಗಳು ದೌಡೆದ್ದು ಹೋದರು. ಮುಖ್ಯಮಂತ್ರಿಗಳು ಮೊದಲ ಬಾರಿ ಆ ನೆಲವನ್ನು ಸ್ಪರ್ಶಿಸಿದರು.

ಕಾಲಹಂಡಿ, ನೌಪಾದ, ಸುರ್ಗುಜಾಗಳೂ ಇವೆ ಎನ್ನುವುದು







**ಸಾಯಿನಾಥ್ ಕೇವಲ ಪತ್ರಕರ್ತ ಮಾತ್ರವಲ್ಲ, ಆತ ಒಬ್ಬ ಕ್ರುಸೇಡರ್. ಹಾಗಾಗಿಯೇ ಅವರಿಗೆ ವಿರಾಮ ಎಂಬುದಿಲ್ಲ. ಬರದ ಮೂಲಕ ಬದುಕಿನ ಕಥೆ ಹೇಳುತ್ತಾ ಹೋದ ಅನಂತರ 'ದಿ ಹಿಂದೂ' ಪತ್ರಿಕೆಗೆ ಅವರು ದಲಿತರ ನಿಟ್ಟುಸಿರಿನ ಸರಣಿ ಬರೆದರು. ಅದುವರೆಗೂ ದಲಿತ ಲೋಕ ಅನುಭವಿಸುತ್ತಿದ್ದ ನೋವನ್ನು ಮಾಧ್ಯಮದ ಮುಖ್ಯಧಾರೆಗೆ ತಂದರು.**



ನಮಗೂ ನಿಮಗೂ ಗೊತ್ತಾಯಿತು. ಭಾರತ ಎಂಬ ಪ್ರಹಸನವನ್ನು ಸಾಯಿನಾಥ್ ಕಣ್ಣಿಗೆ ಕಟ್ಟುವಂತೆ ಕೊಟ್ಟರು.

ಈ ಎಲ್ಲವೂ ಈ ಎಲ್ಲರೂ ಹಾಗಾಗೇ ಈ ಪುಸ್ತಕದ ಒಳಗೆ ಸೇರಿದ್ದಾರೆ. ವಿದ್ಯುತ್ ಇಲ್ಲದ, ದೂರವಾಣಿ ಗೊತ್ತಿಲ್ಲದ, ಟೇಪ್ ರೆಕಾರ್ಡರ್ ಆನ್ ಮಾಡಲು ಸಾಧ್ಯವಿಲ್ಲದ, ಕೂರಲು ಸ್ಥಳವಿಲ್ಲದ, ಟೈಪ್ ಮಾಡಲು ಕಂಪ್ಯೂಟರ್ ಇಲ್ಲದ, ಸರಿಯಾಗಿ ಊಟವೂ ಸಿಗದ ಪರಿಸ್ಥಿತಿಯಲ್ಲಿ ಪಿ. ಸಾಯಿನಾಥ್ ಈ ಎಲ್ಲಾ ವರದಿಗಳನ್ನು ಬರೆದಿದ್ದಾರೆ. ಈ ವರದಿಗಳು 'ನೊಂದವರೆದೆಯ ನೋವಿನ ಕೂಗನು' ಜಗತ್ತಿಗೆ ಸಾರಿವೆ. ಸರಕಾರಗಳು ಬೆಚ್ಚಿ ಬೀಳುವಂತೆ ಮಾಡಿವೆ. ಸಾಯಿನಾಥ್ ಹಾಗೆ ಬರೆದ ಕಥೆಗಳೇ 'ಎವರಿಬಡಿ ಲವ್ಸ್ ಎ ಗುಡ್ ಡ್ರಾಟ್' ಆಗಿ ಹೊರಬಂತು. ಇದು ಇನ್ನಷ್ಟು ತಲ್ಲಣಕ್ಕೆ ಕಾರಣವಾಯಿತು. ಸಾಯಿನಾಥ್ ಅವರ ಈ ಗ್ರಾಮೀಣ ಬದುಕಿನ ಶೋಧನೆಗೆ ಮ್ಯಾಗ್ಸೇಸೆ ಪ್ರಶಸ್ತಿ ಸಂದಿತು. ಯುರೋಪಿಯನ್ ಕಮಿಷನ್ ನ ಅತಿ ದೊಡ್ಡ ಪತ್ರಿಕೋದ್ಯಮ ಗೌರವ ಸಿಕ್ಕಿತು. 'ಎವರಿಬಡಿ ಲವ್ಸ್ ಎ ಗುಡ್ ಡ್ರಾಟ್' ಪುಸ್ತಕವೊಂದೇ ಜಗತ್ತಿನ 13 ಪ್ರಶಸ್ತಿಗಳನ್ನು ಬಗಲಿಗೆ ಹಾಕಿಕೊಂಡಿತು. ಜಗತ್ತಿನ ನಾನಾ ಭಾಗಗಳಿಗೆ ನಿಜ ಭಾರತದ ಬದುಕನ್ನು ಅನಾವರಣ ಮಾಡಿದವು. ಇಂಡಿಯಾ ಶೈನಿಂಗ್ ಕಾಲದಲ್ಲಿ ಒಬ್ಬ ಸಾಯಿನಾಥ್ ನಿಟ್ಟುಸಿರ ಗಾಥೆ ಬರೆಯುತ್ತಾ ಹೋದರು.

ಈ ಕೃತಿ 'ಎವರಿಬಡಿ ಲವ್ಸ್ ಎ ಗುಡ್ ಡ್ರಾಟ್' ದೇಶದ ಪ್ರಜ್ಞೆಯನ್ನು ಕಲಕಿದೆ. ಈ ದೇಶದ ಕೊನೆಯ ಪ್ರಜೆ ಬದುಕುತ್ತಿರುವ ಬಗೆ ಹೇಗೆ ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ. ಈ ಕಾರಣಕ್ಕಾಗಿಯೇ ಈ 'ಕೆಟ್ಟ ಹುಡುಗ' ನ ಬರಹಗಳು ಜಗತ್ತಿನ ಹಲವು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನದ ವಿಷಯವಾಗಿವೆ. ಸಾಯಿನಾಥ್ ಈ ಕೃತಿಗಾಗಿ ಲಕ್ಷಾಂತರ ಕಿ. ಮೀ. ಸಂಚರಿಸಿದ್ದಾರೆ. ರೈತರ ಆತ್ಮಹತ್ಯೆ, ಸಾಲದ ಹೊರೆ, ಕೃಷಿಯ ವಾಣಿಜ್ಯೀಕರಣದ ಬಗ್ಗೆ ಭಿನ್ನ ನೋಟ ಹರಿಸಿದ್ದಾರೆ. ಈ ಎಲ್ಲವೂ ಹೇಗೆ ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾಗಿದೆ ಎಂಬುದನ್ನು ವಿವರಿಸಿದ್ದಾರೆ. ಈ ಕಥನಗಳ ಕಾರಣಗಳಿಗಾಗಿಯೇ ಸಾಯಿನಾಥ್ ಎಲ್ಲರಿಗೂ ಇಷ್ಟ. ಈತ ಮಾಧ್ಯಮ ಲೋಕದ ಭಿನ್ನ ಪಯಣಿಗ.

ಸಾಯಿನಾಥ್ ಕೇವಲ ಪತ್ರಕರ್ತ ಮಾತ್ರವಲ್ಲ, ಆತ ಒಬ್ಬ ಕ್ರುಸೇಡರ್. ಹಾಗಾಗಿಯೇ ಅವರಿಗೆ ವಿರಾಮ ಎಂಬುದಿಲ್ಲ. ಬರದ ಮೂಲಕ ಬದುಕಿನ ಕಥೆ ಹೇಳುತ್ತಾ ಹೋದ ಅನಂತರ 'ದಿ ಹಿಂದೂ' ಪತ್ರಿಕೆಗೆ ಅವರು ದಲಿತರ ನಿಟ್ಟುಸಿರಿನ ಸರಣಿ ಬರೆದರು. ಅದುವರೆಗೂ ದಲಿತ ಲೋಕ ಅನುಭವಿಸುತ್ತಿದ್ದ ನೋವನ್ನು ಮಾಧ್ಯಮದ ಮುಖ್ಯಧಾರೆಗೆ ತಂದರು. ಕಬಡ್ಡಿ ಪಂದ್ಯದಲ್ಲಿ ದಲಿತರ ಗುಂಪೊಂದು ಗೆದ್ದುಬಿಟ್ಟಿತು ಎಂಬ ಕಾರಣಕ್ಕೆ ಅವರ ಕೊಲೆಗೇ ಮುಂದಾದ, ತನ್ನ ಮುಂದೆ ಶುಭ್ರವಾದ ಬಿಳಿಬಟ್ಟೆ ಧರಿಸಿದ ಎಂಬ ಕಾರಣಕ್ಕೆ ಕೆಂಗಣ್ಣಿಗೆ ಗುರಿಯಾದ, ಪೋಸ್ಟ್ ಮ್ಯಾನ್ ಒಬ್ಬ ತನ್ನ ಮುಂದೆ ಸೈಕಲ್ ಏರಿ ಹೋದ ಎಂಬ ಕಾರಣಕ್ಕೆ ಕೊಲೆಯಾಗಿ ಹೋದ. ಎಲ್ಲಾ ಹಳ್ಳಿಗಳ ಹೊಟೇಲ್ ಗಳಲ್ಲಿ ಈಗಲೂ ಕದ್ದು ಮುಚ್ಚಿ ಜಾರಿಯಲ್ಲಿರುವ ಎರಡು ಲೋಟ ಪದ್ಧತಿ ಎಷ್ಟೊಂದು ಕಥೆಗಳನ್ನು ಅವರು ಹೊರಗೆಳೆಯುತ್ತಾ ಹೋದರು. ಸಾಯಿನಾಥ್ ಕಲಿಸಿದ್ದು ಪತ್ರಿಕೋದ್ಯಮದ ಪಾಠವನ್ನಲ್ಲ, ಬದುಕಿನ ಪಾಠವನ್ನು.

ಈ ಕಾರಣಕ್ಕಾಗಿಯೇ ನೊಬೆಲ್ ಪ್ರಶಸ್ತಿ ವಿಜೇತರಾದ ಅಮರ್ತ್ಯ ಸೇನ್ ಸಹ ದೇಶದ ಕ್ಷಾಮ ಹಾಗೂ ಹಸಿವಿನ ಬಗೆಗಿನ ಮಹಾನ್ ತಜ್ಞ ಎಂದು ಸಾಯಿನಾಥ್‌ರನ್ನು ಪ್ರಶಂಸಿಸಿದ್ದು.

ರಾಜಧಾನಿಯಲ್ಲಿ ವಿಧಾನಸೌಧದ ಸುತ್ತ ಗರಗರನೆ ಸುತ್ತುತ್ತಿರುವ ಪತ್ರಿಕೋದ್ಯಮಕ್ಕೆ ಖಂಡಿತ ರಾಜ್ಯದ ಭೂಪಟ ಗೊತ್ತಿಲ್ಲ. ಗುಲ್ಬರ್ಗಾ ಅದೆಲ್ಲಿದೆ? ಎಂದು ಕೇಳುವ ಪತ್ರಕರ್ತರೂ ಇರುವ ಈ ಕಾಲದಲ್ಲಿ ಸಾಯಿನಾಥ್ ಅಶಾಂತ ಸಂತನಂತೆ ಹಳ್ಳಿಗಳತ್ತ ಮುಖ ಮಾಡಿ ನಿಂತಿದ್ದಾರೆ. ಸಾಯಿನಾಥ್ ಹೀಗೆ ಸುತ್ತುತ್ತಾ ಸುತ್ತುತ್ತಾ ಹೋದಂತೆ ಆ ಲೋಕದ ಅರಿವು ಪಡೆದ ಒಂದು ಪಡೆ ಅವರೊಂದಿಗೆ ಎದ್ದು ನಿಲ್ಲುತ್ತಿದೆಯಲ್ಲಾ ಅದು ಭಾರತದ ಪತ್ರಿಕೋದ್ಯಮದ ಬಗ್ಗೆ ಇನ್ನೂ ಭರವಸೆ ಇಟ್ಟುಕೊಳ್ಳಲು ಇರುವ ಒಂದಷ್ಟು ಬೆಳಕಿನ ಕಿರಣಗಳು.

ಸಾಯಿನಾಥ್ ಗುಳೆ ಎದ್ದವರ ಲೋಕದಲ್ಲಿ ನಡೆದಾಡಿದವರು. ಗುಳೇ ಹೊರಟವರ ಗುಂಪಲ್ಲಿ ಸಾಗುತ್ತಿರುವ ಸಾಯಿನಾಥರನ್ನು ಚಿತ್ರಿಸಿಕೊಳ್ಳಲು ಯತ್ನಿಸುತ್ತಿದ್ದೇನೆ. ಸನ್ ಶೈನ್ ಲೋಕದಿಂದ ಸೋಬಿಂಗ್ ಲೋಕಕ್ಕೆ ಗುಳೆ ಎದ್ದು ಹೋದವರು. ಈ ಗುಳೇ ಎದ್ದ ಭಿನ್ನ ಪಥಿಕನ ಕೃತಿ ಈಗ ಕನ್ನಡದಲ್ಲಿ ಬರುತ್ತಿದೆ. ಬರದ ಸಂಕಟದ ಲೋಕವನ್ನು ಅನಾವರಣ ಮಾಡುವ 'ಬರ ಅಂದ್ರೆ ಎಲ್ಲರಿಗೂ ಇಷ್ಟ' ಭಾರತದ ಪತ್ರಿಕೋದ್ಯಮ ಹೇಗಿರಬೇಕು ಎಂಬುದಕ್ಕೆ ಕನ್ನಡಿ ಹಿಡಿಯುವ ಕೃತಿ.

ಪ್ರಸ್ತುತ ಎಲ್ಲಾ ಹುದ್ದೆಗಳನ್ನು ತೊರೆದಿರುವ ಪಿ ಸಾಯಿನಾಥ್ ಜನರು ಬದುಕಿದ ರೀತಿಯನ್ನು, ಬದುಕುತ್ತಿರುವ ರೀತಿಯನ್ನು ಮುಂದಿನ ಪೀಳಿಗೆಗೆ ಕಾಪಿಡುವ, ಇಂದಿನ ಪೀಳಿಗೆಗೆ ಮನವರಿಕೆ ಮಾಡಿಕೊಡುವ ಕೆಲಸಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. 'ಪರಿ' ಎಂದು ಮುದ್ದಾಗಿ ಕರೆಯಲ್ಪಡುವ ruralindiaonline.org ಅಂತರ್ಜಾಲ ತಾಣ ನಿನ್ನೆ ಇಂದು ನಾಳೆಗಳ ಕೂಡುತಾಣ. ದೇಶದ ಬಹುತೇಕ ಎಲ್ಲಾ ಭಾಷೆಗಳಲ್ಲಿ ದೇಶದ ಮೂಲೆ ಮೂಲೆಯ ಗ್ರಾಮಗಳ ಕಥೆಯನ್ನು ಬಿಚ್ಚಿಡುವುದು ಸಾಯಿನಾಥ್ ಕನಸು. ಈ ಕನಸಿನ ಹಿಂದೆ ಅಳಿದು ಹೋಗುತ್ತಿರುವ ದೇಸಿತನ, ಅಳಿದು ಹೋಗುತ್ತಿರುವ ಭಾಷೆಯ ಬಗೆಗಿನ ಕಳಕಳಿಯಿದೆ. 'ಈ ಪರಿಯ ಸೊಬಗು ಇನ್ನಾವ ದೇವರಲಿ ನಾ ಕಾಣೆ..' ಎನ್ನುವ ರೀತಿಯಲ್ಲಿಯೇ ಪಿ ಸಾಯಿನಾಥ್ ಈ 'ಪರಿ' ಯನ್ನು ಕಟ್ಟಿಕೊಟ್ಟಿದ್ದಾರೆ ■





# ನೀರೆಂಬ ನೀಲಿ ಚಿನ್ನ...

■ ಡಾ. ಎನ್. ಜಗದೀಶ್ ಕೊಪ್ಪ

ಇಡೀ ಜಗತ್ತನ್ನು ಗೆಲ್ಲಲು ಹೊರಟ ಮಹತ್ವಾಕಾಂಕ್ಷಿ ಗ್ರೀಸ್‌ನ ಅಲೆಕ್ಸಾಂಡರ್ ಕ್ರಿಸ್ತಪೂರ್ವ 326 ರಲ್ಲಿ ಭಾರತದ ನೆಲದಲ್ಲಿದ್ದ. ನಿರಂತರಯುದ್ಧದಿಂದ ಬಸವಳಿದ ಅವನ ಸೈನಿಕರ ಅಸಹಕಾರಕ್ಕೆ ಮಣಿದು ಅಂತಿಮವಾಗಿ 323 ರಲ್ಲಿ ಅಂದಿನ ಪರ್ಷಿಯಾ ಮೂಲಕ (ಇಂದಿನ ಇರಾಕ್, ಇರಾನ್ ಮತ್ತು ಟರ್ಕಿ) ಗ್ರೀಸ್ ದೇಶಕ್ಕೆ ಭೂಮಾರ್ಗದಲ್ಲಿ ಪ್ರಯಾಣ ಹೊರಟ. ಆದರೆ ಕೇವಲ ಮುವತ್ತೆರಡು ವಯಸ್ಸಿನ ಆತ ಮಾರ್ಗ ಮಧ್ಯ ನಿಗೂಢ ಕಾಯಿಲೆಗೆ ತುತ್ತಾಗಿ ಮರಣವನ್ನಪ್ಪಬೇಕಾಯಿತು. ಅರ್ಧ ಜಗತ್ತನ್ನು ಗೆದ್ದಿದ್ದ ಅಲೆಕ್ಸಾಂಡರ್ ತಾನು ಸಾಯುವ ಕೊನೆಯ ಗಳಿಗೆಯಲ್ಲಿ ಬಯಸಿದ್ದು ಕೇವಲ ಒಂದು ಬೊಗಸೆ ನೀರನ್ನು ಮಾತ್ರ. ಅವನ ದುರಾದೃಷ್ಟಕ್ಕೆ ಆ ಮರುಭೂಮಿಯಲ್ಲಿ ಅದೂ ಸಹ ದಕ್ಕಲಿಲ್ಲ.. ತನ್ನ ಆ ದೈನೇಸಿ ಸ್ಥಿತಿಯಲ್ಲಿ ತನ್ನ ಶವವನ್ನು ಹೂಳುವಾಗ ನನ್ನ ಹಸ್ತಗಳೆರೆಡು ಭೂಮಿಯ ಮೇಲೆ ಎಲ್ಲರಿಗೂ ಕಾಣುವಂತಿರಲಿ ಎಂದು ತನ್ನ ಸೈನಿಕರಿಗೆ ದೊರೆ ಅಲೆಕ್ಸಾಂಡರ್ ಆದೇಶಿಸಿದ್ದ. ಬರಿಗೈಲಿ ಭೂಮಿಗೆ ಬಂದ ಅಲೆಕ್ಸಾಂಡರ್ ಹೋಗುವಾಗ ಏನನ್ನೂ ತೆಗೆದುಕೊಂಡು ಹೋಗಲಿಲ್ಲ" ಎಂಬ ಸಂದೇಶವನ್ನು ಜಗತ್ತಿಗೆ ಸಾರುವುದು ಅವನ ಉದ್ದೇಶವಾಗಿತ್ತು. ಇಂತಹ ಚರಿತ್ರೆಯ ಕಟುವಾಸ್ತವ ಸಂಗತಿಗಳು ಮತ್ತು ಕಹಿ ಸತ್ಯಗಳು ಈ ಜಗತ್ತಿಗೆ ಅರಿವಾದಾಗ ಮಾತ್ರ ನಮಗೆ ನೀರಿನ ಮಹತ್ವವೂ ಅರಿವಾಗಬಲ್ಲದು.

ಆಧುನಿಕತೆ ಮತ್ತು ಅಭಿವೃದ್ಧಿಯ ನೆಪದಲ್ಲಿ ದಾಪುಗಾಲು ಹಾಕುತ್ತಿರುವ ವರ್ತಮಾನದ ಜಗತ್ತಿಗೆ ತನ್ನ ನಿಶ್ಚಿತ ಗುರಿ ಏನೆಂಬುದರ ಬಗ್ಗೆ ಕಾಳಜಿಯಿದ್ದಂತೆ ಕಾಣುವುದಿಲ್ಲ. ಮನುಷ್ಯನ ಜ್ಞಾನ ವಿಕಾಸವಾದಂತೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನಗಳ ಅವಿಷ್ಕಾರ ಮತ್ತು ಪ್ರಯೋಗಗಳು ಯಶಸ್ವಿಯಾಗುತ್ತಿದ್ದಂತೆ, ಆಧುನಿಕ ಜಗತ್ತಿನ ಮನುಷ್ಯನಲ್ಲಿ ಪ್ರಕೃತಿಯನ್ನು ಮಣಿಸುವ, ಶೋಷಿಸುವ ಅಹಂಕಾರ ತಲೆಯೆತ್ತತೊಡಗಿದೆ. ಈ ನೆಲದ ನೀರು, ಗಾಳಿ, ಗಿಡ, ಮರ, ಪ್ರಾಣಿ, ಬೆಟ್ಟ, ಗುಡ್ಡ ಏನೊಂದು ಅವನ ವಕ್ರ ದೃಷ್ಟಿಯಿಂದ ಪಾರಾಗಲು ಅವಕಾಶವಿಲ್ಲದಂತಾಗಿದೆ, ನಾವು ಈ ಭೂಮಿಯ ಒಡೆಯರಲ್ಲ, ಕೇವಲ ವಾರಸುದಾರರು ಮಾತ್ರ, ಇಲ್ಲಿಯ ಪರಿಸರವನ್ನು ಉಳಿಸಿ,ಬೆಳಸಿ, ಮುಂದಿನ ತಲೆಮಾರಿಗೆ ವರ್ಗಾಯಿಸುವ ನೈತಿಕ ಜವಾಬ್ದಾರಿಯೊಂದು ನಮ್ಮ ಮೇಲಿದೆ ಎಂಬ ಪ್ರಜ್ಞೆ ಇದೀಗ ವಿಸ್ಮೃತಿಗೆಜಾರಿದೆ. ಹಾಗಾಗಿ ನೈಸರ್ಗಿಕ ಕೊಡುಗೆಯಾದ ನೀರು ಕೂಡ ಇಂದಿನ ದಿನಗಳಲ್ಲಿ ಮಾರಾಟದ ಸರಕಾಗಿ ಬಿಕರಿಯಾಗುತ್ತಿದೆ. ಉಳ್ಳವರಿಗಷ್ಟೇ ಈ ಜಗತ್ತು ಎಂಬ ಅಘೋಷಿತ ನಿಯಮವೊಂದು ಯಾವುದೇ ಗಡಿರೇಖೆಗಳು ಮತ್ತು ಭಾಷೆಯ ಹಂಗಿಲ್ಲದೆ ವರ್ತಮಾನದ ಜಗತ್ತಿನಲ್ಲಿ ಜಾರಿಯಲ್ಲಿದೆ.

ಹರಿಯವ ನೀರಿಗೆ ಗಂಗೆಯೆಂದು ಪೂಜಿಸಿ ಕೈಯೆತ್ತಿ ಮುಗಿದವರ ಕಣ್ಣೆದುರು ಈ ನೆಲದ ಮೇಲಿನ ನೀರು, ಕಲುಷಿತಗೊಂಡು ಕುಡಿಯಲುಆಗದೆ, ಬಳಸಲೂ ಆಗದ ಸ್ಥಿತಿಯಲ್ಲಿ ನಿಷ್ಪ್ರಯೋಜಕವಾಗಿದೆ. ಅಭಿವೃದ್ಧಿ ಎಂದರೆ, ನಿಸರ್ಗದ ಮೇಲಿನ ಅಘೋಷಿತ ಯುದ್ಧ ಎಂಬ ಸ್ಥಿತಿಯಲ್ಲಿರುವ ಇಪ್ಪತ್ತೊಂದನೆಯ ಶತಮಾನದಲ್ಲಿ ಇದರ ನೇರ

ಪರಿಣಾಮಕ್ಕೆ ಒಳಗಾದವರು ಮಾತ್ರ ಕಡು ಬಡವರು. ಅಮೃತಎಂದು ಕರೆಸಿಕೊಳ್ಳುವ ಹಾಲಿಗೂ, ನೀರಿಗೂ ಬೆಲೆಯಲ್ಲಿ ಈಗ ಯಾವ ವೆತ್ಯಾಸವೂ ಉಳಿದಿಲ್ಲ "ಮುಂದಿನ ದಿನಗಳಲ್ಲಿ ಈ ಜಗತ್ತಿನಲ್ಲಿ ಯುದ್ಧವೆಂಬುದು ನಡೆಯುವುದಾದರೆ, ಅದು ನೀರಿಗಾಗಿ ಮಾತ್ರ" ಎಂಬ ಮಾತು ಕಳೆದ ಎರಡು ದಶಕಗಳಿಂದ ಕ್ಲೀಷೆಯ ಮಾತಿನಂತೆ ತೋರತೊಡಗಿದೆ. ಅತ್ಯಾಧುನಿಕತೆ ಮತ್ತು ನಾಗರೀಕತೆಯ ಪರಿಣಾಮದಿಂದ ಜಾಗತಿಕ ಮಟ್ಟದಲ್ಲಿ ಹೆಚ್ಚಿದ ಮನುಷ್ಯನ ಅನುಭೋಗ ಪ್ರವೃತ್ತಿಯಿಂದಾಗಿ ನಿಸರ್ಗದ ಕೊಡುಗೆಗಳಾದ ಗಾಳಿ, ನೀರು ಇನ್ನಿಲ್ಲದಂತೆ ಕಲುಷಿತಗೊಂಡವು.

ಈ ಕಾರಣಕ್ಕಾಗಿ ಖ್ಯಾತ ನಾಟಕಕಾರ ಬರ್ನಾಡ್ ಷಾ, "ವಿಜ್ಞಾನ ಅಥವಾ ತಂತ್ರಜ್ಞಾನದಿಂದ ಒಂದು ಸಮಸ್ಯೆ ಪರಿಹಾರವಾಯಿತು ಎಂದರೆ, ಹತ್ತು ಸಮಸ್ಯೆಗಳು ಹೊಸದಾಗಿ ಸೃಷ್ಟಿಯಾದವು ಎಂದರ್ಥ' ಎಂಬ ಅರ್ಥಗರ್ಭಿತ ಮಾತುಗಳನ್ನಾಡಿದ್ದರು. ಕಳೆದ ಇಪ್ಪತ್ತು ಲಕ್ಷ ವರ್ಷಗಳಲ್ಲಿ ನಡೆದ ಪರಿಸರದ ಮೇಲಿನ ದಾಳಿಯಿಂದ ಆದ ನಷ್ಟ, ಈಗ ಕೇವಲ ಐವತ್ತು ವರ್ಷಗಳಲ್ಲಿ ಜರುಗಿದೆ ಎಂದರೆ, ಮನುಷ್ಯನ ಭವಿಷ್ಯದ ಹಾದಿ ಯಾವುದು? ಎಂಬುದು ಸಧ್ಯ ನಮ್ಮ ಮುಂದಿರುವ ಪ್ರಶ್ನೆ. ಜಾಗತಿಕ ಮಟ್ಟದಲ್ಲಿ ಪ್ರತಿವರ್ಷ ಪರಿಸರದ ರಕ್ಷಣೆಗಾಗಿ ಹಲವಾರು ಆಚರಣೆಗಳು ಜಾರಿಯಲ್ಲಿವೆ. ವಿಶ್ವ ಸಂಸ್ಥೆಯು ಶುದ್ಧ ಕುಡಿಯುವ ನೀರಿನ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮಾರ್ಚ್ 22 ರ ದಿನಾಂಕವನ್ನು ವಿಶ್ವ ಜಲಾ ದಿನಾಚರಣೆಯನ್ನಾಗಿ ಆಚರಿಸುತ್ತಿದೆ. ಇಂತಹ ಆಚರಣೆಗಳ ನೆಪದಲ್ಲಿ ನಡೆಯುವ ಕಾರ್ಯಕ್ರಮಗಳು ನೀರಿನ ಮಹತ್ವದ ಬಗ್ಗೆ ಒಂದಿಷ್ಟು ಅರಿವು ಮೂಡಿಸಿದಾಗ ಮಾತ್ರ ಆಚರಣೆಗೆ ಒಂದಿಷ್ಟು ಅರ್ಥ ಬರಲು ಸಾಧ್ಯ.

ಸಧ್ಯ ಭೂಮಿಯನ್ನು ಶೇಕಡ 70 ಭಾಗ ನೀರು ಆವರಿಸಿಕೊಂಡಿದ್ದರೂ ಸಹ ಇದರಲ್ಲಿ ಶೇಕಡ 97.5 ರಷ್ಟು ನೀರು ಸಮುದ್ರದಲ್ಲಿಶೇಖರವಾಗಿದೆ. ಉಳಿಕೆ ಭಾಗದ ನೀರಾದ 35 ಚದುರ ಘನ ಕಿಲೋಮೀಟರ್‌ನಷ್ಟು ನೀರಿನಲ್ಲಿ ಶೇಕಡ 68.7 ರಷ್ಟು ನೀರು ಹಿಮಗೆಡ್ಡೆಯ ರೂಪದಲ್ಲಿದೆ. ಶೇಕಡ 30 ರಷ್ಟು ನೀರು ಅಂತರ್ಜಲ ರೂಪದಲ್ಲಿದ್ದು, ಭೂಮಿಯ ಮೇಲ್ಪದರಿನಲ್ಲಿ 0.03 ರಷ್ಟು ನೀರಿದೆ.ಈ ನೀರಿನ ಪ್ರಮಾಣದಲ್ಲಿ ಶೇಕಡ 87 ರಷ್ಟು ಕೊಳಗಳಲ್ಲಿ, ಶೇಕಡ 11 ರಷ್ಟು ಭಾಗ ಜೌಗು ಪ್ರದೇಶದಲ್ಲಿ ಮತ್ತು ಶೇಕಡ 2ರಷ್ಟುನೀರು ನದಿಗಳಲ್ಲಿ ಶೇಖರವಾಗಿದೆ ಎಂದು ಅಂದಾಜಿಸಲಾಗಿದೆ.



ಇದು ಜಾಗತಿಕ ಮಟ್ಟದ ನೀರಿನ ಅಂಕಿ ಅಂಶವಾದರೆ, ನೀರಿನ ಲಭ್ಯತೆಯ ಅಂಕಿ ಅಂಶಗಳತ್ತ ಗಮನ ಹರಿಸಿದರೆ, ನಿಜಕ್ಕೂ ಭವಿಷ್ಯದ ಬಗ್ಗೆ ಆತಂಕ ಮೂಡುತ್ತದೆ. ಜಗತ್ತಿನ ಜನಸಂಖ್ಯೆಯಲ್ಲಿ (ಅಂದಾಜು 700 ಕೋಟಿ) ಶೇಕಡ 60 ರಷ್ಟು ಜನತೆ ವಾಸಿಸುತ್ತಿರುವ ಏಷ್ಯಾಖಂಡದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಕೇವಲ ಶೇಕಡ 37 ರಷ್ಟು ಶುದ್ಧ ಕುಡಿಯುವ ನೀರು ಮಾತ್ರ ಲಭ್ಯವಾಗುತ್ತಿದೆ. ಜಗತ್ತಿನ 'ಶೇಕಡ 13 ರಷ್ಟು ಇರುವ ಆಫ್ರಿಕಾ ಖಂಡಕ್ಕೆ ಶೇಕಡ 11 ರಷ್ಟು, ಶೇಕಡ ಒಂದರಷ್ಟು ಜನಸಂಖ್ಯೆ ಇರುವ ಆಸ್ಟ್ರೇಲಿಯಾ ಖಂಡದಲ್ಲಿ ಶೇಕಡ 6ರಷ್ಟು ನೀರು ದೊರೆಯುತ್ತಿದೆ. ದಕ್ಷಿಣ ಅಮೇರಿಕಾ ಖಂಡದ ಜನಸಂಖ್ಯೆ ಜಗತ್ತಿನ ಶೇಕಡ 6 ರಷ್ಟು ಇದ್ದು, ಶೇಕಡ 26 ರಷ್ಟು ಪ್ರಮಾಣದಲ್ಲಿ ನೀರಿನ ಲಭ್ಯತೆಯಿದೆ. ಉತ್ತರ ಅಮೇರಿಕಾದ ಜನಸಂಖ್ಯೆ ಜಾಗತಿಕ ಮಟ್ಟದ ಶೇಕಡ 8 ರಷ್ಟಿದ್ದು, ನೀರಿನ ಲಭ್ಯತೆಯ ಪ್ರಮಾಣ ಶೇಕಡ 15 ರಷ್ಟಿದೆ. ಜಗತ್ತಿನ ತೃತೀಯ ಜಗತ್ತಿನ ರಾಷ್ಟ್ರಗಳಾದ ಏಷ್ಯಾ ಮತ್ತು ಆಫ್ರಿಕಾ ಖಂಡದ ರಾಷ್ಟ್ರಗಳಲ್ಲಿ ಕಳೆದ ಎರಡು ದಶಕಗಳಲ್ಲಿ ನೀರಿನ ಕೊರತೆಎಲ್ಲಾ ರಾಷ್ಟ್ರಗಳ ಸರ್ಕಾರಗಳ ಪಾಲಿಗೆ ಅತಿ ದೊಡ್ಡ ಸವಾಲಾಗಿ ಪರಿಣಮಿಸಿದೆ. ಕುಡಿಯುವ ನೀರಿನ ಕೊರತೆ ನೀಗಿಸುವ ನಿಟ್ಟಿನಲ್ಲಿವಿಶ್ವ ಸಂಸ್ಥೆ 2000 ದಲ್ಲಿ ಶತಮಾನದ ಅಭಿವೃದ್ದಿಯ ಗುರಿಗಳು (Milleniam Devlopment Goals) ಎಂಬ 15 ವರ್ಷಗಳ ಅವಧಿಯ ಮಹತ್ವಾಕಾಂಕ್ಷೆಯ ಯೋಜನೆಯನ್ನು ರೂಪಿಸಿತ್ತು. ಈ ಯೋಜನೆ ಮುಂದಿನ ವರ್ಷ ಅಂತ್ಯ ಗೊಳ್ಳಲಿದ್ದು, ಇದರ ಮುಖ್ಯ ಗುರಿಗಳಾಗಿದ್ದ ಜಾಗತಿಕ ಮಟ್ಟದ ಆರೋಗ್ಯ, ಹಸಿವು ಮತ್ತು ಬಡತನ ನಿವಾರಣೆ ಹಾಗೂ ಶುದ್ಧ ಕುಡಿಯುವ ನೀರಿನ ಯೋಜನೆಗಳಲ್ಲಿ ಆರೋಗ್ಯ ಮತ್ತು ಬಡತನ ಒಂದಿಷ್ಟು ಸುಧಾರಿಸಿದ್ದು, ಶೌಚಾಲಯ ಮತ್ತು ಕುಡಿಯುವ ನೀರು ಇವುಗಳು ಸಮಸ್ಯೆಗಳಾಗಿ ಉಳಿದಿವೆ ಎಂದು ಅರ್ಥಶಾಸ್ತ್ರಜ್ಞರು ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಕಳೆದ ಎರಡು ದಶಕದಲ್ಲಿ ತೀವ್ರಗೊಂಡ ಜಾಗತೀಕರಣ ಮತ್ತುಉದಾರೀಕರಣದ ಫಲವಾಗಿ ಜಗತ್ತಿನ ನಗರಗಳು ಅಸ್ವಾಭಾವಿಕವಾಗಿ  ಬೆಳೆಯತೊಡಗಿರುವುದು ಯೋಜನೆಯ ವೈಫಲ್ಯಕ್ಕೆ ಪ್ರಮುಖ ಕಾರಣ ಎಂದು ಗುರುತಿಸಲಾಗಿದೆ.

ಇತ್ತೀಚೆಗಿನ ದಿನಗಳಲ್ಲಿ ತೀವ್ರಗೊಂಡ ನಗರೀಕರಣದಿಂದಾಗಿ ಗ್ರಾಮಾಂತರ ಪ್ರದೇಶಗಳಿಂದ ನಗರಗಳಿಗೆ ವಲಸೆ ಬರುವ ಜನರುವಸತಿ, ಶೌಚಾಲಯ ಮತ್ತು ಕುಡಿಯುವ ನೀರಿನಿಂದ ವಂಚಿತರಾಗಿದ್ದಾರೆ. ನೈಸರ್ಗಿಕವಾಗಿ ಪುಕ್ಕಟೆ ದೊರೆಯುತ್ತಿದ್ದ ನೀರು ಇಂದು ಬಡಜನತೆಯ ಪಾಲಿಗೆ ಕೈಗೆಟುಕದ ನೀಲಿಚಿನ್ನವೆಂಬಂತಾಗಿದೆ. ನೀರಿನ ಖಾಸಗೀಕರಣ ಬಹುರಾಷ್ಟ್ರೀಯ ಕಂಪನಿಗಳ ಪಾಲಿಗೆ ಬಂಡವಾಳವಿಲ್ಲದ ಲಾಭದ ದಂಧೆಯಾಗಿದೆ. ಆಮಿಷಕ್ಕೆ ಬಲಿಯಾದ ಜಗತ್ತಿನ ಹಲವು ರಾಷ್ಟ್ರಗಳ ಸರ್ಕಾರಗಳು ತಮ್ಮ ನೆಲದ ನದಿಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಗುತ್ತಿಗೆ ನೀಡಿವೆ."ಹೊಳೆ ನೀರಿಗೆ ದೊಣೆ ನಾಯಕನ ಅಪ್ಪಣೆಯಾ?" ಎಂಬ ಮಾತು ಇಪ್ಪತ್ತೊಂದನೆಯ ಶತಮಾನದಲ್ಲಿ ತನ್ನ ಅರ್ಥ ಕಳೆದುಕೊಂಡಿದೆ.

2050 ರ ವೇಳೆಗೆ ಜಗತ್ತಿನ ಜನಸಂಖ್ಯೆ ಈಗಿನ 700 ಕೋಟಿಯಿಂದ 1000 ಕೋಟಿಗೆ ತಲುಪುವ ಸಾಧ್ಯತೆಯಿದ್ದು ಇವರಿಗೆ ಕುಡಿಯುವ ನೀರು ಒದಗಿಸುವ ಬಗೆ ಹೇಗೆ? ಇದಕ್ಕೆ ಯಾರ ಬಳಿಯೂ ಉತ್ತರವಿಲ್ಲ. ಸದ್ಯದ ಬೇಡಿಕೆಗಿಂತ ಶೇಕಡ 80 ರಷ್ಟು ಹೆಚ್ಚಿನ ನೀರಿನ ಅವಶ್ಯಕತೆ ಇದೆ ಎಂದು ಜಲತಜ್ಞರು ಅಂದಾಜಿಸಿದ್ದಾರೆ. ಉತ್ತರ ಚೀನಾ, ಮಧ್ಯಪ್ರಾಚ್ಯ, ಭಾರತ ಮತ್ತು ದಕ್ಷಿಣ ಅಮೇರಿಕಾ ರಾಷ್ಟ್ರಗಳು ಮುಂದಿನ ದಿನಗಳಲ್ಲಿ ನೀರಿನ ಕೊರತೆ ಅನುಭವಿಸುವ ರಾಷ್ಟ್ರಗಳು ಎಂದು ಗುರುತಿಸಲಾಗಿದೆ. 2030 ರ ವೇಳೆಗೆ ಭಾರತವೂ ಸೇರಿದಂತೆ ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ ನಗರಕ್ಕೆ ವಲಸೆ ಬರುವವರ ಸಂಖ್ಯೆ ಹೆಚ್ಚಾಗುವ ಕಾರಣ ಅರ್ಧದಷ್ಟು ಜನಸಂಖ್ಯೆ ಕೊಳಗೇರಿ ನಿವಾಸಿಗಳಾಗುತ್ತಾರೆ ಎಂಬುದು ತಜ್ಞರ ಲೆಕ್ಕಾಚಾರ. ಭಾರತದಲ್ಲಿ ಸರಾಸರಿ ಒಬ್ಬ ವ್ಯಕ್ತಿಗೆ 70 ರಿಂದ 90 ಲೀಟರ್ ನೀರಿನಅವಶ್ಯಕತೆ ಇದ್ದು, ನಗರಗಳ ಕೊಳಗೇರಿಗಳಲ್ಲಿ ವಾಸಿಸುವ ಪ್ರತಿಯೊಬ್ಬ ವ್ಯಕ್ತಿಗೆ ಲಭ್ಯವಾಗುತ್ತಿರುವ ನೀರಿನ ಪ್ರಮಾಣ ಕೇವಲ 8 ಲೀಟರ್ ಮಾತ್ರ. ಮುಂಬೈ ನಗರದ ಕೊಳೆಗೇರಿಯಲ್ಲಿ ಪ್ರತಿ 5040 ಜನಸಂಖ್ಯೆಗೆ ಒಂದು ಶೌಚಾಲಯವಿದೆ ಎಂದರೆ, ಅಲ್ಲಿನನಿವಾಸಿಗಳ ಬದುಕು ಹೇಗಿರಬಹುದು ಊಹಿಸಿ.

ಭಾರತದ 32 ಪ್ರಮುಖ ನಗರಗಳ ಪೈಕಿ 22 ನಗರಗಳು ಕುಡಿಯುವ ನೀರಿನ ಅಭಾವ ಎದುರಿಸುತ್ತಿವೆ, ಇವುಗಳಲ್ಲಿ ಜೆಮ್ಶೆಡ್ಪುರ, ಬೇಡಿಕೆಯ ಶೇಕಡ 70 ರಷ್ಟು ಕೊರತೆ ಎದುರಿಸುತ್ತಿದ್ದು ಮೊದಲನೆಯ ಸ್ಥಾನದಲ್ಲಿದೆ. ನಂತರ ಕಾನ್ಪುರ, ಧನಾಬಾದ್, ಮೀರತ್, ಫರಿದಾಬಾದ್, ವಿಶಾಖಪಟ್ಟಣ, ಮಧುರೈ, ಹೈದರಾಬಾದ್ ನಗರಗಳು ಶೇಕಡ 30 ರಷ್ಟು ನೀರಿನ ಕೊರತೆ ಎದುರಿಸುತ್ತಿವೆ. ಮುಂಬೈನಗರ ಶೇಕಡ 24 ಮತ್ತು ದೆಹಲಿ ನಗರದಲ್ಲಿ ಶೆಕಡ 17 ರಷ್ಟು ನೀರಿನ ಕೊರತೆಯಿದೆ. ಕುಡಿಯುವ ನೀರಿಗಾಗಿ ಕಂಡು ಹಿಡಿದ ಕೊಳವೆಬಾವಿಯ ತಂತ್ರಜ್ಞಾನ ಈಗ ಬಹುತೇಕ ಬೇಸಾಯಕ್ಕೆ ಮೀಸಲಾಗಿದೆ. ಅನಾವಶ್ಯಕವಾಗಿ ವಾಣಿಜ್ಯ ಬೆಳೆಗಳಿಗೆ ಕೊಳವೆ ಬಾವಿ ಮೂಲಕ ನೀರು ಉಣಿಸುತ್ತಿರುವ ಪರಿಣಾಮ ದೇಶದೆಲ್ಲೆಡೆ, ಅಂತರ್ಜಲ ಮಟ್ಟ ಅಪಾಯಕಾರಿ ಮಟ್ಟಕ್ಕೆ ಕುಸಿದಿದೆ.

1951 ರಲ್ಲಿ ಭಾರತದಲ್ಲಿ 36 ಕೋಟಿ ಜನಸಂಖ್ಯೆ ಇದ್ದ ಸಮಯದಲ್ಲಿ ನೀರಿನ ಲಭ್ಯತೆಯ ಪ್ರಮಾಣ ಪ್ರತಿ ವ್ಯಕ್ತಿಗೆ ವರ್ಷವೊಂದಕ್ಕೆ 5 ಲಕ್ಷದ 77 ಸಾವಿರ ಲೀಟರ್ ನೀರು ಇತ್ತು. ಇದು 2010 ರ ವೇಳೆಗೆ ಒಂದು ಲಕ್ಷದ 82 ಸಾವಿರ ಲೀಟರ್ ಪ್ರಮಾಣಕ್ಕೆ ಕುಸಿದಿದ್ದು, ಮುಂದಿನ 2050ರ ವೇಳೆಗೆ 1 ಲಕ್ಷದ 14 ಸಾವಿರಕ್ಕೆ ಕುಸಿಯಬಹುದೆಂದು ನಿರೀಕ್ಷಿಸಲಾಗಿದೆ. ಭಾರತದಲ್ಲಿ ಪ್ರತಿ ದಿನ 1620 ಮಕ್ಕಳುನೀರಿಗೆ ಸಂಬಂಧಿಸಿದ ಕಾಯಿಲೆಗಳಿಂದ ಅಸುನೀಗುತ್ತಿದ್ದಾರೆ. ಇದು ದೇಶದಲ್ಲಿ ಸಂಭವಿಸುತ್ತಿರುವ ವಾಹನ ಅಪಘಾತ, ಏಡ್ಸ್, ಮತ್ತು ಮಲೇರಿಯಾ ಕಾಯಿಲೆಗಳ ಕಾರಣದಿಂದ ಸಾಯುವವರ ಸಂಖ್ಯೆಗಿಂತ ಹೆಚ್ಚಾಗಿದೆ.

ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಕೇವಲ ಶೇಕಡ 14 ರಷ್ಟು ಮಾತ್ರ ಶೌಚಾಲಯಗಳಿವೆ. ಭಾರತದ 100 ಕೋಟಿ ಜನರ ಕೈಯಲ್ಲಿ ಮೊಬೈಲ್‌ಗಳಿವೆ ಆದರೆ. ಮುಕ್ಕಾಲು ಮಂದಿಗೆ

**ಸಧ್ಯ ಭೂಮಿಯನ್ನು ಶೇಕಡ 70 ಭಾಗ ನೀರು ಆವರಿಸಿಕೊಂಡಿದ್ದರೂ ಸಹ ಇದರಲ್ಲಿ ಶೇಕಡ 97.5 ರಷ್ಟು ನೀರು ಸಮುದ್ರದಲ್ಲಿಶೇಖರವಾಗಿದೆ. ಉಳಿಕೆ ಭಾಗದ ನೀರಾದ 35 ಚದುರ ಘನ ಕಿಲೋಮೀಟರ್‌ನಷ್ಟು ನೀರಿನಲ್ಲಿ ಶೇಕಡ 68.7 ರಷ್ಟು ನೀರು ಹಿಮಗೆಡ್ಡೆಯ ರೂಪದಲ್ಲಿದೆ. ಶೇಕಡ 30 ರಷ್ಟು ನೀರು ಅಂತರ್ಜಲ ರೂಪದಲ್ಲಿದ್ದು, ಭೂಮಿಯ ಮೇಲ್ಪದರಿನಲ್ಲಿ 0.03 ರಷ್ಟು ನೀರಿದೆ.ಈ ನೀರಿನ ಪ್ರಮಾಣದಲ್ಲಿ ಶೇಕಡ 87 ರಷ್ಟು ಕೊಳಗಳಲ್ಲಿ, ಶೇಕಡ 11 ರಷ್ಟು ಭಾಗ ಜೌಗು ಪ್ರದೇಶದಲ್ಲಿ ಮತ್ತು ಶೇಕಡ 2ರಷ್ಟುನೀರು ನದಿಗಳಲ್ಲಿ ಶೇಖರವಾಗಿದೆ ಎಂದು ಅಂದಾಜಿಸಲಾಗಿದೆ.**



ಶೌಚಾಯಲವಿಲ್ಲವೆಂಬುದು ನಮಗೆ ಅಪಮಾನದ ಸಂಗತಿಯಾಗಿ ಉಳಿದಿಲ್ಲ.

ಕೇವಲ ಕಣ್ಣಿಗೆ ಗೋಚರಿಸುವ ರಸ್ತೆ, ಸೇತುವೆ, ಬೃಹತ್ತಾದ ಕಟ್ಟಡಗಳು, ಅಣೆಕಟ್ಟುಗಳು ಇಂತಹುಗಳನ್ನು ನಾವು ಅಭಿವೃದ್ದಿಯ ಸಂಕೇತಗಳೆಂದು ವ್ಯಾಖ್ಯಾನಿಸುತ್ತೇವೆ. ಈ ದಿಕ್ಕಿನಲ್ಲಿ ನಿಜಕ್ಕೂ ನಮ್ಮ ಅಲೋಚನಾ ಕ್ರಮಗಳು ಬದಲಾಗಬೇಕಿದೆ. ಮನುಷ್ಯನೊಬ್ಬನ ಘನತೆಯ ಬದುಕಿಗೆ ತೀರಾ ಅವಶ್ಯಕವಾದ ಮೂಲಭೂತ ಸೌಕರ್ಯಗಳೆನಿಸುವ ನೀರು, ವಸತಿ, ಆರೋಗ್ಯ ಮತ್ತುಶಿಕ್ಷಣ ಇವುಗಳಿಗೆ ಆದ್ಯತೆ ನೀಡಬೇಕಿದೆ,

ತಾವು ಬದುಕುವುದರ ಜೊತೆಗೆ ತಮ್ಮ ಪರಿಸರಕ್ಕೆ ಒಂದಿನಿತೂ ಧಕ್ಕೆಯಾಗದಂತೆ, ಎರವಾಗದಂತೆ ಸರಳವಾಗಿ ಬದುಕಿ ಬಾಳಿಹೋದ ನಮ್ಮ ಪೂರ್ವಿಕರ ಜೀವನಕ್ರಮ ಮತ್ತು ಅವರ ಜ್ಞಾನಶಿಸ್ತು ನಮಗೆ ಮಾರ್ಗದರ್ಶನವಾಗಬೇಕಿದೆ. ಬಡತನ ನಿವಾರಣೆಗಿಂತ ಬಡವರ ನಿರ್ಮೂಲನೆ ಮುಖ್ಯವೆಂಬಂತೆ ತೋರುತ್ತಿರುವ ಆಧುನಿಕ ಅಭಿವೃದ್ಧಿಯ ರಕ್ಕಸನ ಕೈಯಲ್ಲಿ ಸಿಲುಕಿರುವ ನಮ್ಮ ಹಳ್ಳಿಗಳು ನಾಶವಾಗುತ್ತಿರುವ ಪರಿಣಾಮ, ನಮ್ಮ ಜಲ ಸಂಪನ್ಮೂಲಗಳಾದ ಕೆರೆ, ಕೊಳ್ಳ, ಹಳ್ಳಗಳು ನಾಶವಾಗುತ್ತಿವೆ, ಇಲ್ಲವೇ ಬತ್ತುತ್ತಿವೆ.ನದಿಗಳು ದೇಶದ ಮಹಾನ್ ನಗರಗಳ ಕೊಳಚೆಯ ನೀರನ್ನು ಸಮುದ್ರಕ್ಕೆ ಸಾಗಿಸುವ ರಾಜಕಾಲುವೆಗಳಾಗಿ ಪರಿವರ್ತನೆ ಹೊಂದಿವೆ. ಇದೊಂದು ರೀತಿಯಲ್ಲಿ ಅಧುನಿಕ ಮನುಷ್ಯನ ಮೋಹಿನಿ ಭಸ್ಮಾಸೂರನ ಕಥನವೆಂದರೆ ತಪ್ಪಾಗಲಾರದು. ಡೋನಾಲ್ಡ್ ವರ್ನರ್ ಎಂಬ ಲೇಖಕ ತನ್ನ " ರಿವರ್ಸ್ ಆಫ್ ಎಂಪೈರ್" ಕೃತಿಯಲ್ಲಿ ಯಾವುದೇ ಮನುಕುಲದ ಇತಿಹಾಸ ನೀರು ಅಥವಾನದಿಯ ಇತಿಹಾಸವಿಲ್ಲದೆ ಪೂರ್ಣವಾಗಲಾರದು ಎಂದಿದ್ದಾನೆ. ಆದರೆ ನಾವೀಗ ನೀರಿನ ಮಹತ್ವ ಮತ್ತು ಅದರ ಹಂಗು ತೊರೆದುಟೊಳ್ಳು ಇತಿಹಾಸ ಸೃಷ್ಟಿಸಲು ಹೊರಟಿದ್ದೀವಿ. ■

ರಾಜ್ಯ ಸಚಿವ ಸಂಪುಟ ಪುನಾರಚನೆಯಲ್ಲಿ ನೂತನವಾಗಿ ಸೇರ್ಪಡೆಯಾದ ಸಚಿವರಿಗೆ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ವಜುಭಾಯಿವಾಲಾ ಅವರು ಪ್ರಮಾಣ ವಚನ ಬೋಧಿಸಿದರು. ಶ್ರೀ ಕಾಗೋಡು ತಿಮ್ಮಪ್ಪ, ಶ್ರೀ ರಮೇಶ್ ಕುಮಾರ್, ಶ್ರೀ ಬಸವರಾಜ ರಾಯರೆಡ್ಡಿ, ಶ್ರೀ ಸಂತೋಷ್ ಲಾಡ್, ಶ್ರೀ ರಮೇಶ್ ಜಾರಕಿಹೊಳಿ, ಶ್ರೀ ತನ್ವೀರ್ ಸೇಠ್, ಶ್ರೀ ಎಸ್ ಎಸ್ ಮಲ್ಲಿಕಾರ್ಜುನ್, ಶ್ರೀ ಎಚ್ ವೈ ಮೇಟಿ, ಶ್ರೀ ಎಂ ಆರ್ ಸೀತಾರಾಂ, ಶ್ರೀ ಪ್ರಿಯಾಂಕ್ ಖರ್ಗೆ, ಶ್ರೀ ಪ್ರಮೋದ್ ಮಧ್ವರಾಜ್, ಶ್ರೀ ರುದ್ರಪ್ಪ ಲಮಾಣಿ, ಶ್ರೀ ಈಶ್ವರ ಖಂಡ್ರೆ ಪ್ರಮಾಣ ವಚನ ಸ್ವೀಕರಿಸಿದರು













# ಬಿಸಿಲ ನಾಡಲ್ಲಿ ಜರ್ಬೆರಾ ಹೂಗಳ ಕಲರವ...

▪ ಜೆ. ಚಂದ್ರಕಾಂತ
ಹಿರಿಯ ಸಹಾಯಕ ನಿರ್ದೇಶಕರು, ಗುಲ್ಬರ್ಗಾ

ಬಿಸಿಲ ನಾಡೆಂದೇ ಹೆಸರುವಾಸಿಯಾಗಿರುವ ಕಲಬುರಗಿ ಜಿಲ್ಲೆಯಲ್ಲಿ ಕೃಷಿಭಾಗ್ಯ ಯೋಜನೆಯ ಪ್ರಯೋಜನ ಪಡೆದು ಜಿಲ್ಲೆಯ ಇತಿಹಾಸದಲ್ಲಿ ಮೊದಲ ಬಾರಿಗೆ "ಜರ್ಬೆರಾ" ಬೆಳೆದ ಕೀರ್ತಿ ಕಲಬುರಗಿ ತಾಲೂಕಿನ ಕಪನೂರ ಗ್ರಾಮದ ರೈತ ಸೈಯ್ಯದ್ ರಿಯಾಜುದ್ದಿನ್ ಭುಟ್ಟೊ ಅವರಿಗೆ ಸಲ್ಲುತ್ತದೆ.

ಇವರು ಒಟ್ಟು 3 ಎಕರೆ ಜಮೀನು ಹೊಂದಿದ್ದಾರೆ. ಪ್ರಾರಂಭದಲ್ಲಿ ಕೇವಲ 10 ಗುಂಟೆ ಜಮೀನಿನಲ್ಲಿ ಕೆಎಫ್ ಬಯೋ ಟೆಕ್ ತಂತ್ರಜ್ಞಾನ ಅಳವಡಿಸಿ ಬೆಡ್ ಸಿಸ್ಟಂದಿಂದ ನೈಸರ್ಗಿಕ ನೆರಳು ಪರದೆ(ಪಾಲಿ ಹೌಸ್) ಘಟಕ ಸ್ಥಾಪಿಸಿಕೊಂಡು ಪೂನಾದಿಂದ 6000 ಜರ್ಬೆರಾ ಹೂ ಸಸಿಗಳನ್ನು ಆಗಸ್ಟ್ ಮಾಹೆಯಲ್ಲಿ ನಾಟಿ ಮಾಡಿ 3 ತಿಂಗಳ ಬಳಿಕ ಪ್ರತಿ ದಿನ ಒಂಭತ್ತು ವಿಧದ ಸುಮಾರು 1000ದಂತೆ ತಿಂಗಳಿಗೆ 30000 ಜರ್ಬೆರಾ ಹೂಗಳನ್ನು ಪಡೆಯುತ್ತಿದ್ದಾರೆ.

ಇವುಗಳ ಮಾರಾಟದಿಂದ ಎಲ್ಲ ಖರ್ಚು ವೆಚ್ಚ ಹೋಗಿ ಮಾಸಿಕ ಸರಾಸರಿ 50000 ರೂ. ಲಾಭ ಗಳಿಸುತ್ತಿದ್ದಾರೆ. ಈ ಬೆಡ್ ಸಿಸ್ಟಂದಿಂದ ಇಳುವರಿ ಪ್ರಮಾಣ ಹೆಚ್ಚು ಬರುತ್ತದೆ. ಆದರೆ ನಿರ್ವಹಣಾ ವೆಚ್ಚ ಮತ್ತು ಕೀಟ ಬಾಧೆ ಹೆಚ್ಚು ಇರುತ್ತದೆ. ಸದರಿ ರೈತರು ಪುನಃ 10 ಗುಂಟೆ ಪ್ರದೇಶದಲ್ಲಿ ನೈಸರ್ಗಿಕ ನೆರಳು ಪರದೆ(ಪಾಲಿ ಹೌಸ್) ಘಟಕದಲ್ಲಿ ಜರ್ಬೆರಾ ಹೂ ಕೃಷಿಯನ್ನು





ವಿಸ್ತರಿಸಿಕೊಂಡಿದ್ದಾರೆ. ಹೊಸ ಪದ್ಧತಿಯ ಮೂಲಕ 7200 ಹೂಕುಂಡಗಳಲ್ಲಿ ಕೋಕೋ ಪಿಟ್ ಮಣ್ಣಿನಲ್ಲಿ ಜರ್ಬೆರಾ ಸಸಿಗಳನ್ನು ಬೆಳೆದಿದ್ದಾರೆ. ಈ ಪದ್ಧತಿಯಿಂದ ಸರಾಸರಿ ಇಳುವರಿ ಪ್ರಮಾಣ ಕಡಿಮೆ ಇದ್ದರೂ ನಿರ್ವಹಣಾ ವೆಚ್ಚ ಮತ್ತು ಕೀಟ ಬಾಧೆ ಹೆಚ್ಚು ಇರುವುದಿಲ್ಲ.

ಈ ಜರ್ಬೆರಾ ಹೂ ಕೃಷಿಯನ್ನು ಒಂದು ಸವಾಲಾಗಿ ಸ್ವೀಕರಿಸಿದ ರಿಯಾಜುದ್ದಿನ್ ಭುಟ್ಟೊ "ಜಿಲ್ಲೆಯ ವಿವಿಧ ಪ್ರಗತಿಪರ ರೈತರ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳ ಪ್ರೋತ್ಸಾಹ ಮತ್ತು ತಾಂತ್ರಿಕ ಸಲಹೆಯ ಮೇರೆಗೆ ಜರ್ಬೆರಾ ಹೂ ಕೃಷಿ ಕೈಗೊಂಡಿದ್ದೇನೆ. ಪ್ರಾರಂಭದಲ್ಲಿ ಮಣ್ಣಿನ ಹಾಗೂ ಇತರ ಸಮಸ್ಯೆ ಎದುರಿಸಿದ್ದರೂ ಕೊಳವೆಬಾವಿಯಲ್ಲಿ ಮೂರು ಇಂಚು ನೀರಿನ ಲಭ್ಯತೆಯ ಮೆರೆಗೆ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡು ಧೃತಿಗೆಡದೆ ಮುಂದೆ ಬಂದು ಜರ್ಬೆರಾ ಬೆಳೆದಿದ್ದೇನೆ. ವರ್ಷಪೂರ್ತಿ ಜರ್ಬೆರಾ ಹೂಗಳು ಬಿಡುತ್ತವೆಯಾದರೂ ಮದುವೆ ಮುಂಜಿ ಋತುವಿನಲ್ಲಿ ಇವುಗಳ ಮಾರಾಟ ಹೇರಳವಾಗಿ ನಡೆಯುತ್ತದೆ ಹಾಗೂ ಪ್ರತಿ ಹೂ 8–10ರೂ.ದಂತೆ ಒಂದೊಂದು ಸಲ 15ರೂ.ಗೂ ಮಾರಾಟವಾಗುತ್ತದೆ. ಪ್ರಾರಂಭದಲ್ಲಿ ಹೈದ್ರಾಬಾದಿನಲ್ಲಿ ಮಾರಾಟ ಮಾಡಿದ್ದು, ಈಗ ಸ್ಥಳೀಯವಾಗಿಯೂ ಮಾರಾಟ ಮಾಡಲಾಗುತ್ತಿದೆ. ಇದಕ್ಕಾಗಿ ಪ್ಯಾಕಿಂಗ್ ಘಟಕ ಸಹ ಸ್ಥಾಪಿಸಲಾಗಿದೆ. ಒಂದು ಬಾಕ್ಸಿನಲ್ಲಿ 150–400 ಜರ್ಬೆರಾ ಹೂಗಳನ್ನಿಟ್ಟು ಸಹೋದರ ಸೈಯ್ಯದ್ ಸಿರಾಜುದ್ದಿನ್ ಅವರ ಸಹಾಯ ಸಹಕಾರ ಪಡೆದು ಈ ಬೇಸಾಯ ಕೈಗೊಂಡಿರುವುದು ತುಂಬಾ ಅನುಕೂಲವಾಗಿದೆ. ಇದಲ್ಲದೆ ಎರಡು ಎಕರೆಯಲ್ಲಿ ಬಾಳೆ ಸಹ ಬೆಳೆಯಲಾಗಿದೆ" ಎಂದು ಹೇಳುತ್ತಾರೆ.



ಕೃಷಿಭಾಗ್ಯ ಯೋಜನೆಯಡಿ ಒಂದು ಎಕರೆವರೆಗೆ ನೈಸರ್ಗಿಕ ನೆರಳು ಪರದೆ(ಪಾಲಿ ಹೌಸ್) ಘಟಕ ಸ್ಥಾಪಿಸಿಕೊಳ್ಳಲು ಅವಕಾಶವಿದ್ದು, ಪ್ರತಿ ಚ.ಮೀ.ಗೆ 490 ರೂ. ಸಹಾಯಧನ ನೀಡಲಾಗುತ್ತದೆ. ಸದರಿ ರೈತರು ಸ್ಥಾಪಿಸಿಕೊಂಡ ಎರಡೂ ಘಟಕಗಳಿಗೆ ಸುಮಾರು 20 ಲಕ್ಷ ರೂ. ವೆಚ್ಚ ತಗುಲಿದ್ದು, ತೋಟಗಾರಿಕೆ ಇಲಾಖೆಯಿಂದ 10 ಲಕ್ಷ ರೂ. ಸಹಾಯಧನ ಒದಗಿಸಲಾಗಿದೆ. ಹರಿಯಾಣಾ ರಾಜ್ಯದಲ್ಲಿ ಜರ್ಬೆರಾ ಹೂವಿನ ಬೇಸಾಯ ದೊಡ್ಡ ಪ್ರಮಾಣದಲ್ಲಿ ಮಾಡುತ್ತಿರುವುದನ್ನು ತಾವು ಗಮನಿಸಿ ಕಲಬುರಗಿ ಜಿಲ್ಲೆಯಲ್ಲಿಯೂ ಈ ಬೇಸಾಯ ಮಾಡುವ ಪ್ರಥಮ ಪ್ರಯತ್ನವಾಗಿ ಸೈಯ್ಯದ್ ರಿಯಾಜುದ್ದಿನ್ ಮುಂದೆ ಬಂದಿರುವುದು ಶ್ಲಾಘನೀಯ ಮತ್ತು ಇವರ ಧೈರ್ಯ ಮೆಚ್ಚುವಂಥದ್ದು. ಜರ್ಬೆರಾ ನಾಟಿ ಮಾಡಿದ 90–100 ದಿನಗಳ ಬಳಿಕ ಕಟಾವು ಪ್ರಾರಂಭವಾಗಲಿದ್ದು, ಸುಮಾರು 3 ವರ್ಷಗಳವರೆಗೆ ಲಾಭ ಪಡೆಯಬಹುದು.

ಕಲಬುರಗಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಕೃಷಿಭಾಗ್ಯ ಯೋಜನೆಯಡಿ ಕಳೆದ ಎರಡು ವರ್ಷಗಳಲ್ಲಿ 34 ನ್ಯಾಚುರಲಿ ವೆಂಟಿಲೇಟೆಡ್ ಪಾಲಿ ಹೌಸ್ ಮತ್ತು 110 ಶೆಡ್ ನೆಟ್ ಪಾಲಿ ಹೌಸ್ ಘಟಕಗಳು ಸೇರಿದಂತೆ ಒಟ್ಟು 144 ಘಟಕಗಳಿಗೆ ಕಾರ್ಯಾದೇಶ ನೀಡಲಾಗಿದೆ. ಈ ಪೈಕಿ 23 ಪಾಲಿ ಹೌಸ್ ಮತ್ತು 66 ನೆರಳು ಪರದೆ ಘಟಕಗಳು ಸೇರಿ 89 ಘಟಕಗಳ ನಿರ್ಮಾಣ ಕಾರ್ಯ ಮುಗಿದಿದೆ. ತೋಟಗಾರಿಕೆ ಇಲಾಖೆಯಿಂದ 2016ರ ಜನವರಿಯಿಂದ ಕೃಷಿಭಾಗ್ಯ ಯೋಜನೆಯಡಿ ನಿರಂತರ 4 ವರ್ಷ ಕಾಲ ಸತತವಾಗಿ ಬರಗಾಲಕ್ಕೆ ತುತ್ತಾದ ರಾಜ್ಯದ 7 ಜಿಲ್ಲೆಗಳ 23 ತಾಲೂಕುಗಳ ಪೈಕಿ ಕಲಬುರಗಿ ಜಿಲ್ಲೆಯ ಆಳಂದ, ಚಿಂಚೋಳಿ ಮತ್ತು ಜೇವರ್ಗಿ ತಾಲೂಕುಗಳ ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ ಶೇ.90ರಷ್ಟು ಹಾಗೂ ಇತರರಿಗೆ ಶೇ.75ರಷ್ಟು ಸಹಾಯಧನ ನೀಡಲಿದೆ. ಉಳಿದ ತಾಲೂಕುಗಳ ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ ಶೇ.90ರಷ್ಟು ಹಾಗೂ ಇತರರಿಗೆ ಶೇ.50ರಷ್ಟು ಸಹಾಯಧನ ನೀಡಲಾಗುತ್ತಿದೆ ಎಂದು ತೋಟಗಾರಿಕೆ ಉಪನಿರ್ದೇಶಕ ಡಿ.ಮಂಜುನಾಥ ಹೇಳುತ್ತಾರೆ.

# ಮಣಿಪಾಲ ಹೆರಿಟೇಜ್ ವಿಲೇಜ್

## ಹಿರಿಯರ ಬದುಕಿನ ಸಿರಿವಂತ ಸಂಸ್ಕೃತಿ







▪ ಮಟಪಾಡಿ ಕುಮಾರಸ್ವಾಮಿ

**ಕ**ರ್ನಾಟಕದ ಚಿಕ್ಕ ಜನವಸತಿ ಪ್ರದೇಶವಾದ ಮಣಿಪಾಲ ಈಗ ಜಾಗತಿಕ ಶೈಕ್ಷಣಿಕ ನಗರ. ಇಲ್ಲಿನ ಕಟ್ಟಡಗಳೆಲ್ಲವೂ ಹೊಸ ತಲೆಮಾರಿನವು. ಆದರೆ ಇಲ್ಲೇ ಪ್ರಾಚೀನ ಪರಂಪರೆ ಸಾರುವ ಹೆರಿಟೇಜ್ ವಿಲೇಜ್ ಮೈದಳೆದಿದೆ.

ಯಾವುದೇ ಸಮುದಾಯದವರಿರಲಿ ನಮ್ಮ ಹಿರಿಯರ ಬದುಕು ಹೇಗಿತ್ತು ಎಂದು ಅನುಭವದಿಂದ ತಿಳಿಯಬೇಕಾದರೆ ನಮ್ಮ ಈಗಿನ ಲಭ್ಯ ಮಾಹಿತಿಯಿಂದ ಸಾಧ್ಯವಿಲ್ಲ. ಮಣಿಪಾಲದ ಹಸ್ತಶಿಲ್ಪ ಟ್ರಸ್ಟ್ ಹೆರಿಟೇಜ್ ವಿಲೇಜ್‌ನಲ್ಲಿ (ಸಂಸ್ಕೃತಿ ಗ್ರಾಮ) ನಿರ್ಮಿಸಿದ ಹಲವು ಪುರಾತನ ಕಟ್ಟಡಗಳನ್ನು ವೀಕ್ಷಿಸಿದರೆ ನಮ್ಮ ಹಿರಿಯರ ಜೀವನಶೈಲಿ, ಶಿಸ್ತುಬದ್ಧತೆ, ವೈಜ್ಞಾನಿಕ ಅಂಶಗಳನ್ನು ಪ್ರತ್ಯಕ್ಷವಾಗಿ ಗಮನಿಸಬಹುದು.

ಹೆರಿಟೇಜ್ ವಿಲೇಜ್ ಮುಖ್ಯ ರೂವಾರಿ ವಿಜಯನಾಥ ಶೆಣೈ. ಅವರು ಹಿಂದಿನಿಂದಲೂ ಸಂಸ್ಕೃತಿ ಪ್ರೇಮಿ. ಸಿಂಡಿಕೇಟ್ ಬ್ಯಾಂಕ್‌ನಲ್ಲಿ 32 ವರ್ಷ ಸಾರ್ವಜನಿಕ ಸಂಪರ್ಕ ವಿಭಾಗದಲ್ಲಿದ್ದು ಸೇವೆ ಸಲ್ಲಿಸಿದ ಶೆಣೈ ಆಗಲೇ ದೂರದೂರುಗಳಿಗೆ ಹೋಗಿ ಕೆಡಹುತ್ತಿದ್ದ ಕಟ್ಟಡಗಳ ಮೌಲ್ಯ ತಿಳಿದು ದುಃಖಿಸಿದವರು. ಅಂತಹ ಕಟ್ಟಡಗಳಿಗೆ ಮರುಜೀವ ಕೊಡಿಸುವ ಕೆಲಸವನ್ನು 1997ರಲ್ಲಿ ಹೆರಿಟೇಜ್ ವಿಲೇಜ್ ಮೂಲಕ ಆರಂಭಿಸಿದರು. ಸರಕಾರ, ವಿದೇಶದ ರಾಯಭಾರ ಕಚೇರಿಗಳು ಮತ್ತಿತರರ ಸಹಾಯದಿಂದ ಸಂಸ್ಕೃತಿ ಗ್ರಾಮವೀಗ ಕಂಗೊಳಿಸುತ್ತಿದೆ.

ಬಾಗಲಕೋಟೆ ಜಿಲ್ಲೆಯ ಮುಧೋಳದ ಅರಮನೆ, ಕೊಪ್ಪಳ ಜಿಲ್ಲೆ ಕುಕನೂರಿನ ಕಮಲ್ ಮಹಲ್, ಬೀದರ್ ಜಿಲ್ಲೆ ಹುಮ್ನಾಬಾದ್‌ನ ಡೆಕ್ಕನಿ ನವಾಬ್ ಮಹಲ್, ಮಂಗಳೂರು ಕ್ರಿಶ್ಚಿಯನ್ ಮನೆ, ರಾಜಾ ರವಿವರ್ಮರ ಚಿತ್ರ ಗ್ಯಾಲರಿ, ಭೂತದೈವಗಳ ಉರುಗಳಿರುವ ನಂದಿಕೇಶ್ವರ ದೇವಸ್ಥಾನ, ಅದಮಾರು ಸಮೀಪದ ಶಿವಳ್ಳಿ ಬ್ರಾಹ್ಮಣರ ಕುಂಜೂರು ಚೌಕಿ ಮನೆ, ಕೊಡಗಿನ ಹರಿಹರ ಮಂದಿರಗಳು ಪೂರ್ಣಗೊಂಡ ಕಟ್ಟಡಗಳು. ಮೇ ತಿಂಗಳಲ್ಲಿ ಸಾರ್ವಜನಿಕ ವೀಕ್ಷಣೆ ಮುಗಿದು ಇನ್ನು ಸೆಪ್ಟೆಂಬರ್‌ನಲ್ಲಿ ಮತ್ತೆ ವೀಕ್ಷಣೆ ಆರಂಭವಾಗುವಾಗ ಇನ್ನಷ್ಟು ರಚನೆಗಳು ಪೂರ್ಣಗೊಳ್ಳಬಹುದು.

ವಿಜಯನಾಥ ಶೆಣೈ

ಹೆಂಗವಳ್ಳಿ ಮನೆ, ಮಿಯಾರು ಮನೆ, ಭಟ್ಕಳದ ನವಾಯತ್ ಮುಸ್ಲಿಮ್ ಮನೆ, ಹರ್ಕೂರು ಒಳಗಿನ ಮನೆ, ಶೃಂಗೇರಿ ಮನೆ ಸೇರಿದಂತೆ ಒಟ್ಟು 28 ಕಟ್ಟಡಗಳಿವೆ. ಮುಂದೆ ಸಾಂಪ್ರದಾಯಿಕ ಮತ್ತು ಜನಪದ ಚಿತ್ರಕಲೆಗಳ ವಸ್ತುಸಂಗ್ರಹಾಲಯ, ನರೇಂದ್ರಬಾಬು ಗ್ಯಾಲರಿ, ಸಾಂಪ್ರದಾಯಿಕ ಉಡುಪುಗಳ ವಸ್ತುಸಂಗ್ರಹಾಲಯಗಳನ್ನು ನಿರ್ಮಿಸುವ ಗುರಿ ವಿಜಯನಾಥ ಶೆಣೈಯವರಿಗೆ ಇದೆ. ಈಗಿರುವ ಕಟ್ಟಡಗಳೆಲ್ಲವೂ ಕರ್ನಾಟಕ ರಾಜ್ಯದವು. ಆದರೆ ಚಿತ್ರಕಲೆ, ಅಪೂರ್ವ ಸಾಮಗ್ರಿಗಳು ಭಾರತದ ವಿವಿಧೆಡೆಗಳಿಂದ ಸಂಗ್ರಹಿಸಿದವು. ಒಂದೊಂದು ಮನೆಗೂ ಹತ್ತಾರು ಕಾರ್ಮಿಕರು ವರ್ಷಗಟ್ಟಲೆ ಕೆಲಸ ಮಾಡಿದ್ದಾರೆ. ಹಿಂದೆ ಹೇಗಿತ್ತೋ ಅದೇ ರೀತಿ ಮರುಜೋಡಿಸಲಾಗಿದೆ. ಸ್ವೀಡನ್, ನಾರ್ವೆ ಮೊದಲಾದ ದೇಶಗಳಿಂದ ಬಂದವರು ಈ ಸಮಸ್ಯೆಗಳ ಸಂಕೀರ್ಣವಾದ ರಚನೆಗಳನ್ನು ಮರುಜೋಡಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದರು.


ಪ್ರತಿ ಮನೆಗಳ ಬೃಹತ್ ಗಾತ್ರದ ಕಂಬಗಳು, ತೊಲೆಗಳು, ಬಾಗಿಲುಗಳ ದಾರುಶಿಲ್ಪ ವೈಭವ ಕಣ್ಮನ ಸೆಳೆಯುತ್ತವೆ. ನೂರಾರು ಚಿತ್ರಕಲೆಗಳು ಗೋಡೆಗಳನ್ನು ಅಂದಗಾಣಿಸಿವೆ. ಲಾಟೀನು, ಏತ ನೀರಾವರಿಯಂತಹ ಲೋಹ, ಮರದ ಸಾಮಗ್ರಿಗಳು ಅಸಂಖ್ಯ ಇವೆ.



**ಕವಿರಾಜ ರನ್ನ, ಮುಧೋಳ ನಾಯಿಗೆ ಪ್ರಸಿದ್ಧಿ**

ಪ್ರಸಿದ್ಧ ಕವಿ ರನ್ನ ಮುಧೋಳದಲ್ಲಿ ಜನಿಸಿದವ. ಮುಧೋಳ ನಾಯಿ ತಳಿಯನ್ನು ಅಭಿವೃದ್ಧಿಪಡಿಸಿದ ಕೀರ್ತಿಯೂ ಮುಧೋಳ ರಾಜಮನೆತನದವರಿಗೆ ಇದೆ. ಆಗ ಬೇಟೆ ನಾಯಿಯಾಗಿ ಬಳಸುತ್ತಿದ್ದರು. 2003–04ರ ವೇಳೆ ಓಸ್ವಾಲ್ ಕುಟುಂಬದವರೊಂದಿಗೆ ಎರಡು ಮೂರು ಬಾರಿ ಮಾತುಕತೆ ನಡೆಸಿ ಹಸ್ತಶಿಲ್ಪ ಟ್ರಸ್ಟ್ ಕಾರ್ಯದರ್ಶಿ ವಿಜಯನಾಥ ಶೆಣೈ ಕಟ್ಟಡವನ್ನು ಮಣಿಪಾಲಕ್ಕೆ ಸ್ಥಳಾಂತರಿಸಿದರು. ಕಟ್ಟಡವನ್ನು ಪುನಃ ನಿರ್ಮಿಸುವಾಗ ರಾಜಮನೆತನದ ಮೇನಕರಾಜೆ ಘೋರ್ಪಡೆ ಮತ್ತು ಗಂಡ ವಿಜಯರಾಜೆ ಅರಸ್ ಭೂಮಿ ಪೂಜೆ ನಡೆಸಿದ್ದರು. ಉದ್ಘಾಟನೆ ವೇಳೆ ಮೇನಕರಾಜೆ ಮತ್ತು ಅವರ ತಾಯಿ ಇಂದಿರಾ ರಾಜೆ ಘೋರ್ಪಡೆ ಆಗಮಿಸಿದ್ದರು. ಸುಮಾರು 15 ಕುಶಲಕರ್ಮಿಗಳು ಸುಮಾರು ಹತ್ತು ತಿಂಗಳು ಶ್ರಮ ಪಟ್ಟು ಪುನಾರಚಿಸಿದರು.

**ಪ್ರಾಯೋಗಿಕ ಇತಿಹಾಸ ಓದಿಸುವ ದಕ್ಖಣಿ ನವಾಬ್ ಮಹಲ್:** ಹಂಪಿಯ ವಿಜಯನಗರ ಸಾಮ್ರಾಜ್ಯದ ಬಳಿಕ ಕಲಬುರಗಿ, ಬೀದರ್‌ನ ಬಹಮನಿಗಳು, ವಿಜಯಪುರದ ಆದಿಲ್ ಶಾಹಿ, ಅಹಮದಾನಗರದ ನಿಜಾಮ್ ಶಾಹಿ, ಗೋಲ್ಕಂಡದ ಕುತುಬ್ ಶಾಹಿಗಳು ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ್ದು ಇತಿಹಾಸ. ಬಹಮನಿಗಳ ಬಳಿಕ ಬೀದರ್ ಆಡಳಿತ ಬರೀದ್ ಶಾಹಿಗಳ ಕೈಗೆ ಬಂತು. ಬರೀದ್ ಶಾಹಿಗಳ ಪತನ ಅನಂತರ ರಾಯಲ್ ಕೋರ್ಟ್ ನವಾಬರಿಗೆ ಸಂಪತ್ತಾದ ಭೂಮಿಗಳು ಬಂದವು. ಬೀದರ್ ಜಿಲ್ಲೆ ಹುಮ್ನಾಬಾದ್‌ನಿಂದ 60 ಕಿ.ಮೀ. ದೂರದಲ್ಲಿರುವ ಗ್ರಾಮದಲ್ಲಿ 19ನೆಯ ಶತಮಾನದ ಅಂತ್ಯದಲ್ಲಿ ನವಾಬರು ಮಹಲ್ ಕಟ್ಟಿದರು. ಆ ಕಾಲದ ನವಾಬರ ಸಿರಿವಂತಿಕೆ, ಸಾಮಾಜಿಕ ಸ್ಥಿತಿಗತಿ ಈ ಮಹಲ್ ತೋರಿಸುತ್ತದೆ. ನವಾಬರು ಯೂರೋಪ್‌ನಲ್ಲಿ ಮಾರುಕಟ್ಟೆಗೆ ಬರುವ ಹೊಸ ವಸ್ತುಗಳನ್ನು ಭಾರತಕ್ಕೆ ಆಮದು ಮಾಡಿಕೊಳ್ಳುತ್ತಿದ್ದ ಕಾಲ. ಬೆಲ್ಜಿಯಂ ಗ್ಲಾಸ್, ಲ್ಯಾಂಪ್, ಆಸ್ಟ್ರಿಯನ್ ದೀಪದ ಗೊಂಚಲು, ಜರ್ಮನ್ ನೆಲಹಾಸು ಹೆಂಚು, ಬರ್ಮಿಂಗ್‌ಹ್ಯಾಮ್‌ನಲ್ಲಿ ತಯಾರಿಸಿದ ಕಬ್ಬಿಣದ ಗ್ರಿಲ್, ಸ್ಪಾರ್‌ಕೇಸ್‌ಗಳನ್ನು ಹೈದರಾಬಾದ್‌ನಿಂದ ತರಿಸಿ ಮಹಲ್‌ನಲ್ಲಿ ಅಳವಡಿಸಿದ್ದರು. ನವಾಬ್ ಮತ್ತು ಮನೆಯವರು ಫೈನ್‌ಸಿಲ್ಕ್ ಬಟ್ಟೆ, ಆಮದು ಮಾಡಲಾದ ಸುಗಂಧದ್ರವ್ಯಗಳನ್ನು ಬಳಸುತ್ತಿದ್ದರು, ಆರಾಮದ ಕುರ್ಚಿಗಳಲ್ಲಿ ಆಸೀನರಾಗುತ್ತಿದ್ದರು. ಗುಣಮಟ್ಟದ ಮದ್ಯ, ಆಹಾರ, ಹುಕ್ಕಾಗಳನ್ನು ಸೇವಿಸುತ್ತಿದ್ದರು. ಯುವಕರು ಚೆಸ್, ಗಂಜೀಫಾ (ಕಾರ್ಡುಗಳಲ್ಲಿ ಆಟ), ಆಗಷ್ಟೆ ಭಾರತಕ್ಕೆ ಬಂದಿದ್ದ ಫೋನೋಗ್ರಾಫ್ ಮೂಲಕ ಸಂಗೀತಗಳನ್ನು ಆಲಿಸುತ್ತಿದ್ದರು.



**ಬೇರೆಲ್ಲೂ ಇದರ ಪಡಿಯಚ್ಚು ಇಲ್ಲ**

ಸಾಮಾನ್ಯವಾಗಿ ಒಂದು ಕಡೆ ಇರುವ ಶಿಲ್ಪವನ್ನು ಕಂಡು ಇನ್ನೊಂದು ಕಡೆ ನಿರ್ಮಿಸುವುದಿದೆ. ಆದರೆ ಕಮಲ ಮಹಲ್ ರಚನೆಯನ್ನು ವಿಜಯನಾಥ ಶೆಣೈಯವರು ಬೇರೆಲ್ಲೂ ನೋಡಿಲ್ಲ. ಕಮಲ ಪುಷ್ಪ, ಬಳ್ಳಿಗಳ ಆಕರ್ಷಣೆ ಇಲ್ಲಿವೆ. ಇವೆಲ್ಲ ಸಾಗವಾನಿ ಮರದಿಂದ ನಿರ್ಮಿಸಲಾಗಿದೆ. ಹಂಪಿಯಲ್ಲಿ ಹರಿಹರ ಇದ್ದ ಕಾಲದಲ್ಲಿ (1341) ಇದು ನಿರ್ಮಾಣಗೊಂಡಿತು ಎನ್ನುತ್ತಾರೆ. ಪೌರಾಣಿಕ ವ್ಯಕ್ತಿ ಚಂದ್ರಹಾಸ ಇದೇ ಊರಿನವನೆಂದು ಸ್ಥಳೀಯರು ಹೇಳುತ್ತಾರೆ. ಕಟ್ಟಡದ ಸುಪರ್ದಿ ಹೊಂದಿದ್ದ ಸ್ವಾತಂತ್ರ ಹೋರಾಟಗಾರ ಹನುಮಂತ ದೇಸಾಯಿಯವರಿಗೆ ಕಟ್ಟಡವನ್ನು ಆರ್ಥಿಕವಾಗಿ ನಿರ್ವಹಿಸಲು ಆಗಲಿಲ್ಲ. ದೇಸಾಯಿಯವರು ವಿಜಯನಾಥ ಶೆಣೈಯವರನ್ನು ಸಂಪರ್ಕಿಸಿ ಕೊಂಡೊಯ್ಯುವಂತೆ ವಿನಂತಿಸಿದರು. ಇಲ್ಲವಾದರೆ ಇದು ಸ್ಟಾರ್ ಹೊಟೇಲ್‌ಗಳಿಗೆ ಹೋಗುತ್ತಿತ್ತು. ಕಟ್ಟಡವನ್ನು ಕಟ್ಟಿದ ಬಳಿಕ ಕೊಳೆಯನ್ನು ತೆಗೆಯದೇ ಇದ್ದ ಸ್ಥಿತಿಯಿಂದ ಮಣಿಪಾಲಕ್ಕೆ ತಂದು ನಿರ್ಮಿಸಲಾಯಿತು. ಸುಮಾರು 26 ಕುಶಲಕರ್ಮಿಗಳು ಎಂಟು ತಿಂಗಳಲ್ಲಿ 2002ರ ವೇಳೆ ಮತ್ತೆ ಕಟ್ಟಿದರು.



**ಮಹಿಳಾ ಬಾಲ್ಕನಿ :** ಮಹಿಳೆಯರು ಅವರಿಗಾಗಿಯೇ ಇದ್ದ ಕೋಣೆಗಳು, ವಿಭಾಗಗಳಲ್ಲಿ ಇರುತ್ತಿದ್ದರು. ಇದು ಬಾಲ್ಕನಿಯಲ್ಲಿ. ಕೆಳಗೆ ಮುಖ್ಯ ಸಭಾಂಗಣದಲ್ಲಿ ನಡೆಯುವುದನ್ನು ಮಹಿಳೆಯರು ಬಾಲ್ಕನಿಯಲ್ಲಿ ಕುಳಿತು ಪರದೆಯನ್ನು (ಕರ್ಟನ್ಸ್) ಸರಿಸಿ ನೋಡಬಹುದಿತ್ತು. ಮನೆಯಲ್ಲಿ ಕೆಲವರು ಉರ್ದು, ಅರೆಬಿಕ್, ಪರ್ಶಿಯ ಭಾಷೆಗಳಲ್ಲಿ ಪಂಡಿತರಾಗಿದ್ದರು. ಹಿರಿಯರು ಸಣ್ಣ ಗ್ರಂಥಾಲಯದಲ್ಲಿದ್ದ ಪುಸ್ತಕಗಳನ್ನು ಓದುತ್ತಿದ್ದರು. ಈ ಎಲ್ಲಾ ಸಿರಿವಂತಿಕೆ ನಡುವೆ ಅವರು ಹಿಂದೂಸ್ಥಾನೀ ಸಂಗೀತದ ಪ್ರೇಮಿಗಳಾಗಿದ್ದರು.

ನವಾಬರ ಕಾಲಾ ಅನಂತರ ಆಸ್ತಿಗಳು ವಿಭಜನೆಯಾದವು. ನವಾಬ್ ಮಹಲ್ ಅವರ ಪೀಳಿಗೆಗೆ ಬಂತು. ಕಳೆದ ಶತಮಾನದ ಮಧ್ಯ ಭಾಗದಲ್ಲಿ ಸಿರಿವಂತಿಕೆಗಳು ಖಾಲಿಯಾಗಿ ಆಸ್ತಿಪಾಸ್ತಿಗಳನ್ನು ಮಾರುವ ಸ್ಥಿತಿ ತಲುಪಿತು. ನವಾಬ್‌ಮಹಲ್ ಕೂಡ ಮಾರಾಟಕ್ಕೆ ಸಿದ್ಧವಾಯಿತು. ಮಣಿಪಾಲದ ಹಸ್ತಶಿಲ್ಪ ಟ್ರಸ್ಟ್ ಮಹಲ್ ವಾರೀಸುದಾರರನ್ನು ಸಂಪರ್ಕಿಸಿ ಹೊಸದಿಲ್ಲಿಯಲ್ಲಿರುವ ನಾರ್ವೆ ರಾಯಭಾರ ಕಚೇರಿಯ ಸಹಕಾರದಿಂದ ಕಟ್ಟಡದ ವಿವಿಧ ಭಾಗಗಳನ್ನು ಮಣಿಪಾಲಕ್ಕೆ ತಂದು ಜೋಡಿಸಿತು. ಮೂಲ ರಚನೆಯಲ್ಲಿದ್ದ ದಾರುಶಿಲ್ಪಗಳೂ ಸೇರಿದಂತೆ ಬಹುಭಾಗಗಳನ್ನು ತಂದು ಹಾಗೆಯೇ ಜೋಡಿಸಲಾಗಿದೆ. ಒಂದು ಕಾಲದಲ್ಲಿ ವೈಭವದಲ್ಲಿ ಮೆರೆದ ಕಟ್ಟಡ ಪುನಾರಚಿತವಾಗಿ ಮೈದಳೆದು ನಿಂತಿದೆ.



ಮುಧೋಳ ದರ್ಬಾರ್ ಹಾಲ್ ಸಾರುತ್ತಿದೆ ಆ ರಾಜರ ಕಥೆಯನ್ನ...

ಬೆಳಗಾವಿ, ಬಾಗಲಕೋಟೆ, ಬಳ್ಳಾರಿ ಜಿಲ್ಲೆಗಳ ಬಹುಭಾಗ ಮರಾಠ ಆಡಳಿತಗಾರರ ಕೈಯಲ್ಲಿತ್ತು. ವಿಜಯಪುರದಲ್ಲಿ ಆದಿಲ್‌ಶಾಹಿ ಸಂಸ್ಥಾನ ಮತ್ತು ದಕ್ಷಿಣದಲ್ಲಿ ಮೊಘಲರ ಆಡಳಿತ ಕೊನೆಗೊಂಡ ಬಳಿಕ ಮರಾಠರು ನೆಲಯೂರಿರಬೇಕು. ಶಿವಾಜಿ ಕಾಲದಲ್ಲಿ ಮತ್ತು ಅನಂತರದಲ್ಲಿ ಇವರು ಪ್ರಬಲರಾಗಿರಬೇಕು.

ಈ ಸಣ್ಣ ರಾಜರ ಪ್ರಾಂತ್ಯಗಳೆಂದರೆ ಕೆಲವೇ ಗ್ರಾಮಗಳನ್ನು ಒಳಗೊಂಡಿದ್ದವು. ಪ್ರತಿಯೊಂದು ಪ್ರಾಂತ್ಯದಲ್ಲಿಯೂ ಮರಾಠ ಆಡಳಿತಗಾರರು ಆಡಳಿತ ನಡೆಸುತ್ತಿದ್ದರು. ಇವರನ್ನು ಸರ್ದಾರ್ ಅಥವಾ ಪೇಶ್ವೆಗಳೆನ್ನುತ್ತಿದ್ದರು. ಇವರು ಬೆಳಗಾವಿ ಜಿಲ್ಲೆಯ ನಿಪ್ಪಾಣಿ, ಅಂಕಾಲಿ, ರಾಯಭಾಗ, ಕಾಗವಾಡದಲ್ಲಿ,

**200 ಸದಸ್ಯರ ಸಂತೃಪ್ತಿ**

ಕೇರಳದ ಸಂಸ್ಕೃತಿ ಮತ್ತು ಕರ್ನಾಟಕ ಕರಾವಳಿಯ ಸಂಸ್ಕೃತಿ ಹೆಚ್ಚೂಕಡಿಮೆ ಒಂದೇ ರೀತಿ. ಇಂತಹ ಸುಂದರ ಮನೆ ಕೇರಳದಲ್ಲಿಯೂ ನಾನು ಕಂಡಿಲ್ಲ. ಅಲ್ಲಿ ಹಿಂದೆ ಇದ್ದರೂ ಕಾಲಕ್ರಮೇಣ ನಶಿಸಿಹೋಗಿದೆ. ಕುಂಜೂರು ಮನೆಗೆ ಸಂಬಂಧಿಸಿದ ಸುಮಾರು 200 ಮಂದಿ ಇಲ್ಲಿಗೆ ಭೇಟಿ ನೀಡಿ ಅಳಿದುಹೋಗುತ್ತಿದ್ದ ತಮ್ಮ ಕುಟುಂಬದ ಪ್ರತಿಷ್ಠಿತ ಸಂಕೇತವನ್ನು ಉಳಿಸಿದ್ದಕ್ಕೆ ಬಹಳ ಸಂತೋಷ ಪಟ್ಟಿದ್ದಾರೆ. ಅಮೆರಿಕ, ಕೆನಡಾದಲ್ಲಿದ್ದ ಕೆಲವರು ಹಣಕಾಸನ್ನೂ ಕೊಟ್ಟಿದ್ದಾರೆ.

**– ವಿಜಯನಾಥ ಶೆಣೈ,**
ಹಸ್ತಶಿಲ್ಪ ಟ್ರಸ್ಟ್ ಕಾರ್ಯದರ್ಶಿ.


ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ, ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಆಡಳಿತ ನಡೆಸುತ್ತಿದ್ದರು. ರಾಮದುರ್ಗ, ಜಮಖಂಡಿಯಲ್ಲಿಯೂ ಸಣ್ಣ ಪ್ರಾಂತ್ಯಗಳಿದ್ದವು.

ಈ ಮರಾಠ ಆಡಳಿತಗಾರರು ಅವರ ರಾಜವಾಡಗಳನ್ನು (ಅರಮನೆ) ನಿರ್ಮಿಸಿಕೊಂಡಿದ್ದರು. ಇದರಲ್ಲಿ ದರ್ಬಾರ್ ಹಾಲ್ ವಿಶಾಲವಾಗಿರುತ್ತಿದ್ದವು. ಮುಧೋಳದಲ್ಲಿ ಮರಾಠ ಬುಡಕಟ್ಟಿನ ಘೋರ್ಪಡೆಯವರು ಸುಮಾರು 200 ವರ್ಷಗಳ ಹಿಂದೆ ಅರಮನೆ ಕಟ್ಟಿದ್ದರು. ಈ ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟು ಕೆಲವು ಗ್ರಾಮಗಳಿದ್ದವು, ಇವೆಲ್ಲವೂ ಕೃಷಿ ಭೂಮಿಗಳಾಗಿದವು. ಅಕ್ಕಪಕ್ಕದ ಗ್ರಾಮಗಳೊಂದಿಗೆ ಸೌಹಾರ್ದ ಸಂಬಂಧವಿರಿಸಿಕೊಳ್ಳುತ್ತಿದ್ದ ಘೋರ್ಪಡೆಯವರು ರಾಯಲ್ ಕೋರ್ಟ್‌ನ ಪ್ರಮುಖ ಅಧಿಕಾರಿಗಳಿಗೆ ಸೂಕ್ತ ತರಬೇತಿ ನೀಡಿ ಅವರನ್ನು ಮಂತ್ರಿಗಳನ್ನಾಗಿ ನೇಮಿಸಿಕೊಳ್ಳುತ್ತಿದ್ದರು. ಬ್ರಿಟಿಷರ ಕಾಲದಲ್ಲಿ ಮುಧೋಳದ ರಾಜರು ಬಹುತೇಕ ಅಧಿಕಾರಗಳು ಕೈತಪ್ಪಿದವು. ಮುಧೋಳದ ರಾಜರ ಗುಣ ನಡತೆಯಿಂದಾಗಿ ಜನರೇ ಸ್ವಯಂಪ್ರೇರಿತರಾಗಿ ತಮ್ಮ ಆಡಳಿತಗಾರರಾಗಿ ಘೋರ್ಪಡೆಯವರನ್ನು ಒಪ್ಪಿಕೊಂಡಿದ್ದರು. ಇದರಿಂದಾಗಿ ಬ್ರಿಟಿಷರು ಮುಧೋಳದ ರಾಜರಿಗೆ ಆಡಳಿತವನ್ನು ಕೊಟ್ಟಿದ್ದರು.

ಕಾಲಕ್ರಮೇಣ ಅರಮನೆ ಶಿಥಿಲಾವಸ್ಥೆಗೆ ಬಂದಾಗ ಪಕ್ಕದಲ್ಲಿ ಇನ್ನೊಂದು ಅರಮನೆಯನ್ನು ಕಟ್ಟಿಕೊಂಡರು. ಹಳೆಯ ಅರಮನೆ ಕಟ್ಟಡದ ಪಾಳುಬಿತ್ತು. ಅಕ್ಕಪಕ್ಕದವರು ಒಂದೊಂದೇ ಭಾಗವನ್ನು ಅತಿಕ್ರಮಿಸಿಕೊಂಡ ಪರಿಣಾಮ ದರ್ಬಾರ್ ಸಭಾಂಗಣ ಮಾತ್ರ ಉಳಿದಿತ್ತು.

ಮುಧೋಳ ರಾಜ ಮನೆತನದವರು ಜಮಖಂಡಿಯ ಗುಜರಾತಿ ವ್ಯಾಪಾರಿ ಓಸ್ವಾಲ್ ಕುಟುಂಬದವರಿಗೆ ಅಳಿದುಳಿದ ದರ್ಬಾರ್ ಹಾಲ್ ಸಹಿತ ಎಲ್ಲಾ ಭೂಮಿಗಳನ್ನು ಕೊಟ್ಟು ಪುಣೆಗೆ ಹೋದರು. ಹಸ್ತಶಿಲ್ಪ ಟ್ರಸ್ಟ್ ಓಸ್ವಾಲ್ ಕುಟುಂಬಸ್ಥರೊಂದಿಗೆ ಮಾತುಕತೆ ನಡೆಸಿ ಮುಧೋಳ ಅರಮನೆಯ ದರ್ಬಾರ್ ಸಭಾಂಗಣವನ್ನು ಹೊಸದಿಲ್ಲಿಯ ನಾರ್ವೆ ರಾಯಭಾರ ಕಚೇರಿಯ ಸಹಕಾರದಿಂದ ಮಣಿಪಾಲಕ್ಕೆ ತಂದು ಪುನಃ ಸ್ಥಾಪಿಸಿತು.

ಹಿಂದು ರಾಜರ ಕಟ್ಟಡಗಳಲ್ಲಿ ಮೊಘಲರ ಕಟ್ಟಡದ ಲಕ್ಷಣಗಳು ಕಾಣಸಿಗುತ್ತದೆ. ಬ್ರಿಟಿಷರ ಕಾಲದಲ್ಲಿ ಬ್ರಿಟಿಷರು ಇಂತಹ ಕಟ್ಟಡಗಳಿಗೆ ಪಾಶ್ಚಾತ್ಯ ಸ್ವರೂಪ ವಿನ್ಯಾಸಗಳನ್ನು ನೀಡಿದ್ದೂ ಇದೆ. ವಿಶಾಲವಾದ ಪ್ರವೇಶದ್ವಾರ, ಮರದ ಕೆತ್ತನೆಗಳು, ಕಿಂಡಿಗಳಲ್ಲಿ ಆಕರ್ಷಕ ಕೆತ್ತನೆಗಳಿವೆ. ರಾಜಸ್ಥಾನದಲ್ಲಿ ಸಭೆ ನಡೆಯುವಾಗ ರಾಜರು ಕೂರುತ್ತಿದ್ದ ಆಸನಗಳು, ತೂಗುದೀಪಗಳು, ಚಿತ್ರಕಲಾಕೃತಿಗಳು, ಟ್ರೋಫಿಗಳು, ಶಸ್ತ್ರಾಸ್ತ್ರಗಳನ್ನು ನೋಡಬಹುದು.



**ಕಮಲದಂತೆ ಅರಳಿದ್ದ ಕಮಲ್ ಮಹಲ್ :** ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಕುಕನೂರು ಶತಮಾನಗಳ ಹಿಂದೆ ಶಿಕ್ಷಣ ಮತ್ತು ರಾಜಕಾರಣದ ಕೇಂದ್ರವಾಗಿತ್ತು. ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ದೇವಗಿರಿಯ ಯಾದವರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯದ ಕಾಲವದು.

ಶತಮಾನಗಳಷ್ಟು ಸುದೀರ್ಘ ಅವಧಿಯಲ್ಲಿ ರಾಜರು ಸೇನಾಪಡೆಯೊಂದಿಗೆ ರಾಜ್ಯಪಾಲರನ್ನು ನೇಮಿಸುತ್ತಿದ್ದರು. ಆ ಕಾಲದಲ್ಲಿ ದಂಡನಾಯಕರು ಎನ್ನುತ್ತಿದ್ದರು. ಕುಕನೂರು ಸುತ್ತಮುತ್ತಲಿನ ಸುಮಾರು 30 ಗ್ರಾಮಗಳನ್ನು ರಾಜ್ಯಪಾಲರ ಆಡಳಿತದ ಸುಪರ್ದಿಗೆ ವಹಿಸಿದ್ದರು. ಕುಕನೂರಿನ ಮಹಲ್ ಹಲವು ಎಕ್ರೆ ಜಾಗಗಳಲ್ಲಿ ವಿಸ್ತರಿಸಿಕೊಂಡಿತ್ತು. ರಾಜ್ಯಪಾಲರು ಇಲ್ಲಿ ಉಳಿದುಕೊಳ್ಳುತ್ತಿದ್ದರು. ವಿಜಯನಗರದ ಸಾಮ್ರಾಜ್ಯದ ದಂಡ ನಾಯಕ ಕಮಲ ಮಹಲ್ ನಿರ್ಮಿಸಿದ್ದ. ಸೇನಾ ಮುಖ್ಯಸ್ಥನ ಖಾಸಗಿ ಕಚೇರಿಯೂ ಇಲ್ಲಿತ್ತು. ದೊಡ್ಡ ಮೂರು ಸ್ತರದ ಸಭಾಂಗಣಗಳು ಇಲ್ಲಿವೆ. ಇದರಲ್ಲಿ ಸೇನಾಧಿಕಾರಿಗಳು, ಆಡಳಿತದ ಸಿಬ್ಬಂದಿಗಳ ಸಭೆ ನಡೆಯುತ್ತಿತ್ತು.

1565ರಲ್ಲಿ ವಿಜಯನಗರ ಸಾಮ್ರಾಜ್ಯ ಪತನದ ಅನಂತರ ಶತ್ರುಗಳು ಹಂಪಿಯಲ್ಲಿ ಧ್ವಂಸ ಮಾಡಿದಂತೆ ಸುತ್ತಮುತ್ತಲೂ ಧ್ವಂಸ ಮಾಡಿದರು. ಇದರಲ್ಲಿ ಕುಕನೂರೂ ಒಂದು. ನಾಶಗೊಂಡ ಕಟ್ಟಡಗಳಲ್ಲಿ ನವಲಿಂಗೇಶ್ವರ ದೇವಸ್ಥಾನವೂ ಒಂದು. ಬಹಮನಿ ಸುಲ್ತಾನರ ಆಕ್ರಮಣದ ನಡುವೆಯೂ ಅಳಿದುಳಿದ ಕಟ್ಟಡಗಳಲ್ಲಿ ಕಮಲ ಮಹಲ್ ಒಂದು.

ಕಾಲಕ್ರಮೇಣ ಇದು ಕುಕನೂರಿನ ಡಾ।ಹನುಮಂತ ಜೆ. ದೇಸಾಯಿ ಅವರ ವಶಕ್ಕೆ ಬಂತು. ದಶಕಗಳ ಕಾಲ ಸರಿಯಾದ ಸುಪರ್ದಿ, ಮೇಲುಸ್ತುವಾರಿ ಇಲ್ಲದೆ ಕಟ್ಟಡ ಶಿಥಿಲಾವಸ್ಥೆಗೆ ಬಂತು. ನಿರ್ವಹಣಾ ಸಮಸ್ಯೆಯಿಂದಾಗಿ ದೇಸಾಯಿ ಮನೆತನದವರು ಹಸ್ತಶಿಲ್ಪ ಟ್ರಸ್ಟ್‌ನ್ನು ಸಂಪರ್ಕಿಸಿ ಹಸ್ತಾಂತರಿಸಿದರು.

**ಚಿತ್ರದ ಮೂಲಕ ದೇಶವನ್ನು ಒಂದುಗೂಡಿಸಿದ ರವಿವರ್ಮ :** ರಾಜಾ ರವಿವರ್ಮ ಹುಟ್ಟಿದ್ದು ಕೇರಳದಲ್ಲಿ 1848ರಲ್ಲಿ. ಕೇವಲ 58 ವರ್ಷ ಬದುಕಿದರೂ, ರಾಜ ಮನೆತನದಲ್ಲಿ ಹುಟ್ಟಿದ್ದರೂ ಚಿತ್ರಕಲೆಯಲ್ಲಿ ಅವರ ಹೆಸರು ಅಜರಾಮರ. ದೇಶದ ಆಧುನಿಕ ಚಿತ್ರಕಲೆ ಮೂಡುತ್ತಿರುವ ಕಾಲಘಟ್ಟದಲ್ಲಿ ಭಾರತೀಯ ಸಂಪ್ರದಾಯದ ಚಿತ್ರಕಲೆಗೆ ಯೂರೂಪಿನ ಚಿತ್ರಕಲೆಯ ತಂತ್ರಜ್ಞಾನವನ್ನು ಅಳವಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ರವಿವರ್ಮ ಕಿಲಿಮಣೂರು ರಾಜ ಮನೆತನದಲ್ಲಿ ಜನಿಸಿದರು. ಆಗ ಬ್ರಿಟಿಷರ ಆಗಮನದಿಂದಾಗಿ ರಾಜಮನೆತನಗಳ ಪ್ರಾಬಲ್ಯ ಕುಸಿದಿತ್ತು. ರವಿವರ್ಮರು ತಿರುವನಂತಪುರ ಅರಮನೆಗೆ ಬಂದು ಚಿತ್ರಕಲೆಯಲ್ಲಿ ತೊಡಗಿಸಿಕೊಂಡರು. ತಮ್ಮ ಕುಲದೇವಿ ಕೊಲ್ಲೂರು ಮೂಕಾಂಬಿಕೆ ದೇವಸ್ಥಾನಕ್ಕೆ ಬಂದು ತಾನು ಪರಂಪರೆಯಿಂದ ಬಂದ ರಾಜಮನೆತನದ ಜಮೀನುಗಳನ್ನು ನೋಡಿಕೊಂಡು ಬದುಕು ಮುಂದುವರಿಸಬೇಕೆ? ಆಸಕ್ತಿಯ ಚಿತ್ರಕಲೆಯಲ್ಲಿ ತೊಡಗಿಸಿಕೊಳ್ಳಬೇಕೆ? ಎಂದು ಕೇಳಿಕೊಂಡರು. ಅಲ್ಲಿಯೇ ಚಿತ್ರಕಲಾ ಜೀವನದಲ್ಲಿ ಮುಂದುವರಿಸಲು ಸಂಕಲ್ಪಿಸಿದರು. ಇದು ಸುಮಾರು 1890ರ ವೇಳೆ.

ಬಣ್ಣ, ಮಿಶ್ರಣ, ಸೂಕ್ಷ್ಮವಿವರಣೆಗಳ ಅಳವಡಿಕೆಯಲ್ಲಿ ಪಾಶ್ಚಾತ್ಯ ತಂತ್ರವನ್ನು ಅನುಸರಿಸಿದರು. ಮುಂಬೈ ಗಿರಿಗಾಂವ್‌ನಲ್ಲಿ ಮೊದಲು ಪ್ರಿಂಟಿಂಗ್ ಪ್ರೆಸ್ ಸ್ಥಾಪಿಸಿದರು. ಬಳಿಕ



ಘಾಟ್‌ಕೊಪ್ಪರ್‌ಗೆ ಸ್ಥಳಾಂತರಗೊಂಡರು. ಅಲ್ಲಿ ಪ್ಲೇಗ್ ಕಾಯಿಲೆ ಬಂದ ಕಾರಣ ಮುಂಬೈ– ಪುಣೆ ರಸ್ತೆಯ ಲೋನಾವಲ ಬಳಿಯ ಮಾಲವಳಿಗೆ ಪ್ರೆಸ್ ಸ್ಥಳಾಂತರಿಸಿದರು. ದೊಡ್ಡ ಸಂಖ್ಯೆಯಲ್ಲಿ ಚಿತ್ರಗಳನ್ನು ಮುದ್ರಣ ಮಾಡುವ ಉದ್ದೇಶದಿಂದ ಇಲ್ಲಿಗೆ ಸ್ಥಳಾಂತರಿಸಲಾಯಿತು. ಇದು ದೇಶಾದ್ಯಂತ ಪ್ರಸಿದ್ಧಿಗೆ ಬಂತು. ಆಗ ಅವರು ಜರ್ಮನ್ ಮುದ್ರಣ ತಂತ್ರಜ್ಞಾನವನ್ನು ಅನುಸರಿಸಿದರು. ಇವರಿಗೆ ನೆರವಾದವರು ಜರ್ಮನ್ ತಂತ್ರಜ್ಞ ಫ್ರಿಟ್ಜ್ ಸೈಝುರ್. ಲಿತೋ ಸ್ಟೋನ್‌ನಿಂದ ಚಿತ್ರಗಳ ಉತ್ಪಾದನೆ ಆರಂಭವಾಯಿತು. ಚಿತ್ರಕಲೆ, ಮುದ್ರಣದ ಇತಿಹಾಸದಲ್ಲಿ ಇದಕ್ಕೆ ಬಹಳ ಮಹತ್ವವಿದೆ. ಇದು ಗುಣಮಟ್ಟದ ಚಿತ್ರಗಳಿಗೆ ಕಾರಣವಾಯಿತು. ರವಿವರ್ಮರ ಈ ದಿಟ್ಟ ಹೆಜ್ಜೆ ಅವರಿಗೆ ರಾಷ್ಟ್ರೀಯ ಸ್ತರವನ್ನು ತಂದುಕೊಟ್ಟಿತಲ್ಲದೆ ಜನಸಾಮಾನ್ಯರ ಬಾಯಲ್ಲಿ ಹರಿದಾಡುವಂತಾಯಿತು. ಹಿಂದು ದೇವತೆಗಳ ಚಿತ್ರಗಳು ಭಾರತದ ಮೂಲೆಮೂಲೆಗಳ ಮನೆಗಳಲ್ಲಿ, ಕಚೇರಿಗಳಲ್ಲಿ, ಮಂದಿರಗಳಲ್ಲಿ ರಾರಾಜಿಸುವಂತಾಯಿತು. ಎರಡಾಣೆ, ನಾಲ್ಕಾಣೆಗೆ ಚಿತ್ರಗಳು ಸಿಗುತ್ತಿದ್ದವು. ಇವರ ಹಾದಿಯನ್ನು ಅನೇಕ ಚಿತ್ರಕಲಾವಿದರು ಅನುಸರಿಸಿದರು. ವಾಣಿಜ್ಯ ಪ್ರಪಂಚ ಈ ಅವಕಾಶವನ್ನು ಬಳಸಿಕೊಂಡು ಕ್ಯಾಲೆಂಡರ್, ಪೋಸ್ಟರ್, ಗ್ರೀಟಿಂಗ್ ಕಾರ್ಡ್, ಪ್ಲೇಯಿಂಗ್ ಕಾರ್ಡ್, ಬೆಂಕಿಪೊಟ್ಟಣಗಳ ಲೇಬಲ್‌ಗಳಿಗೆ ಬಳಸಿಕೊಂಡಿತು. ಬಹುತೇಕ ಇವೆಲ್ಲಾ ಮುದ್ರಣವಾದದ್ದು ರವಿವರ್ಮರ ಪ್ರೆಸ್‌ನಲ್ಲಿ.

ರವಿವರ್ಮ ಮಾತ್ರವಲ್ಲದೆ ಅವರ ತಮ್ಮ ರಾಜಾರಾಜವರ್ಮ ಕೂಡ ಚಿತ್ರಕಲಾವಿದ. ಇವರು ಹಿನ್ನೆಲೆಯ ಕೆಲಸಗಳನ್ನು ಮಾಡುತ್ತಿದ್ದರು. ಇವರು ಪ್ರಸಿದ್ಧಿಗೆ ಬರಲಿಲ್ಲ. ರವಿವರ್ಮರ ಸಾಧನೆಯ ಮೇಲೆ ಬೆಳಕು ಚೆಲ್ಲಿದ ಆಸ್ಟ್ರಿಯಾದ ಪುರಾತತ್ವಜ್ಞ ವಿಲಿಯಂ ರುಮೇರ್, ಮುಖ್ಯ ಚುನಾವಣಾ ಆಯುಕ್ತರಾಗಿದ್ದ ನವೀನ್ ಚಾವ್ಲಾರ ಪತ್ನಿ, ಚಿತ್ರಕಲೆ ಸಂರಕ್ಷಕಿ ರೂಪಿಕಾ ಚಾವ್ಲಾ, ಇಟಲಿಯ ಯೋನೆರ್ ಎಪ್ರೀಲೆ ಅವರು ಮಣಿಪಾಲಕ್ಕೆ ಆಗಮಿಸಿ ಹಸ್ತಶಿಲ್ಪ ಟ್ರಸ್ಟ್ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದರು.

**ಕೆಥೊಲಿಕರ ಜೀವನ ಶೈಲಿ ಸಾರುವ ಮಂಗ್ಳೂರ್ ಕ್ರಿಶ್ಚಿಯನ್ ಹೌಸ್** : ಮಂಗಳೂರಿನ ರೋಮನ್ ಕೆಥೊಲಿಕರು ವಿವಿಧ ವೃತ್ತಿಯಲ್ಲಿ ತೊಡಗಿಕೊಂಡಿದ್ದರು. ಇದರಲ್ಲಿ ಒಂದು ವರ್ಗ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಫಿ ಬೆಳೆಗಾರರೂ, ಮಂಗಳೂರಿನಲ್ಲಿ ಗೋಡಂಬಿ ಮತ್ತು ಹೆಂಚಿನ ಕಾರ್ಖಾನೆಯನ್ನೂ ಹೊಂದಿದ್ದರು. ಬಹು ಮಂದಿ ವ್ಯಾಪಾರ ಮತ್ತು ಸೇವಾ ಕ್ಷೇತ್ರದಲ್ಲಿದ್ದಾರೆ.

ಕಳೆದ ಶತಮಾನದ ಆರಂಭದಲ್ಲಿ ದೊಡ್ಡ ಸಂಖ್ಯೆಯಲ್ಲಿ ಇವರು ಬಂಗ್ಲೆ ರೀತಿಯ ಮನೆಗಳನ್ನು ನಿರ್ಮಿಸಿಕೊಂಡರು. ತೆರೆದುಕೊಂಡ ಮುಂಭಾಗ, ಮಧ್ಯದಲ್ಲಿ ವಿಶಾಲ ಸಭಾಂಗಣ, ಇದಕ್ಕೆ ಹೊಂದಿಕೊಂಡಂತೆ ರೂಮುಗಳು, ದೊಡ್ಡ ಗಾತ್ರದ ಅಡುಗೆ ಮನೆ, ಭೋಜನಗೃಹ, ಮನೆ ಸುತ್ತ ಹೂದೋಟಗಳು ಇಂತಹ ಕಟ್ಟಡಗಳ ಲಕ್ಷಣಗಳು. ಹೂದೋಟಗಳು ಕ್ರೈಸ್ತರ ಮನೆಗಳ ಒಂದು ಭಾಗ. ಹಿರಿಯರ ಭಾವಚಿತ್ರಗಳು, ಪಡೆದ ಟ್ರೋಫಿಗಳು ಗೋಡೆಗಳಲ್ಲಿ ರಾರಾಜಿಸುತ್ತಿದ್ದವು. ಗುಣಮಟ್ಟದ ಪೀಠೋಪಕರಣಗಳು, ನೆಲಕ್ಕೆ ಜರ್ಮನ್ ಟೈಲ್ಸ್ ನೆಲಹಾಸುಗಳಿಂದ ವಿರಾಜಿಸುತ್ತಿದ್ದವು.

ಮಂಗಳೂರು ಕ್ರೈಸ್ತರು ಮೂಲತಃ ಗೋವಾದವರು. ಸುಮಾರು 1510ರಲ್ಲಿ ಪೋರ್ಚುಗೀಸರ ಕಾರ್ಯಾಚರಣೆಯಿಂದಾಗಿ ಕ್ರೈಸ್ತರಾದರು. ಭಾರತದಲ್ಲಿ ಮೊದಲ ಯೂರೋಪ್ ಶೈಲಿ ಕಟ್ಟಡಗಳು ರಚನೆಗೊಂಡದ್ದು ಪೋರ್ಚುಗೀಸರಿಂದ. 18ನೆಯ ಶತಮಾನದ ಅಂತ್ಯದಲ್ಲಿ ಬ್ರಿಟಿಷರು ಬಲಗೊಂಡ ಬಳಿಕ ಸರಕಾರಿ ಕಚೇರಿ ಕಟ್ಟಡಗಳು, ಶಾಲಾ ಕಾಲೇಜುಗಳು, ದೊಡ್ಡ ಬಂಗ್ಲೆಗಳಂತಹ ಆಂಗ್ಲೋಇಂಡಿಯನ್ ಕಟ್ಟಡಗಳು ದೇಶಾದ್ಯಂತ ನಿರ್ಮಾಣಗೊಂಡವು. ಇವು ಕ್ರಿಶ್ಚಿಯನ್ ಮನೆಗಳಿಗೆ ಮಾದರಿಯಾದವು. ಸ್ಥಳೀಯ ಭೌಗೋಳಿಕ ವಾತಾವರಣಕ್ಕೆ ಕೆಲವೊಂದು ಮಾರ್ಪಾಡುಗಳನ್ನು ಮಾಡಿಕೊಂಡು ಇವು ತಲೆ ಎತ್ತಿದವು.

**ಗತಕಾಲದ ವೈಭವ ಸಾರುವ ಕುಂಜೂರು ಚೌಕಿಮನೆ :**

ಉಡುಪಿ ತಾಲೂಕು ಅದಮಾರು ಸಮೀಪದ ಕುಂಜೂರು ಚೌಕಿಮನೆಯನ್ನು ನಿರ್ಮಿಸಿದ್ದು ಕಳೆದ ಶತಮಾನದ ಆದಿ ಭಾಗದಲ್ಲಿ. ಸ್ಥಳೀಯ ಬ್ರಾಹ್ಮಣ ಅಯ್ಯಪ್ಪ ನಾರಾಯಣರಂತೆ ಸುಮಾರು 200–250 ವರ್ಷಗಳ ಹಿಂದೆ ನೂರಾರು ಮಂದಿ ಕೇರಳಕ್ಕೆ ಪೂಜಾವೃತ್ತಿಗೆ ಹೋಗಿ ನೆಲೆ ಕಂಡಿದ್ದರು. ಅಯ್ಯಪ್ಪ ನಾರಾಯಣರು ತಿರುವನಂತಪುರ ಅನಂತಪದ್ಮನಾಭ ದೇವಸ್ಥಾನದ ಪ್ರಧಾನ ಪುರೋಹಿತರೂ ಆಗಿದ್ದರು. ಅವರು ವೈಕಾಂ ಜಿಲ್ಲೆಯ ವೆಲ್ಲೂರಿನಲ್ಲಿ ಸಾಮಾನ್ಯ ಮನೆಯನ್ನು ಕಟ್ಟಿಕೊಂಡಿದ್ದರೆ, ತನ್ನ ಮನೆಯ ಬಂಧುಗಳ ವಾಸಕ್ಕಾಗಿ ಕುಂಜೂರಿನಲ್ಲಿ ಮನೆಯೊಂದನ್ನು ನಿರ್ಮಿಸಲು ಬಯಸಿದರು.

ಕೇರಳದ ಕುಶಲಕರ್ಮಿಗಳಿಂದ ಕಂಬ, ಬಾಗಿಲು, ಜಂತಿ, ಪಕ್ಕಾಸಿ ಹೀಗೆ ಎಲ್ಲಾ ಮರದ ಕೆತ್ತನೆಗಳನ್ನು ರಚಿಸಿ ಅವುಗಳನ್ನು ಸಮುದ್ರದ ಮೂಲಕ ಉಚ್ಚಿಲಕ್ಕೆ ತಂದರು. ಆಗ ಹಡಗು ಇರಲಿಲ್ಲ. ತೆಪ್ಪದ ಮೂಲಕ ತಂದದ್ದು. ಅಲ್ಲಿಂದ ಕುಂಜೂರಿಗೆ ಎತ್ತಿನ ಗಾಡಿಯಲ್ಲಿ ಸಾಗಿಸಿದರು. ಕೇರಳದ ಕುಶಲಕರ್ಮಿಗಳೇ ಮನೆ ನಿರ್ಮಿಸಿದರು.

ಕುಂಜೂರು ಚೌಕಿಮನೆ ಇಡೀ ಗ್ರಾಮದಲ್ಲಿಯೇ ಆಕರ್ಷಕ ಕೇಂದ್ರವಾಗಿತ್ತು ಮತ್ತು ಗ್ರಾಮದ ಭಾಗವಾಗಿತ್ತು. ಹಲವು ಮದುವೆ, ಉಪನಯನಾದಿಗಳಿಗೆ ಮನೆ ಸಾಕ್ಷಿಯಾಯಿತು. ಶ್ರೀಕೃಷ್ಣಜನ್ಮಾಷ್ಟಮಿ, ನಾಗಪಂಚಮಿ, ಗಣೇಶ ಚತುರ್ಥಿ, ನವರಾತ್ರಿ ಹೀಗೆ ಅನೇಕ ಧಾರ್ಮಿಕ ಕಾರ್ಯಕ್ರಮಗಳೂ ನಡೆದವು. ಕಾಲಾನುಕ್ರಮದಲ್ಲಿ ಮೂಲ ರಚನೆಗಳು ಒಂದೊಂದಾಗಿ ಶಿಥಿಲವಾಗತೊಡಗಿದವು. 1958 ಬಳಿಕ ನಾರಾಯಣರ ಮೂರನೆಯ ತಲೆಮಾರು ವೃದ್ಧೆ ಪುಟ್ಟಮ್ಮ ಬಾಯಿ ಒಬ್ಬರೇ ಅಲ್ಲಿದ್ದರು, ಸುಮಾರು 25 ವರ್ಷ. ಅವರಿಗೆ ಮನೆ ನಿರ್ವಹಿಸುವುದು ಕಷ್ಟವಾಯಿತು. ಇದೇ ವೇಳೆ ನಿರ್ವಹಣೆ ಇಲ್ಲದೆ ವಿಶೇಷವಾಗಿ ಮಳೆಗಾಲದಲ್ಲಿ ಮನೆಯ ಪ್ರಮುಖ ಭಾಗಗಳು ಜಖಂ ಆದವು. ವಯಸ್ಸು, ಅನಾರೋಗ್ಯದ ಕಾರಣ ಪುಟ್ಟಮ್ಮ ಬೆಂಗಳೂರಿನಲ್ಲಿರುವ ಮಗಳ ಮನೆಗೆ ಹೋದರು.

ಮನೆಯ ವಾರೀಸುದಾರರಾದ ಶ್ರೀಧರ ರಾವ್, ಶ್ರೀನಿವಾಸಮೂರ್ತಿ, ಮಾಧವ ರಾವ್ ಅವರು ದೂರದೂರುಗಳಲ್ಲಿ ವಾಸವಿದ್ದರು, ಈ ಮನೆಯನ್ನು ನಿರ್ವಹಿಸಲಾಗುತ್ತಿರಲಿಲ್ಲ. ಹಸ್ತಶಿಲ್ಪ ಟ್ರಸ್ಟ್ ಇವರನ್ನು ಸಂಪರ್ಕಿಸಿದಾಗ ಹೆರಿಟೇಜ್ ವಿಲೇಜ್‌ಗೆ ದಾನವಾಗಿ ನೀಡಿದರು. ಹೊಸದಿಲ್ಲಿಯ ನಾರ್ವೆ ರಾಯಭಾರ ಕಚೇರಿ ಹಣಕಾಸು ನೆರವಿನಿಂದ ಚೌಕಿಮನೆ ಹಿಂದಿದ್ದ ಶೈಲಿಯಲ್ಲಿಯೇ ಪುನಃಸ್ಥಾಪನೆಗೊಂಡಿತು.

ಚೌಕಿಮನೆ ಕೇರಳ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಇದು 15ನೆಯ ಶತಮಾನದ 'ಮನುಷಾಲಯ ಚಂದ್ರಿಕಾ' ಗ್ರಂಥದ ಆಧಾರದಲ್ಲಿ ರಚನೆಯಾಗಿದೆ. ಇದು ಎರಡು ಮಹಡಿಗಳ ಮನೆ. ಸುತ್ತ ಚೌಕಿ ಇದ್ದು ಮಧ್ಯದಲ್ಲಿ ಮಾಡಿನ ನೀರು ಬೀಳುತ್ತದೆ. ಇದು ಮಧ್ಯ ಭಾಗಕ್ಕೆ ಬಿಸಿಲು ಬಿದ್ದು ಬೆಳಕು ಬರಲು ಅನುಕೂಲ. ನೀರು ಹೊರಹೋಗಲು ವ್ಯವಸ್ಥೆ ಇದೆ. ನಾಲ್ಕೂ ದಿಕ್ಕಿನಲ್ಲಿ ಜಗುಲಿಗಳಿವೆ. ಅಡುಗೆ ಮನೆ, ಭೋಜನಾಲಯಗಳಲ್ಲದೆ ದೇವರ ನೈವೇದ್ಯ ತಯಾರಿಸಲು ಪ್ರತ್ಯೇಕ ಅಡುಗೆ ಮನೆ ಇದೆ. ಆಕರ್ಷಕ ಮರದ ಕೆತ್ತನೆಗಳು ಮನಸೂರೆಗೊಳ್ಳುತ್ತವೆ.

**ಜನಪದ ಸಂಸ್ಕೃತಿಯ ಪ್ರತೀಕಗಳು ಮೈದಳೆದಾಗ...**

ಕರ್ನಾಟಕದ ಕರಾವಳಿಯ ನಾಡು ಗರೋಡಿ, ದೈವದ ಮನೆ, ಆಲಡೆ, ಭೂತಾಲಯ, ಬ್ರಹ್ಮಸ್ಥಾನದಂತಹ ಮಂದಿರಗಳು, ಕೋಲ, ನೇಮ, ಢಕ್ಕೆಬಲಿ, ನಾಗಮಂಡಲದಂತಹ ಜನಪದ ಆಚರಣೆಗಳ ಬೀಡು. ಇದರ ಜೊತೆ ಯಕ್ಷಗಾನ, ಗೊಂಬೆಯಾಟದಂತಹ ಜನಪದ ರಂಗಕಲೆಗಳೂ ಪ್ರಸಿದ್ಧ. ಮನೆ, ವೃತ್ತಿಪರ ಉಪಕರಣಗಳೂ ಜನಪದ ಶೈಲಿಯ ಲಕ್ಷಣಗಳನ್ನು ಹೊಂದಿವೆ. ದೇವಸ್ಥಾನಗಳಲ್ಲಿ ಬಳಸುವ ಸಂಗೀತೋಪಕರಣಗಳೂ ಜನಪದ ಶೈಲಿಯ ಲಕ್ಷಣಗಳನ್ನು ಮೈದಳೆದಿವೆ.

ಇಂತಹ ತಾಣಗಳಲ್ಲಿ ಸಾಮಗ್ರಿಗಳು, ಉರುಗಳು, ಉಪಕರಣಗಳು ಹಳತಾಗಿ ಪುನಾರಚಿಸುವಾಗ ಇವುಗಳನ್ನು ನದಿ, ಸಮುದ್ರಕ್ಕೆ ಬಿಡುವುದು ವಾಡಿಕೆ. ಹಾಳಾದ ಲೋಹದ ವಿಗ್ರಹಗಳನ್ನು ಕರಗಿಸಿ ಹೊಸತಾಗಿ ರಚಿಸುವುದಾದರೂ ಇವುಗಳಿಗೆ ಹಿಂದಿನ ರೂಪ ಕೊಡುವುದು ಕಷ್ಟ. ಬದಲಾಗುತ್ತಿದ್ದ ಆಧುನಿಕ ಕಾಲಘಟ್ಟದಲ್ಲಿ ಹಳೆಯ ಸಾಮಗ್ರಿಗಳ ಮಹತ್ವ ಗೊತ್ತಿಲ್ಲದೆ ಮೂಲೆಗೆ ತಳ್ಳಲ್ಪಟ್ಟವು. ಇದು ಕರ್ನಾಟಕದ ಕರಾವಳಿ ಮಾತ್ರವಲ್ಲ ದೇಶದೆಲ್ಲೆಡೆ ಕಂಡುಬಂದ ವಿದ್ಯಮಾನ. ಈ ವಿದ್ಯಮಾನವನ್ನು ತಡೆಯಲಾಗದ ಹಸ್ತಶಿಲ್ಪ ಟ್ರಸ್ಟ್ ಈ ಸಾಮಗ್ರಿಗಳನ್ನು ಹಾಳುಮಾಡದೆ ತಮ್ಮ ಟ್ರಸ್ಟ್‌ಗೆ ಒಪ್ಪಿಸಲು ಪ್ರಯತ್ನಿಸಿತು. ಶಿಲ್ಪ ಸಂಪ್ರದಾಯ, ಜನಪದ ಸಂಸ್ಕೃತಿಗಳು ಜನಾಂಗೀಯ ಗುರುತಿಸುವಿಕೆ ಮತ್ತು ಸಾಂಸ್ಕೃತಿಕ ನಿರಂತರತೆಯ ಭಾಗ ಎಂದು ತಿಳಿದ ಟ್ರಸ್ಟ್ ಜನಪದ ಕಲೆಗಳ ವಸ್ತುಸಂಗ್ರಹಾಲಯವನ್ನು ಹೊಸದಿಲ್ಲಿಯ ಫಿನ್ಲಂಡ್ ರಾಯಭಾರ ಕಚೇರಿ ಸಹಕಾರದಿಂದ ಸ್ಥಾಪಿಸಿತು. ಪ್ರಸ್ತುತ ಮರದ ದೊಡ್ಡ ದೊಡ್ಡ ವಿಗ್ರಹಗಳನ್ನು (ಉರುಗಳು) ಇಲ್ಲಿ ಸ್ಥಾಪಿಸಲಾಗಿದೆ.

**ಕಲಾತ್ಮಕ ಮಂದಿರಕ್ಕೆ ಮಾದರಿ**

ಕೊಡಗು ಜಿಲ್ಲೆಯಲ್ಲಿ ಜೀರ್ಣಾವಸ್ಥೆಯಲ್ಲಿದ್ದ ಕಲಾತ್ಮಕ ಹರಿಹರ ಮಂದಿರ ಕೇರಳ ವಾಸ್ತುಶಿಲ್ಪ ಶೈಲಿಯಲ್ಲಿ ರಚನೆಗೊಂಡಿತ್ತು. ಇದರ ಮರದ ಕೆತ್ತನೆಗಳು ಅದ್ಭುತ. ನಾಲ್ಕು ಶತಮಾನಗಳ ಹಿಂದಿನ ಈ ದೇವಾಲಯ ಒಂದು ಕಾಲದಲ್ಲಿ ವೈಭವದಿಂದ ಇತ್ತು ಎನ್ನುವುದಕ್ಕೆ ಅದರ ಕಲಾವೈಭವವೇ ಸಾಕ್ಷಿ. ಹಸ್ತಶಿಲ್ಪ ಟ್ರಸ್ಟ್ ಕಟ್ಟಡವನ್ನು ಇಲ್ಲಿ ತರುವಾಗಲೇ ಗರ್ಭಗುಡಿ ನಾಶ ಹೊಂದಿತ್ತು. ಪ್ರಾಯಃ ಶತ್ರು ಆಕ್ರಮಣಕ್ಕೆ ತುತ್ತಾಗಿರಲೂಬಹುದು. ಪ್ರಾಚೀನ ದೇವಾಲಯಗಳ ಶಿಲ್ಪ ವೈಭವ ನೋಡಲು ಇದೊಂದು ಮಾದರಿ.

**ಕಣ್ಣಿಗೆ ಬಟ್ಟೆ ಕಟ್ಟಿ ಸುತ್ತಾಡಿದ ಅನುಭವ...**

ದಕ್ಷಣ ನವಾಬರ ಮಹಲ್‌ನ್ನು ಮಣಿಪಾಲಕ್ಕೆ ತಂದ ಹಸ್ತಶಿಲ್ಪ ಟ್ರಸ್ಟ್ ಕಾರ್ಯದರ್ಶಿ ವಿಜಯನಾಥ ಶೆಣೈಯವರ ಅನುಭವ ದಂತಕಥೆಯಂತಿದೆ. ನವಾಬರ ವಂಶಸ್ಥರಿಗೆ ತಮ್ಮ ವಿಲಾಸೀಜೀವನವನ್ನು ಪೂರೈಸಿಕೊಳ್ಳಲಾಗದ, ಆದರೆ ಅಂತಸ್ತನ್ನು ಬಿಟ್ಟುಕೊಡಲಾಗದ ಹೊತ್ತು. ವಿಜಯನಾಥ ಶೆಣೈಯವರನ್ನು ಹುಮ್ನಾಬಾದ್‌ನಿಂದ ಇಬ್ಬರು ಬೈಕ್‌ನಲ್ಲಿ ಕರೆದೊಯ್ದರು. ಎರಡು ಬೈಕ್‌ಗಳಲ್ಲಿ ಒಂದರಲ್ಲಿ ಶೆಣೈ ಹಿಂದುಗಡೆ ಕುಳಿತಿದ್ದರು. ಯಾವ ದಾರಿಯಲ್ಲಿ ಎಲ್ಲಿಗೆ ಹೋದೆವು ಎಂಬುದು ಗೊತ್ತಾಗಬಾರದೆಂದು ಶೆಣೈಯವರ ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿದ್ದರು. ಈಗಲೂ ಆ ಸ್ಥಳ ಯಾವುದೆಂದು ಗೊತ್ತಿಲ್ಲ. ಮೂರೂವರೆ ತಾಸು ಪ್ರಯಾಣದ ಬಳಿಕ ಬಟ್ಟೆ ಕಳಚಿದಾಗ ಕಂಡದ್ದು ದಾಳಿಂಬೆ, ದ್ರಾಕ್ಷಿ ತೋಟಗಳು. ಮನೆಯೊಳಗೆ ಹೋದಾಗ ಅತ್ಯಾಶ್ಚರ್ಯ ಕಾದಿತ್ತು. ಹಿಂದಿನ ಕಾಲದ ವೈಭವ, ಹಾಳು ಸುರಿಯುವ ಸ್ಥಿತಿ, ಈಗ ಮಾರಾಟ ಮಾಡುವ ಗಳಿಗೆ ಶೆಣೈಯವರಿಗೂ ಆ ಮನೆಯವರಿಗೂ ಬೇಸರ ಮೂಡಿಸಿತು. ಕೊನೆಯಲ್ಲಿ ಹೊರಡುವಾಗ ಬಾಲ್ಕನಿಯಲ್ಲಿದ್ದ ಸ್ತ್ರೀಯರು ಇಳಿದುಬಂದರು. ಎಂಥ ಸ್ತ್ರೀಯರು, ಅಂಥ ಸುಂದರಿಯರು. ಸೂರ್ಯನ ಬಿಸಿಲನ್ನೇ ನೋಡದ ಹುಣ್ಣಿಮೆಯ ಬೆಳದಿಂಗಳಂತಿದ್ದರು. ಅವರಿಗೂ ಆದ ಬೇಸರ ನೋಟದಲ್ಲಿಯೇ ತೋರುತ್ತಿತ್ತು. ಒಟ್ಟು ಹತ್ತು ತಿಂಗಳಲ್ಲಿ 26 ಕುಶಲಕರ್ಮಿಗಳು 2001ರಲ್ಲಿ ಕಟ್ಟಡವನ್ನು ಪುನಃ ನಿರ್ಮಿಸಿದರು.

**ಆನ್‌ಲೈನ್ ಬುಕ್ಕಿಂಗ್ ಮಾತ್ರ ಅವಕಾಶ**

ಮಣಿಪಾಲದ ಹಸ್ತಶಿಲ್ಪ ಟ್ರಸ್ಟ್ ಹೆರಿಟೇಜ್ ವಿಲೇಜ್‌ನಲ್ಲಿ ನಿರ್ಮಿಸಿರುವ ಪುರಾತನ ರಚನೆಗಳ ಸಾರ್ವಜನಿಕ ವೀಕ್ಷಣೆ ಮೇ ತಿಂಗಳಲ್ಲಿ ನಡೆಯಿತು. ಜೂನ್, ಜುಲೈ, ಆಗಸ್ಟ್ ತಿಂಗಳಲ್ಲಿ ಮಳೆಗಾಲದ ನಿಮಿತ್ತ ಕಟ್ಟಡಗಳ ಹೊರ ಭಾಗಕ್ಕೆ ರಕ್ಷಣೆಗಾಗಿ ಮುಚ್ಚುವುದರಿಂದ ಸಾರ್ವಜನಿಕರಿಗೆ ವೀಕ್ಷಣೆ ಸಾಧ್ಯವಿಲ್ಲ. ಹೀಗಾಗಿ ಈ ಅವಧಿಯಲ್ಲಿ ಸಾರ್ವಜನಿಕ ಪ್ರವೇಶವಿಲ್ಲ. ಸೆಪ್ಟೆಂಬರ್‌ನಲ್ಲಿ ಮತ್ತೆ ಆರಂಭವಾಗಲಿದೆ.

ದಿನಕ್ಕೆ ಎರಡು ಅವಧಿ (ಬೆಳಗ್ಗೆ 10ರಿಂದ 12 ಗಂಟೆ, ಅಪರಾಹ್ನ 3 ರಿಂದ 5 ಗಂಟೆ) ನಿಗದಿಪಡಿಸಲಾಗಿದ್ದು ಮುಂದೆ ಸ್ವಲ್ಪ ಬದಲಾವಣೆ ಯಾಗಲೂಬಹುದು. ಒಂದು ಬಾರಿ 15 ಜನರಿಗೆ ಮಾತ್ರ ಅವಕಾಶವಿದ್ದು 12 ವರ್ಷಕ್ಕಿಂತ ಕೆಳಗಿನ ಮಕ್ಕಳಿಗೆ ಅವಕಾಶಗಳಿಲ್ಲ. ಟಿಕೆಟ್ ಪ್ರವೇಶ ದರ ಒಬ್ಬರಿಗೆ 500 ರೂ. https://in.bookmyshow.com/guided-tours/tour-of-hasta-shilpa-heritage-village/ ಈ ಆನ್‌ಲೈನ್ ಮೂಲಕವೇ ಬುಕ್ಕಿಂಗ್ ಮಾಡಬೇಕು. ಕೌಂಟರ್‌ನಲ್ಲಿ ಟಿಕೆಟ್ ಮಾರಾಟವಿಲ್ಲ. ಏನಾದರೂ ತಿಳಿಸುವುದಿದ್ದರೆ :hastashilpatrust@gmail.com ಈ ಇಮೇಲ್ ವಿಳಾಸಕ್ಕೆ ತಿಳಿಸಬಹುದು.

**ವೆಬ್‌ಸೈಟ್. indiaheritagevillage.org**



# ಹುಬ್ಬಳ್ಳಿಯ ಗತಕಾಲದ
# ಶಿಲ್ಪ ಕಲಾ ದೇಗುಲ


**ವಾಣಿಜ್ಯ ನಗರವಾದ ಹುಬ್ಬಳ್ಳಿಯಲ್ಲಿ ಇತಿಹಾಸದ ಪಳೆಯುಳಕೆಯಾಗಿ ನಿಂತಿರುವ ವಿಶಿಷ್ಟ ದೇವಾಲಯವೊಂದು ಕಣ್ಮನ ಸೆಳೆಯುತ್ತದೆ . ಆಧುನಿಕತೆಯ ಗಾಳಿಗೆ, ದಾಳಿಗೆ ಸಿಕ್ಕು ತನ್ನ ಮೂಕ ಕಥನವನ್ನು ಕೊರಳೆತ್ತಿ ಹೇಳುವ ಹಳೇ ಹುಬ್ಬಳ್ಳಿಯ ಭವಾನಿ ಶಂಕರ ದೇವಾಲಯ ಊರ ಜನರಿಗೇ ಅಪರಿಚಿತವಾಗಿರುವದು ಅಚ್ಚರಿಯ ಸಂಗತಿ.**

▪ ಪಿ.ಎಸ್. ಪರ್ವತಿ

ಶಿಲ್ಪಕಲಾ ವೈಭವಕ್ಕೆ ಕನ್ನಡಿ ಹಿಡಿಯುವ ಈ ದೇವಾಲಯ ಪುರಾತನ ಸಂಸ್ಕೃತಿಯ ಕುರುಹಾಗಿದೆ. ಹಳೇ ಹುಬ್ಬಳ್ಳಿಯ ಕಿಲ್ಲಾ ಪ್ರದೇಶದಲ್ಲಿರುವ ಈ ಗುಡಿ ಧರ್ಮ ಸಮನ್ವಯತೆಯ ದ್ಯೋತಕವಾಗಿದೆ. ಈ ಪ್ರದೇಶದಲ್ಲಿ ಜಲ ಸಮೃದ್ಧಿಯಾಗಿತ್ತಲ್ಲದೇ ಇಲ್ಲಿಗೆ ಸಮೀಪದಲ್ಲಿದ್ದ ಹೆಗ್ಗೆರಿಯ ಕೆರೆಯಿಂದ ನೀರು ಭವಾನಿಶಂಕರ ಗುಡಿಯ ಹೊಂಡಕ್ಕೆ ಹರಿದು ಬರುತ್ತಿತ್ತು. ಹೀಗಾಗಿ ಹಳೇ ಹುಬ್ಬಳ್ಳಿಯಲ್ಲಿ ಉತ್ಕೃಷ್ಟ ವೀಳ್ಯದೆಲೆಯ ಗಿಡ ಬಳ್ಳಿಗಳು ಬೃಹತ್ ಕಾನನೋಪಾದಿಯಲ್ಲಿ ಬೆಳೆಯುತ್ತಿದ್ದುದರಿಂದ ಇದಕ್ಕೆ ಎಲೆಯ ಪುಬ್ಬವಳ್ಳಿ, ಪೂರ್ವದವಳ್ಳಿ,ಹುಬ್ಬಳ್ಳಿ ಎಂದು ಹಾಗೂ ಸಮೃದ್ಧ ಹೂ–ಬಳ್ಳಿಗಳು ಇಲ್ಲಿ ಇದ್ದುದರಿಂದ ಇದು ಹುಬ್ಬಳ್ಳಿ ಎಂದೇ ಖ್ಯಾತವಾಗಿದ್ದನ್ನು ಇತಿಹಾಸದಲ್ಲಿ ಉಲ್ಲೇಖಿಸಲಾಗಿದೆ.

**ತ್ರಿಕೂಟಾಚಲ**

ಚಾಲುಕ್ಯ ಶೈಲಿಯ ಈ ಪ್ರಾಚೀನ ದೇವಾಲಯವು ಸಂಕೀರ್ಣ ಕಟ್ಟಡವಾಗಿದೆ. ಪೂರ್ವಾಭಿಮುಖವಾಗಿರುವ ಈ ತ್ರಿಕೂಟಾಚಲ ದೇವಸ್ಥಾನದಲ್ಲಿ ಮೂರು ಗರ್ಭಗೃಹಗಳಿದ್ದು ಅವು ಚೌಕಾಕಾರದಲ್ಲಿವೆ.ಇವುಗಳ ಮುಂಭಾಗದಲ್ಲಿ ತೆರೆದ ಸುಖನಾಸಿಗಳಿವೆ. ಒಳಾಂಗಣದಲ್ಲಿ ಹೊಳಪುಳ್ಳ ನಾಲ್ಕು ಕಂಬಗಳಿವೆ.ಬಿದ್ದು ಹೋಗಿದ್ದ ಸಭಾಮಂಟಪದ ಮುಂಭಾಗವನ್ನು ಶಿಲೆಯಿಂದಲೇ ಜೀರ್ಣೋದ್ಧಾರಗೊಳಿಸಲಾಗಿದೆ. ದೇವಾಲಯ ಪ್ರವೇಶಿಸಿದಾಗ ಎದುರಿಗಿರುವ ಗರ್ಭಗೃಹದಲ್ಲಿ ಪ್ರಾಚೀನ ಪಾಣಿಪೀಠದ ಮೇಲೆ ಸುಮಾರು ಒಂದು ಮೀಟರ ಎತ್ತರ ಇರುವ ಕಪ್ಪು ಶಿಲೆಯ ಚಾಲುಕ್ಯ ಶೈಲಿಯ ಸುಂದರ ನಾರಾಯಣ ವಿಗ್ರಹವಿದೆ. ಬದಿಯಲ್ಲಿ ಶ್ರೀದೇವಿ–ಭೂದೇವಿ ವಿಗ್ರಹಗಳಿವೆ. ನಾರಾಯಣನ ವಿಗ್ರಹದ ಹಿಂಭಾಗದಲ್ಲಿರುವ ವಿಶಿಷ್ಟ ಪ್ರಭಾವಳಿಯಲ್ಲಿ ಮಕರ ತೋರಣವಿದೆ. ಸುತ್ತಲೂ ದಶಾವತಾರ ಶಿಲ್ಪಗಳಿವೆ.



ಬಲ ಭಾಗದ ಗರ್ಭಗುಡಿಯಲ್ಲಿ ಭವಾನಿಶಂಕರಲಿಂಗ ಉಮಾಮಹೇಶ್ವರ ಶಿಲ್ಪವಿದೆ. ಮೂರ್ತಿಯ ಎಡ ಹಾಗೂ ಬಲಬದಿಯಲ್ಲಿ ಗಣೇಶ ಹಾಗೂ ಚಾಮರಧಾರಿಣಿ ಶಿಲ್ಪವಿದೆ. ಎಡ ಭಾಗದ ಗರ್ಭಗುಡಿಯಲ್ಲಿ ಗಣಪತಿ ಮೂರ್ತಿ ಇದೆ. ಇಲ್ಲಿ ಸಪ್ತಮಾತೃಕೆಯರ ಶಿಲ್ಪ ಪಟ್ಟಿ ಇದ್ದು, ಬ್ರಾಹ್ಮಿ ,ಕೌಮಾರಿ, ವರಾಹಿ, ವೈಷ್ಣವಿ, ಇಂದ್ರಾಣಿ, ಮಹೇಶ್ವರಿ ಹಾಗೂ ಚಾಮುಂಡಿ ಮೂರ್ತಿಗಳನ್ನು ಸುಂದರವಾಗಿ ಕೆತ್ತಲಾಗಿದೆ. ನಾರಾಯಣ. ಆದಿಶಕ್ತಿದೇವಿ, ಗಣೇಶ, ಸೂರ್ಯದೇವ ಇರುವ ಹಾಗೂ ನೃತ್ಯ ಮಂಟಪ ಹೊಂದಿರುವ ಹಾಗೂ 18 ಮೂರ್ತಿಗಳು ಇರುವ ಪುರಾತನ ಶೈಲಿಯಿಂದ ಸಹ ಈ ದೇವಸ್ಥಾನ ಐತಿಹ್ಯ ಪಡೆದಿದೆ.

**ಜೀರ್ಣೋದ್ಧಾರ**

ಆಕರ್ಷಕ ಶಿಲ್ಪಕಲಾ ಚೆಲುವಿನಿಂದ ಕಂಗೊಳಿಸುವ ಈ ದೇವಾಲಯ ಕಾಲಾಂತರದಲ್ಲಿ ನಿರ್ಲಕ್ಷ್ಯಕ್ಕೆ ಒಳಪಟ್ಟು, ಅತಿಕ್ರಮಣವಾಗಿ ಅವಜ್ಞೆಗೆ ಒಳಗಾಗಿದ್ದನ್ನು ಮನಗಂಡು ದೇವಸ್ಥಾನದ

ಪರಿಸರದಲ್ಲಿರುವ ಜನರು ದೇವಾಲಯದ ಪುನರುತ್ಥಾನಕ್ಕೆ ಮುಂದಾದರು. ಅದಕ್ಕಾಗಿ ಶ್ರೀ ಭವಾನಿಶಂಕರ ಹಾಗೂ ಶ್ರೀ ನಾರಾಯಣ ದೇವ ಟ್ರಸ್ಟ್ ಆಸ್ತಿತ್ವಕ್ಕೆ ಬಂದಿತು. ಹಳೇ ಹುಬ್ಬಳ್ಳಿ ನಿವಾಸಿಗಳು ಹಾಗೂ ಭಕ್ತರು ಗುಡಿಯ ಜೀರ್ಣೋದ್ಧಾರಕ್ಕೆ ಕೈ ಜೋಡಿಸಿದ್ದರಿಂದ ಮಂದಿರಕ್ಕೆ ಕಾಯಕಲ್ಪ ದೊರೆಯಿತು. ಜನರ ಎಚ್ಚೆತ್ತ ಪ್ರಜ್ಞೆಗೆ ಧರ್ಮಸ್ಥಳದ ಮಂಜುನಾಥ ಟ್ರಸ್ಟ್‌ನವರು

ಜೀರ್ಣೋದ್ಧಾರಕ್ಕೆ ನೆರವು ಕಲ್ಪಿಸಿದರು.ಪುರಾತತ್ವ ಇಲಾಖೆಯವರು ದೇಗುಲಕ್ಕೆ ಮೂಲ ಸ್ವರೂಪ ನೀಡಲು ಅನುದಾನ ಒದಗಿಸಿದ್ದರಿಂದ ಈ ಅಪರೂಪದ ದೇವಸ್ಥಾನ ಸುಂದರವಾಗಿ ಮೈದಾಳಿದೆ,ದೇವಾಲಯದಲ್ಲಿಯ ನಾರಾಯಣ,ದೇವಿ,ಭವಾನಿ,ಶಂಕರ ಮೂರ್ತಿ ಹಾಗೂ ಸಪ್ತ ಮಾತ್ರಕೆ ಶಿಲ್ಪ ಗಳು ವಿರೂಪಗೊಂಡಿದ್ದನ್ನು ಮನಗಂಡು ಅವುಗಳಿಗೆ ವಜ್ರಲೇಪನ ಮಾಡಲಾಗಿದೆ, ಗಣಪತಿ ಹಾಗೂ ಸೂರ್ಯದೇವನ ಮೂರ್ತಿಯನ್ನು 2010 ರಲ್ಲಿ ಪುನರ್ ಪ್ರತಿಷ್ಠಾಪಿಸಲಾಗಿದೆ. ಬಿದ್ದು ಹೋಗಿದ್ದ ಮಂದಿರದ ಮುಂಭಾಗದ ಮುಖ್ಯ ಮಂಟಪವನ್ನು ಶಿಲೆಯಲ್ಲಿಯೇ ಪುನರ್ ನಿರ್ಮಾಣ ಮಾಡಿ,ಮಂದಿರದ ಆವರಣವನ್ನು ಶುಚಿಗೊಳಿಸಿ ಸಾರ್ವಜನಿಕರ ವೀಕ್ಷಣೆಗೆ ಅನುಕೂಲ ಮಾಡಿಕೊಟ್ಟಿರುವದಾಗಿ ಟ್ರಸ್ಟ್ ಕಾರ್ಯದರ್ಶಿಗಳಾದ ಎಲ್ ಕೆ. ಲಕ್ಷ್ಮೇಶ್ವರ ವಿವರಿಸುತ್ತಾರೆ.

**ಪ್ರಾಚೀನತೆ**

ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ ಗ್ಯಾಝೇಟಿಯರ್‌ನಲ್ಲಿ ( 1893 ರಲ್ಲಿ ಪ್ರಕಟವಾದ ) ಈ ದೇವಸ್ಥಾನದ ಪ್ರಸ್ತಾಪವಿದೆ, " ಶಾಲಿವಾಹನ ಶಕೆ 10 ನೇ ಶತಮಾನದಲ್ಲಿ ಚಾಲುಕ್ಯರ ಭುವನೈಕಮಲ್ಲನೆಂಬ ಅರಸು ಭವಾನಿ ಶಂಕರ ದೇಗುಲಕ್ಕೆ ಕೆಲವು ಭೂಮಿಯನ್ನು ಕೊಟ್ಟ ಉಲ್ಲೇಖವಿದೆ".

ದೇವಸ್ಥಾನದ ಬಹುಭಾಗ ಅತಿಕ್ರಮಣವಾಗಿದೆ.ಮಂದಿರದ ಮುಂಭಾಗದಲ್ಲಿ ಆಯಕಟ್ಟಿನ ಕಲ್ಲುಗಳಿಂದ ನಿರ್ಮಿಸಿದ ಪುಷ್ಕರಣಿಯಲ್ಲಿ ಸಾರ್ವಜನಿಕರು ಕಸ ಕಡ್ಡಿ ತ್ಯಾಜ್ಯ ಎಸೆದು ಮಲೀನಗೊಳಿಸಿದಾಗ, ಮಹಾನಗರ ಪಾಲಿಕೆ ಪುಷ್ಕರಣಿಯನ್ನು ಮುಚ್ಚಿದ್ದರಿಂದ ಆದೀಗ ಅತಿಕ್ರಮಣಗೊಂಡಿದೆ. ದೇವಾಲಯಕ್ಕೆ ಇನ್ನೂ ಹೆಚ್ಚಿನ ಅಭಿವೃದ್ಧಿ ಒದಗಿಸಲು ಯತ್ನಸುತ್ತಿದ್ದೇವೆ ಸುರಕ್ಷತೆ ದೃಷ್ಠಿಯಿಂದ ದೇವಾಲಯಕ್ಕೆ ಆವರಣ ಗೋಡೆ ಅಗತ್ಯವಿದೆ. ಬಯಲು ಜಾಗೆಯಲ್ಲಿಯ ಮೂರು ಗುಂಟೆ ಜಮೀನು ಖರೀದಿಸಲಾಗಿದೆ, ದೇವಾಲಯದಲ್ಲಿ ಇನ್ನೂ ಹಲವು ಸುಧಾರಣೆ ಕೆಲಸಗಳು ಸೇರಿದಂತೆ ಇನ್ನು ಹೆಚ್ಚಿನ ಸ್ಥಳ ಖರೀದಿಯ ಅಗತ್ಯವಿದೆ.ಇದಕ್ಕಾಗಿ ಪುರಾತತ್ವ ಇಲಾಖೆಯ ನೆರವು ಹಾಗೂ ದಾನಿಗಳು ಮುಕ್ತ ಮನಸ್ಸಿನಿಂದ ದೇಣಿಗೆ ನೀಡಿದರೆ ಅಂದುಕೊಂಡ ಅಭಿವೃದ್ಧಿ ಕಾರ್ಯಗಳು ಕೈಗೊಡುವದಾಗಿ ಶ್ರೀ ಲಕ್ಷ್ಮೇಶ್ವರ ತಿಳಿಸುತ್ತಾರೆ.

ಧಾರವಾಡ ಸಾಂಸ್ಕೃತಿಕ ಉತ್ಸವವನ್ನು ಪ್ರತಿ ವರ್ಷವು ಹಲವಾರು ವೇದಿಕೆಗಳಲ್ಲಿ ಎರ್ಪಡಿಸುವ ಜಿಲ್ಲಾ ಆಡಳಿತಕ್ಕೆ ಧರ್ಮಸಮನ್ವಯ ದ್ಯೋತಕದ ಈ ಕಲಾದೇಗುಲ ಗಮನಕ್ಕೆ ಬಾರದಿರುವದು ಅಚ್ಚರಿಯ ಸಂಗತಿ. ಪ್ರವಾಸೋದ್ಯಮ ದೃಷ್ಟಿಯಿಂದ ಈ ತಾಣವನ್ನು ಪರಿಚಯಿಸದೇ ಇರುವದು ಐತಿಹಾಸಿಕ ಅವಜ್ಞೆಗೆ ಸಾಕ್ಷಿಯಾಗಿದೆ ಎಂದರೆ ತಪ್ಪಾಗದು. ಪೇಕ್ಷಣೀಯ ಸ್ಥಳ ಎಂಬ ಖ್ಯಾತಿಯಿಂದ ವಂಚಿತವಾಗಿ ಸಾರ್ವಜನಿಕರಿಗೆ ಅಪರಿಚಿತವಾಗಿ ಉಳಿದಿರುವ ಈ ದೇವಾಲಯ ಸಂಶೋಧಕರ ಅಧ್ಯಯನಕ್ಕೆ, ಕಲಾರಸಿಕರ ವೀಕ್ಷಣೆಗೆ ಸಂದರ್ಶಿಸಲೇ ಬೇಕಾದ ಅಪರೂಪದ ದೇವಾಲಯವಾಗಿದೆ. ■

# ರಂಗಭೂಮಿಯ ಫಕೀರ
# ನಟ ಫಕೀರಪ್ಪ ವರವಿ



ವೃತ್ತಿರಂಗಭೂಮಿಯ ಬಹುತೇಕ ಘಟಾನುಘಟಿಗಳು ಮೂಲೆಗುಂಪಾಗಿದ್ದಾರೆ. ಆದರೆ ಸಮಕಾಲೀನ ನಾಟಕ ಚಳವಳಿಗೆ ಸ್ಪಂದಿಸುತ್ತ, ಯುವಕರೊಂದಿಗೆ ಬೆರೆಯುತ್ತ ಇರುವವರು ಸದಾ ಪ್ರಸ್ತುತರಾಗುತ್ತಲೇ ಇರುತ್ತಾರೆ. ಮಾಸ್ಟರ್ ಹಿರಣ್ಣಯ್ಯ, ಆರ್.ಪರಮಶಿವನ್, ಏಣಗಿ ಬಾಳಪ್ಪ, ಲೈಕುದ್ದೀನ್ ಆಲ್ದಾಳ ಕವಿ, ಸುಭದ್ರಮ್ಮ ಮನ್ಸೂರು, ಪ್ರತಿಭಾ ನಾರಾಯಣ್, ಪುಟ್ಟಣ್ಣಯ್ಯ, ಮರಿಯಮ್ಮನಹಳ್ಳಿ ನಾಗರತ್ನಮ್ಮ, ಪಿ.ವಜ್ರಪ್ಪ, ಮಾಲತಿಶ್ರೀ ಮೈಸೂರು, ಶೇಖ್ ಮಾಸ್ತರ್ ಮುಂತಾದವರಲ್ಲಿ ಕೆಲವರು ಈಗಿನ ಕಾಲದ ರಂಗಚಟುವಟಿಕೆಯೊಂದಿಗೆ ನಂಟು ಹೊಂದಿದ್ದಾರೆ. ಮತ್ತೆ ಕೆಲವರಿಗೆ ಸಂಗೀತವೇ ಅವರನ್ನು ಕಾಪಾಡಿದೆ. ಕಳೆದ ಸಾಲಿನ ಕರ್ನಾಟಕ ಸರ್ಕಾರದ ಅತ್ಯುನ್ನತ ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತ ವೃತ್ತಿ ರಂಗಭೂಮಿಯ ಹಿರಿಯ ನಟ– ನಿರ್ದೇಶಕ ಫಕೀರಪ್ಪ ವರವಿ ಇದೇ ಸಾಲಲ್ಲಿ ನಿಲ್ಲುತ್ತಾರೆ. ಎಂದಿಗೂ ಅವರು ಪ್ರಸ್ತುತ. ಇಪ್ಪತ್ನಾಲ್ಕು ತಾಸು ರಂಗ ಚಿಂತನೆ, ಕ್ರಿಯಾಶೀಲತೆಯಲ್ಲಿ ಕಳೆಯುವ ಅವರು ರಂಗದ ಮಧ್ಯದಲ್ಲೇ ಇರುತ್ತಾರೇ ಹೊರತು ನೇಪಥ್ಯಕ್ಕೆ ಸರಿಯಲಾರರು.

▪ ಗುಡಿಹಳ್ಳಿ ನಾಗರಾಜ

ಇವರೊಂದಿಗೆ ಮಾತಿಗೆ ಕುಳಿತರೆ ವೃತ್ತಿ ರಂಗಭೂಮಿಯ ಇತಿಹಾಸವೇ ಬಿಚ್ಚಿಕೊಳ್ಳುತ್ತದೆ. ಇವರೊಬ್ಬ ಅಧ್ಯಯನಶೀಲ, ಚಿಂತನಶೀಲ ನಟ. ನಾಟಕ ರಚಿಸುತ್ತ, ಹೊಸ ಕಲಾವಿದರಿಗೆ ಅಭಿನಯದ ಪಾಠ ಹೇಳಿ, ನಿರ್ದೇಶಿಸುತ್ತ ತಮ್ಮ 74 ರ ಹರೆಯದಲ್ಲೂ ಕ್ರಿಯಾಶೀಲರಾಗಿರುವ ಇವರೇ ಫಕೀರಪ್ಪ ವರವಿ. ಕನ್ನಡ ರಂಗಭೂಮಿಯ ಅತ್ಯುನ್ನತ ಗುಬ್ಬಿ ವೀರಣ್ಣ, ಎಸ್.ಪಿ.ವರದರಾಜ್ (ಡಾ.ರಾಜಕುಮಾರ್ ಸಹೋದರ) ಪ್ರಶಸ್ತಿಗೆ ಭಾಜನರಾಗಿರುವ– ಹಾಲಿ ಬೆಂಗಳೂರಿನಲ್ಲಿ ನೆಲೆಸಿರುವ ಇವರು ಹೆಸರಿಗೆ ತಕ್ಕಂತೆ ಫಕೀರರು. ನಾಟಕದ ಫಕೀರರು!

ಜನಿಸಿದ್ದು ಹಿಂದೂ ಮುಸ್ಲಿಂ ಭಾವೈಕ್ಯದ ಪ್ರತೀಕವಾಗಿರುವ ಶಿರಹಟ್ಟಿ ಫಕೀರೇಶ್ವರನ ಸನ್ನಿಧಾನವಾದ ವರವಿ ಎಂಬ ಗ್ರಾಮದ ಕೃಷಿಕ ಕುಟುಂಬದಲ್ಲಿ(1943). ಎಳವೆಯಲ್ಲೇ ತಂದೆ ಭೀಮಪ್ಪರನ್ನು ಕಳೆದುಕೊಂಡ ಫಕೀರ ತಾಯಿ ಹನುಮವ್ವಳ ಆರೈಕೆಯಲ್ಲಿ ಬೆಳೆದೇ ಬೆಳೆದ. ತುಂಟತನದಿಂದ ಇಡೀ ಊರ ಜನರ ಗಮನ ಸೆಳೆದ. ವರವಿಯಲ್ಲಿ ಜರುಗುವ ಭಜನೆ, ಕೋಲಾಟ, ನಾಟಕ ಎಲ್ಲದರಲ್ಲೂ ಮುಂದು. 'ಚಿತ್ರಾಂಗದಾ' ನಾಟಕದ ನೃತ್ಯವೊಂದರಲ್ಲಿ ಮುಖಕ್ಕೆ ಬಣ್ಣ ಹಚ್ಚಿದ ಫಕೀರ, ಆ ನಾಟಕದ ಮಾಸ್ತರ್ ರೌಡಕುಂದಿ ವೀರಭದ್ರಯ್ಯ ಅವರ ಮನಸ್ಸು ಗೆದ್ದ. ಬಾಲಕನ ಆಸಕ್ತಿ ಗಮನಿಸಿದ ವೀರಭದ್ರಯ್ಯ ರಾಯಚೂರು ಸಮೀಪದ ತಮ್ಮ ಊರಿಗೆ ಕರೆದುಕೊಂಡು ಹೋಗಿ ಒಂದು ವರ್ಷ ಕಾಲ (ರಂಗ)ಸಂಗೀತದ ಪಾಠ ಹೇಳಿಕೊಟ್ಟರು. ತಾಯಿಯ ನೆನಪಾಗಿ ವರವಿಗೆ ವಾಪಸ್ ಬಂದ ಫಕೀರ, ಮತ್ತೆ ವಿದ್ಯಾಭ್ಯಾಸ ಮುಂದುವರಿಸಿದ.

9 ನೇ ತರಗತಿ ಓದುತ್ತಿರುವಾಗ ಶಿರಹಟ್ಟಿಗೆ ದೊಡ್ಡವಾಡ ಸಿದ್ದಯ್ಯನವರ ಶ್ರೀ ಸಮಾಜ ವಿಕಾಸ ನಾಟ್ಯ ಸಂಘ ಕ್ಯಾಂಪ್ ಮಾಡಿತ್ತು. 'ಜಗಜ್ಯೋತಿ ಬಸವೇಶ್ವರ' ನಾಟಕ ಪ್ರದರ್ಶನ ನಡೆದಿತ್ತು. ಆ ನಾಟಕ ಬಾಲಕ ಫಕೀರನ ಮೇಲೆ ಗಾಢ ಪ್ರಭಾವ ಬೀರಿತು. ಬಾಲ ಪಾತ್ರಕ್ಕೆ ಹುಡುಗರು ಬೇಕಿತ್ತಂತೆ. ಯಾವುದೇ ಕಟ್ಟುಪಾಡುಗಳಿಲ್ಲದೆ ಬೆಳೆದ ಫಕೀರ ನಾಟಕ ಕಂಪನಿ ಹಿಂದೆ ಹೊರಟೇಬಿಟ್ಟ! ಮುಂದೆ ಅಣ್ಣಿಗೇರಿ ಕ್ಯಾಂಪಿನಲ್ಲಿ 'ದಸರಾ', 'ದೀಪಾವಳಿ' ನಾಟಕಗಳಲ್ಲಿ ಅವಶ್ಯ ಬಿದ್ದ ಪಾತ್ರಗಳಲ್ಲಿ ಅಭಿನಯಿಸಿದರು. ಕೊಪ್ಪಳ ಕ್ಯಾಂಪಿನಲ್ಲಿ 'ಸ್ತ್ರೀರತ್ನ' ನಾಟಕದಲ್ಲಿ ಒಂದು ಉತ್ತಮ ಪಾತ್ರದ ಅವಕಾಶ ಸಿಕ್ಕಿತು. ಕಂಪನಿ ಹೊಸಪೇಟೆ ಕ್ಯಾಂಪ್ ಮಾಡಿದಾಗ ಕನ್ನಡ ಚಲನಚಿತ್ರ ಕಲಾವಿದರ ಸಂಘದವರು ಮದ್ರಾಸ್‌ನಿಂದ ಬಂದು ನಾಟಕ ಆಡಿದರು. ಸ್ಫುರದ್ರೂಪಿ ಯುವಕ ಫಕೀರಪ್ಪನ ಚುರುಕುತನ ಗಮನಿಸಿದ ಚಿತ್ರನಟಿ ರಮಾದೇವಿ ಮದ್ರಾಸ್‌ಗೆ ನನ್ನೊಂದಿಗೆ ಬಾ. ನಿನಗೆ ಚಿತ್ರರಂಗದಲ್ಲಿ ಅವಕಾಶ ಕೊಡಿಸುತ್ತೇನೆ ಎಂದು ಕರೆದರೆ ಫಕೀರಪ್ಪ ಒಲ್ಲೆನೆಂದ. ನಾಟಕ ಕಂಪನಿ ಮಾಲೀಕ ಸಿದ್ದಯ್ಯಸ್ವಾಮಿ ಅವರ ಪತ್ನಿ ಶಾಂತಮ್ಮ ಅವರ ಮಾತೃವಾತ್ಸಲ್ಯ ಅವರನ್ನು ಕಟ್ಟಿಹಾಕಿಬಿಟ್ಟಿತು.

ನಂತರ ಸಿದ್ದಯ್ಯನವರ ಕಂಪನಿ ಮರಿಯಮ್ಮನಹಳ್ಳಿ, ಹಗರಿ



ಬೊಮ್ಮನಹಳ್ಳಿ, ಹಾವೇರಿ, ಮೈಲಾರ ಕ್ಯಾಂಪ್ ಮುಗಿಸಿ ಹರಿಹರಕ್ಕೆ ಬಂತು. ಅಲ್ಲಿ ಕೆಲದಿನಗಳಲ್ಲೇ ನಾಟಕದ ಟೆಂಟ್ ಬೆಂಕಿಗೆ ಆಹುತಿಯಾಯಿತು. ಹಾಗಾಗಿ ನಂತರ ಫಕೀರಪ್ಪ ಹಿರಣ್ಣಯ್ಯ ಮಿತ್ರಮಂಡಳಿ ಸೇರಿದರು. ಉಡುಪಿ, ಕುಂದಾಪುರ, ತಿಪಟೂರು ಕ್ಯಾಂಪ್ ಮುಗಿದು ವರ್ಷ ಕಳೆದರೂ– ಹಿರಣ್ಣಯ್ಯನವರಾಗಲಿ, ಮ್ಯಾನೇಜರ್ ಮುನಿರಂಗಪ್ಪನವರಾಗಲಿ ಫಕೀರಪ್ಪನ ಪ್ರತಿಭೆ ಗುರುತಿಸಲೇ ಇಲ್ಲ!

**ಹಾಸ್ಯ ಚಕ್ರವರ್ತಿ**

ಬೆಳವಣಿಕೆ ಸಂಗಪ್ಪನವರ ಕಂಪನಿ ಸೇರಿದ ಮೇಲಷ್ಟೆ ಯುವಕ ಫಕೀರಪ್ಪನಿಗೆ ಯಥೇಚ್ಛ ಅವಕಾಶಗಳು ಲಭಿಸುತ್ತ ಹೋದವು. ವಿಜಯಪುರ ಕ್ಯಾಂಪಿನಲ್ಲಿ ಒಮ್ಮೆ ಮಹಾಂತೇಶ ಶಾಸ್ತ್ರಿಗಳ 'ಸತಿ ಪತಿ' ನಾಟಕ ಪ್ರದರ್ಶನ ನಡೆದಿತ್ತು. ಹಾಸ್ಯ ಪಾತ್ರಧಾರಿ ಏಕಾಏಕಿ ಪರಾರಿಯಾಗಿದ್ದರು. ಆ ಹೊತ್ತಿಗೆ ಇತರೆಲ್ಲ ಪಾತ್ರಗಳಲ್ಲಿ ನಟಿಸಿದ್ದ ಫಕೀರಪ್ಪ ಅಂದು ಹಾಸ್ಯ ಪಾತ್ರಕ್ಕೆ ಬಣ್ಣ ಹಚ್ಚಿದರು. ಫಕೀರಪ್ಪನವರ ಪ್ರತಿಭೆಯನ್ನು ಒರೆಗೆ ಹಚ್ಚಿದ ಆ ಗಳಿಗೆ ಅವರ ಜೀವನದ ಪ್ರಮುಖ ತಿರುವಾಗಿ ಪರಿಣಮಿಸಿತು. ಮುಂದೆ ಅವರಿಗೆ ಹಾಸ್ಯ ಪಾತ್ರಗಳೇ ಹೆಚ್ಚಾಗಿ ಲಭಿಸಿ– ಹಾಸ್ಯ ಚಕ್ರವರ್ತಿ ಎಂದು ಬಿರುದಾಂಕಿತ ಆಗುವವರೆಗೂ ಮೇಲಕ್ಕೆ ತಂದಿತು.

ತಮ್ಮ ಶ್ರವ್ಯ ಸಂವೇದನೆಯಲ್ಲಿ ಫಕೀರಪ್ಪನ ಪಾತ್ರದ ಸೊಗಸನ್ನು ಅರ್ಥಮಾಡಿಕೊಂಡ ಗದಗಿನ ಪುಟ್ಟರಾಜ ಗವಾಯಿಗಳು 'ನೀನು ನಾಟಕಗಳ ರಾಜ ಇದ್ದ ಹಾಗೆ' ಎಂದು




ಹೊಗಳಿದರು. ಅಂಧರಿಗೆ, ಅನಾಥರಿಗೆ ಗದಗದ ಪಂಚಾಕ್ಷರ ಗವಾಯಿಗಳು ಸ್ಥಾಪಿಸಿದ ಸಂಗೀತ ಶಾಲೆ ಮುಂದೆ ನಾಟಕಕ್ಕೂ ವಿಸ್ತರಿಸಿಕೊಳ್ಳಲು ಅವರ ಶಿಷ್ಯ ಪುಟ್ಟರಾಜ ಗವಾಯಿಗಳು ಕಾರಣರು. ಹತ್ತಾರು ವಾದ್ಯಗಳನ್ನು ನುಡಿಸಬಲ್ಲ– ಅದರಲ್ಲೂ ಹಾರ್ಮೋನಿಯಂ, ಸಾರಂಗಿ ವಾದನದಲ್ಲಿ ದೇಶದಲ್ಲೇ ದೊಡ್ಡ ಹೆಸರು ಮಾಡಿರುವ ಕವಿ ಪುಟ್ಟರಾಜ ಗವಾಯಿಗಳು ಕನ್ನಡ ರಂಗಭೂಮಿಗೆ ಅದರಲ್ಲೂ ಉತ್ತರ ಕರ್ನಾಟಕದ ವೃತ್ತಿ, ಗ್ರಾಮೀಣ ರಂಗಭೂಮಿಗೆ ನೀಡಿದ ಕೊಡುಗೆ ಅಸಾಧಾರಣವಾದುದು. ಕಲಾವಿದರ ಆರಾಧ್ಯದೈವ ಅವರು. ಉತ್ತರ ಕರ್ನಾಟಕದ ಬಹುತೇಕ ಕಲಾವಿದರ ಮನ–ಮನೆಗಳಲ್ಲಿ ದೇವರ ಚಿತ್ರ ಇರದಿದ್ದರೂ– ಪುಟ್ಟರಾಜ ಗವಾಯಿಗಳ ಚಿತ್ರ ಇರುತ್ತದೆ. ಅಂತಹ ದಂತಕತೆ ಪುಟ್ಟರಾಜ ಗವಾಯಿಗಳು ಹೊಗಳಿದ ಮೇಲೆ ಕೇಳಬೇಕೆ? ಫಕೀರಪ್ಪ ಭೂಮಿಯ ಮೇಲಿರಲಿಲ್ಲ.

**ನಾಟಕ ಕಂಪನಿ ಮಾಲೀಕ**

ಒಬ್ಬ ಅಪ್ಪಟ ನಟನಿಗೆ ಇಷ್ಟೆಲ್ಲ ಪ್ರಖ್ಯಾತಿ ದಕ್ಕಿದ ಕೂಡಲೇ ತಾನೂ ಮಾಲೀಕ ಎನಿಸಿಕೊಳ್ಳಬೇಕು ಎಂಬ ಪಿತ್ಥ

**ನಾಟಕ ಮತ್ತು ಬದುಕು...**

ವರವಿ ಫಕೀರಪ್ಪನವರ ಶ್ರೀ ರಾಘವೇಂದ್ರ ವಿಜಯ ನಾಟ್ಯಸಂಘ 1970 ರ ದಶಕದಲ್ಲಿ ಒಮ್ಮೆ ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಕ್ಯಾಂಪ್ ಮಾಡಿತ್ತು. 'ಚಿನ್ನದ ಗೊಂಬೆ' ನಾಟಕ ಭರ್ಜರಿಯಾಗಿ ನಡೆದಿತ್ತು. ಯಾವ ಪರಿಯಲ್ಲಿ ಪ್ರೇಕ್ಷಕರು ಸೇರಿದ್ದರೆಂದರೆ ನಾಟಕ ಮುಗಿದಾಗ ಉಂಟಾದ ತಳ್ಳಾಟದಲ್ಲಿ ಮಹಿಳೆಯೊಬ್ಬಳು ತನ್ನ ತಾಳಿಯನ್ನೇ ಕಳೆದುಕೊಂಡಳು! ಫಕೀರಪ್ಪನವರಿಗೆ ವಿಷಯ ಗೊತ್ತಾಯಿತು. ಕೂಡಲೇ ಆ ಮಹಿಳೆ ಬಳಿ ಧಾವಿಸಿ ನಡೆದ ಘಟನೆಗೆ ವಿಷಾದ ವ್ಯಕ್ತಪಡಿಸಿ, 'ನಾಳೆ ಮತ್ತೆ ನೀವು ತಪ್ಪದೆ ನಮ್ಮ ನಾಟಕ ನೋಡಲು ಬರಬೇಕು. ನಿಮ್ಮ ಕಡೆಯ ಎಷ್ಟು ಮಂದಿಯನ್ನಾದರೂ ಕರೆತನ್ರಿ...' ಎಂದು ವಿನಂತಿಸಿದರು. ಮಾರನೇ ದಿನ ಆಕೆಯ ಪತಿ, ಬಂಧು ಬಳಗ ಸಾಕಷ್ಟು ಸಂಖ್ಯೆಯಲ್ಲಿ ನಾಟಕ ನೋಡಲು ಬಂದರು. ಅವರನ್ನೆಲ್ಲ ಉಚಿತವಾಗಿ ಒಳಬಿಡಲಾಯಿತು.

ನಾಟಕದ ಶುರುವಿನಲ್ಲಿ ಫಕೀರಪ್ಪನವರು ತಾಳಿ ಕಳೆದುಕೊಂಡ ಮಹಿಳೆ ಮತ್ತು ಆಕೆಯ ಬಳಗವನ್ನೆಲ್ಲ ರಂಗಸ್ಥಳದ ಮೇಲಕ್ಕೆ ಬರುವಂತೆ ಆಹ್ವಾನಿಸಿ, ತಾವು ಹೊಸದಾಗಿ ಕೊಂಡು ತಂದಿದ್ದ ತಾಳಿಯನ್ನು ಆಕೆಯ ಪತಿಯಿಂದ ಮತ್ತೆ ಕಟ್ಟಿಸಿ, ಹಾರ ವಿನಿಮಯ ಮಾಡಿಸಿ ಗೌರವದಿಂದ ಕಳಿಸಿಕೊಟ್ಟರು. ನೆರೆದಿದ್ದ ಪ್ರೇಕ್ಷಕರು ಭಾರಿ ಕರತಾಡನದೊಂದಿಗೆ ಮೆಚ್ಚುಗೆ ಸೂಚಿಸಿದರಷ್ಟೇ ಅಲ್ಲ, ಮಾರನೇ ದಿನದಿಂದ ಟಿಕೆಟ್‌ಗಳನ್ನು ಬ್ಲಾಕ್‌ನಲ್ಲಿ ಮಾರಾಟ ಮಾಡಬೇಕಾಯಿತಂತೆ!

ಫಕೀರಪ್ಪನವರಿಗೆ ನಾಟಕ (ಬರಹ) ಮತ್ತು ಬದುಕು ಬೇರೆಯಲ್ಲ. ಫಕೀರನಂತಹ ಜೀವನಶೈಲಿ ಅವರದು.



### ಉಮರ್‌ಖಯಾಂ ಪ್ರಥಮ ನಾಟಕ

ಕವಿ ಉಮರ್‌ಖಯಾಂ ಕುರಿತ ನಾಟಕ ಕನ್ನಡದಲ್ಲಿ ಇದುವರೆಗೆ ಬಂದಿರಲಿಲ್ಲ. ಆ ಕೊರತೆ ತುಂಬಿದವರು ವರವಿ ಫಕೀರಪ್ಪ. ಸಂತರ, ಅನುಭಾವಿಗಳ ಹಾಗೂ ಇಂತಹ ಭೋಗ ಕವಿಗಳ ಗುಂಗಿನಲ್ಲಿರುವ ಉದ್ಯಮಿ ಶ್ರೀಹರಿ ಖೋಡೆಯವರು, ಉಮರ್ ಖಯಾಂ ರಂಗದ ಮೇಲೆ ಬರಲು ನೆರವು ನೀಡಿದರು. ಡಿವಿಜಿಯವರ ಅನುವಾದಿತ ಕವಿತೆಗಳು ಹಾಗೂ ಅದೇ ಜಾಡಿನಲ್ಲಿ ಖೋಡೆಯವರು ರಚಿಸಿದ ಕವಿತೆಗಳನ್ನು ಆಧಾರವಾಗಿಟ್ಟುಕೊಂಡು ಫಕೀರಪ್ಪ ವರವಿ ಅವರು ಸಂಭಾಷಣೆ ರಚಿಸಿ, ನಿರ್ದೇಶಿಸಿದರು. ಇದನ್ನು ಸಾದರಪಡಿಸಿದವರು ಇಳಕಲ್‌ನ ಸ್ನೇಹರಂಗದ ಕಲಾವಿದರು. ಮಹಾಂತೇಶ ಗಜೇಂದ್ರಗಡ ಅವರ ನೇತೃತ್ವದಲ್ಲಿ ಆ ಭಾಗದ ವೃತ್ತಿ, ಹವ್ಯಾಸಿ ಕಲಾವಿದರು ಹಾಗೂ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ಇತ್ತೀಚೆಗಷ್ಟೆ ಈ ನಾಟಕದ ಪ್ರಥಮ ಪ್ರದರ್ಶನ ನೀಡಿದರು.

ಇದೀಗ ಅಕ್ಬರ್ ಬೀರಬಲ್ ನಾಟಕ ಸಿದ್ಧತೆಯಲ್ಲಿ ತೊಡಗಿದ್ದಾರೆ. ವಿಜಯಪುರ ರಂಗಸೇವಾ ಕಲಾಕೇಂದ್ರದ ಮಹಿಳಾ ನಟಿಯರಿಗೆ 'ಟಿಪ್ಪು ಸುಲ್ತಾನ್' ನಾಟಕ ನಿರ್ದೇಶಿಸಿದ್ದರು. ಇದೀಗ ಕರ್ನಾಟಕ ನಾಟಕ ಅಕಾಡೆಮಿಯ ಪ್ರಥಮ ವೃತ್ತಿ ರಂಗಭೂಮಿ ತರಬೇತಿ ಶಿಬಿರದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಂತಹ ಜೀವಂತಿಕೆಯೇ ಅವರನ್ನು ಸದಾ ಪ್ರಸ್ತುತರಾಗಿಸಿದೆ.

ನೆತ್ತಿಗೇರಿಬಿಡುತ್ತದೆ! ಅಂತೆಯೇ ಶ್ರೀ ಗವಿಸಿದ್ಧೇಶ್ವರ ನಾಟ್ಯಸಂಘ, ವರವಿ ಎಂಬ ನಾಟಕ ಕಂಪನಿ ತೆರೆದರು. ನಂತರ ಅದರ ಹೆಸರನ್ನು ಶ್ರೀ ರಾಘವೇಂದ್ರ ವಿಜಯ ನಾಟ್ಯ ಸಂಘ ಎಂದು ಬದಲಾಯಿಸಿದರು. ಕಂಪನಿ ತನ್ನ ಏಳುಬೀಳಿನ ಅಲ್ಪಾಯುಷ್ಯದಲ್ಲೇ ಫಕೀರಪ್ಪನವರನ್ನು ಬರಿಗೈ ಮಾಡಿತು. ನಂತರ ಅವರ ಕಲಾವಿದೆ ಪತ್ನಿ ಲೀಲಾ ವರವಿ ಅದರ ಸೂತ್ರ ಹಿಡಿದರು. ಇಳಕಲ್ ಕ್ಯಾಂಪ್ ಮಾಡಿ 'ರಾಜಾ ವಿಕ್ರಮ' ನಾಟಕದ ಭರ್ಜರಿ ಸಿದ್ಧತೆ ಮಾಡಿದರು. ಭಟ್ಟಿ ಮಹದೇವಪ್ಪ, ಎಚ್.ಟಿ.ಅರಸು, ರಂಗನಾಯಕಮ್ಮ ಮುಂತಾದ ಘಟಾನುಘಟಿಗಳನ್ನು ಕರೆಸಿದರು. ಬದಲಾದ ಕಾಲಮಾನದಲ್ಲಿ ಪೌರಾಣಿಕ ನಾಟಕ ನಡೆಯಲಿಲ್ಲ. ಎಲ್ಲವನ್ನೂ ಕಳೆದುಕೊಂಡ ದಂಪತಿ– ಮಕ್ಕಳಾದ ವೀರಣ್ಣ, ಷಣ್ಮುಖ, ಮಹಾದೇವಿಯೊಂದಿಗೆ 1984 ರಲ್ಲಿ ಬೆಂಗಳೂರು ಸೇರಿದರು.



ಎಲ್ಲೇ ಆಗಲಿ ನಾಟಕದಿಂದಲೇ ಅವರು ತಮ್ಮ ಬದುಕನ್ನು ಕಟ್ಟಿಕೊಳ್ಳಬೇಕಿತ್ತು. ಧೀರೇಂದ್ರ ಗೋಪಾಲ್, ಉಮಾಶ್ರೀ, ಸುಂದರಕೃಷ್ಣ ಅರಸು ಅವರೊಂದಿಗೆ ನಾಟಕಗಳಲ್ಲಿ ಅಭಿನಯಿಸಿದರು. ನಾಟಕಗಳನ್ನು ಪ್ರಾಯೋಜಿಸಿದರು. ಬೆಂಗಳೂರು ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಕ್ಯಾಂಪ್ ಮಾಡಿದ್ದ ಪ್ರೇಮಾ ಗುಳೇದಗುಡ್ಡ ಅವರ ನಾಟಕ ಕಂಪನಿಗೆ 'ಕಿತ್ತೂರು ಚೆನ್ನಮ್ಮ' ನಾಟಕ ನಿರ್ದೇಶಿಸಿ ಅದರಲ್ಲಿ ಮಲ್ಲಪ್ಪಶೆಟ್ಟಿ ಪಾತ್ರದಲ್ಲಿ ಅಭಿನಯಿಸಿದರು. ರಾಜ್ಯದ ಹಲವೆಡೆ ಹೋಗಿ ನಾಟಕ ನಿರ್ದೇಶಿಸಿ ಬಂದರು.

ಯಾವಾಗ ಹರಿಖೋಡೆ ಅವರ ಕಣ್ಣಿಗೆ ಬಿದ್ದರೋ (2004) ಆಗ ಫಕೀರಪ್ಪ ಅವರ ಅರ್ಥದೆಸೆ ಸುಧಾರಿಸಿತು. ಖೋಡೆ ಅವರ ಕಲೆ ಮತ್ತು ಅಧ್ಯಾತ್ಮದ ಖಯಾಲಿಗೆ ಫಕೀರಪ್ಪ ಜೋಡಿಯಾದರು. ಫಕೀರಪ್ಪನವರ 'ಶಿಶುನಾಳ ಶರೀಫ' ನಾಟಕವನ್ನು ಬಹಳ ಹಿಂದೆಯೇ ನೋಡಿ ಪ್ರಭಾವಿತರಾಗಿದ್ದ ಖೋಡೆ ಅವರು, ಅಲ್ಲಮಪ್ರಭು ನಾಟಕವನ್ನು ಫಕೀರಪ್ಪನವರಿಂದ ಬರೆಸಿ ಆಡಿಸಿದರು. ಮೊದಲ ಪ್ರಯೋಗದಲ್ಲಿ ವ್ಯೋಮಮೂರ್ತಿ ಅಲ್ಲಮ, ನಂತರ ಅದು ಶೂನ್ಯ ಸಿಂಹಾಸನಾಧೀಶ್ವರ ಅಲ್ಲಮ ಆಯಿತು. ಮಾಯಾ ಮದಮರ್ಧನ ಅಲ್ಲಮನಾಗಿ ಇಳಕಲ್ ಕಲಾವಿದರಿಂದ ಇತ್ತೀಚೆಗೆ ರಂಗಕ್ಕೆ ಬಂತು.

ಫಕೀರಪ್ಪ ಅವರ ಹೆಸರಿನ ರಂಗಮಂದಿರವನ್ನು ವರವಿಯಲ್ಲಿ ಕಟ್ಟಲಾಗಿದೆ. ತಮ್ಮ ಆತ್ಮಕತೆ ಬರೆದಿಟ್ಟುಕೊಂಡಿದ್ದಾರೆ. ಗವೀಶ ಹಿರೇಮಠರು 'ವೃತ್ತಿ ರಂಗಭೂಮಿಯ ಜೀವಧ್ವನಿ ಫಕೀರಪ್ಪ ವರವಿ' ಎಂಬ ಪುಸ್ತಕ ಬರೆದಿದ್ದಾರೆ. ನಾಟಕ ಅಕಾಡೆಮಿ ಸಾಕ್ಷ್ಯಚಿತ್ರ ತಯಾರಿಸಿದೆ. ವಿಜಯಪುರದಲ್ಲಿ ನಡೆದ ರಾಜ್ಯ ವೃತ್ತಿರಂಗಭೂಮಿ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವ ಅವರಿಗೆ ಸಂದಿತ್ತು. ■





# ಕರ್ನಾಟಕದ ಕಸ್ತೂರ ಬಾ ಯಶೋಧರಮ್ಮ ದಾಸಪ್ಪ

▪ ವೇಮಗಲ್ ಸೋಮಶೇಖರ್

ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿ ಇತಿಹಾಸ ಸೇರಿದ ಅಗ್ರಪಂಕ್ತಿಯ ನಾಯಕಿಯರಲ್ಲಿ ಶ್ರೀಮತಿ ಯಶೋಧರಮ್ಮನವರು ಒಬ್ಬರು. ಇವರ ತ್ಯಾಗಮಯ ಸೇವಾ ಜೀವನ, ಸ್ತ್ರೀ ಶಕ್ತಿ ಸಂವರ್ಧನೆಗಾಗಿ ದುಡಿಯುತ್ತಿರುವ ಎಲ್ಲಾ ಕ್ಷೇತ್ರದ ಸಾತ್ವಿಕ ಮಹಿಳಾ ಚಳುವಳಿಗಾರರಿಗೂ ಚಿರಸ್ಫೂರ್ತಿ ನೀಡುವಂತಹದು. ಗಾಂಧೀಜಿ ದಂಪತಿಗಳ ಅನುಯಾಯಿಯಾಗಿ ಬಡ ಗ್ರಾಮೀಣ ಹೆಣ್ಣು ಮಕ್ಕಳ, ನಿರ್ಗತಿಕ ಮಹಿಳೆಯರ ಅಭ್ಯುದಯಕ್ಕಾಗಿ ಜೀವನ ಪರ್ಯಂತ ತಮ್ಮನ್ನು ತೊಡಗಿಸಿಕೊಂಡು ಅವರ ಶ್ರೇಯಸ್ಸನ್ನು ಕಂಡು ಅವರ ಬದುಕಿಗೆ ನಾಂದಿಯಾದ ಶ್ರೀಮತಿ ಯಶೋಧರಮ್ಮನವರು ನಿಜವಾಗಿ 'ಕರ್ನಾಟಕ ಕಸ್ತೂರ ಬಾ'. ಈ ಸೂಕ್ತವಾದ ಮಾತನ್ನು ಹೇಳಿದವರು ಸುಪ್ರಸಿದ್ಧ ಸಾಹಿತಿ ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರು.

ಯಶೋಧರಮ್ಮನವರು ದಿನಾಂಕ 28–5–1905ರಂದು ಬೆಂಗಳೂರಿನಲ್ಲಿ ಕೆ.ಎಚ್.ರಾಮಯ್ಯ ಮತ್ತು ಶ್ರೀಮತಿ ರೇವಮ್ಮನವರ ಹಿರಿಯ ಮಗಳಾಗಿ ಜನಿಸಿದರು. ರಾಮಯ್ಯನವರು ಎಚ್.ಸಿ. ಚನ್ನಯ್ಯನವರ ಮೂರನೆ ಪುತ್ರ ಎಚ್.ಸಿ. ದಾಸಪ್ಪನವರಿಗೆ ಕೊಟ್ಟು 1926ರಲ್ಲಿ ವಿವಾಹ ಮಾಡಿದರು. ಕ್ರಮೇಣ ಸಮಾಜದಲ್ಲಿ ಉನ್ನತವಾದ ಸ್ಥಾನವನ್ನು ಪಡೆದು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದ ಯಶೋಧರಮ್ಮ ದಾಸಪ್ಪನವರು ಮಹಾತ್ಮಾ ಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ಅವರ ತತ್ವಗಳನ್ನು ತಪ್ಪದೆ ಪಾಲಿಸುತ್ತಿದ್ದ ಇವರು ಗಾಂಧೀಯವರ ಆಶೀರ್ವಾದದಿಂದಲೇ ಸ್ವಾತಂತ್ರ್ಯ ಹೋರಾಟದಲ್ಲಿ ಯಶಸ್ವಿ ಮಹಿಳೆಯಾಗಿ ಹೊರಹೊಮ್ಮಿದರು.

ಕಸ್ತೂರ ಬಾ ಗಾಂಧಿಯವರು ಸೆರೆಮನೆಯಲ್ಲಿ 1944ರ ಫೆಬ್ರವರಿ 22ರಂದು ನಿಧನರಾದರು. ನಂತರವೂ ಕೆಲವು ತಿಂಗಳು ಸೆರೆಮನೆಯಲ್ಲಿ ಬಂಧಿಯಾಗಿದ್ದ ಗಾಂಧಿಯವರನ್ನು 1944ರ ಮೇ 6ರಂದು ಸರ್ಕಾರ ಬಿಡುಗಡೆ ಮಾಡಿತು. ಗಾಂಧಿಯವರ 75ನೇ ಹುಟ್ಟಿದ ಹಬ್ಬದ ದಿನದಂದು ಕಸ್ತೂರ ಬಾ ಅವರ ನೆನಪಿಗಾಗಿ 'ಕಸ್ತೂರ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್' ಅನ್ನು



ಮಹಾತ್ಮರೇ ಸ್ಥಾಪಿಸಿದರು. ಆ ಸಮಯದಲ್ಲಿ ಗಾಂಧಿಯವರ ಆಹ್ವಾನದ ಮೇರೆಗೆ ಯಶೋಧರಮ್ಮನವರು ಪತಿ ದಾಸಪ್ಪನವರೊಡನೆ ಸೇವಾಗ್ರಾಮಕ್ಕೆ ತೆರಳಿ ಸುಮಾರು ಆರು ತಿಂಗಳ ಕಾಲ ಅಲ್ಲಿ ನೆಲೆಸಿ ಮಹಾತ್ಮರ ರಚನಾತ್ಮಕ ಕಾರ್ಯಗಳಲ್ಲಿ ತೊಡಗಲು ಪಣ ತೊಟ್ಟರು. ಗ್ರಾಮೀಣ ಮಹಿಳೆಯರಲ್ಲಿ ಜಾಗೃತಿಯನ್ನುಂಟು ಮಾಡಿ ಅವರಲ್ಲಿ ಸ್ವಾವಲಂಬನೆ, ಧೈರ್ಯ ಮತ್ತು ಅರಿವನ್ನು ಮೂಡಿಸುವ ಜವಾಬ್ದಾರಿಯನ್ನು ಹೊರಲು ಗಾಂಧೀಜಿ ನಿಷ್ಠಾವಂತರಾದ ಮಹಿಳೆಯರನ್ನು, ದೇಶದ ಬಹುತೇಕ ಎಲ್ಲಾ ಪ್ರಾಂತಗಳಿಂದ



ಆರಿಸಿದರು. ಅದರಂತೆ ಯಶೋಧರಮ್ಮ ದಾಸಪ್ಪನವರನ್ನು ಮೈಸೂರು ಶಾಖೆಯ ಪ್ರತಿನಿಧಿಯನ್ನಾಗಿ ಗಾಂಧೀಜಿಯವರೇ ಸ್ವತಃ ನೇಮಿಸಿದರು. ಎಲ್ಲಾ ಪ್ರಾಂತೀಯ ಪ್ರತಿನಿಧಿಗಳಿಗೆ ತರಬೇತಿ ನೀಡಲು ಪೂನಾ ಬಳಿ ಶಿಬಿರವೊಂದನ್ನು ಹಮ್ಮಿಕೊಂಡು ತರಬೇತಿಯನ್ನು ಗಾಂಧಿಯವರೇ ನೀಡಿದರು.

ಯಶೋಧರಮ್ಮನವರನ್ನು ಮೈಸೂರು ಸಂಸ್ಥಾನದ ಕಸ್ತೂರ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ ಪ್ರತಿನಿಧಿಯನ್ನಾಗಿ 1947ರಲ್ಲಿ ಗಾಂಧಿಯವರೇ ನೇಮಿಸಿದರು. ಮೈಸೂರು ಸಂಸ್ಥಾನದ ಶಾಖೆಯ ಕೇಂದ್ರ ಸ್ಥಾನಕ್ಕೆ ಸೂಕ್ತ ಸ್ಥಳದಲ್ಲಿ ನಿವೇಶನ ಪಡೆದು ಒಂದು ಸೇವಾ ಗ್ರಾಮವನ್ನೇ ನಿರ್ಮಾಣ ಮಾಡಬೇಕೆಂದು ಯಶೋಧರಮ್ಮ ಸಂಕಲ್ಪ ಮಾಡಿ ಮಹಾತ್ಮರ ಬಳಿ ಹೋಗಿ ಆಶೀರ್ವಾದ ಮಾಡಿ ಎಂದು ಕೇಳಿದರು. ಆಗ ಗಾಂಧೀಜಿ "ನೀನು ಕಸ್ತೂರ ಬಾ ಗ್ರಾಮದಲ್ಲೇ ಇದ್ದು ಅಲ್ಲೇ ಸಮಾಧಿ ಮಾಡಿಕೊಳ್ಳುವುದಾದರೆ ನನ್ನ ಆಶೀರ್ವಾದ ಇರುತ್ತದೆ" ಎಂದು ಹರಿಸಿದರು. ನಂತರ ಸರ್ಕಾರಕ್ಕೆ ಕಸ್ತೂರ ಬಾ ಗ್ರಾಮವನ್ನು ತೆರೆಯಲು ಅವಕಾಶವಾಗುವ ಹಾಗೆ ಜಮೀನನ್ನು ನೀಡಬೇಕೆಂದು ಅರ್ಜಿ ಸಲ್ಲಿಸಿದರು. ಅದರಂತೆ ಸರ್ಕಾರದಿಂದ ಅರಸೀಕೆರೆ ಸಮೀಪ ಇದ್ದ ಸರ್ಕಾರದ 86 ಎಕರೆ ಪಾಳು ಭೂಮಿಯನ್ನು ಪಡೆದು ಸಾಗುವಳಿ ಮಾಡಿಸಿ ತೆಂಗಿನ ಗಿಡ ಹಾಗೂ ಇತರ ಹಣ್ಣಿನ ಗಿಡಗಳನ್ನು ನೆಡಿಸಿದರು. ತೋಟವನ್ನು ಅಭಿವೃದ್ಧಿಪಡಿಸಿ ಅದರಿಂದ ಬರುವ ಲಾಭವನ್ನು ಬಡ ಜನರ ಉದ್ಧಾರಕ್ಕೆ ಬಳಸಿಕೊಳ್ಳಲು ಯೋಜನೆಗಳನ್ನು ರೂಪಿಸಿದರು. 1948ರಲ್ಲಿ ಗಾಂಧೀಜಿ ತೀರಿಕೊಂಡಾಗ ಅವರ ಚಿತಾಭಸ್ಮವನ್ನು ಅರಸೀಕೆರೆಗೆ ತರಿಸಿಕೊಂಡು ಸಮಾಧಿಯನ್ನು ನಿರ್ಮಿಸಿದರು.



ಅತ್ಯಂತ ಶ್ರದ್ಧೆಯಿಂದ ಗ್ರಾಮೀಣ ಪ್ರದೇಶಗಳ ಸ್ತ್ರೀಯರ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಹೊಸ ಹೊಸ ಕಾರ್ಯ ಯೋಜನೆಗಳನ್ನು ಕೈಗೊಂಡರು. ಅನೇಕ ಮಹಿಳೆಯರಿಗೆ ತರಬೇತಿ ನೀಡಿ ಆರ್ಥಿಕವಾಗಿ ಸ್ವಾವಲಂಬನೆಯಿಂದ ಬದುಕಲು ಪ್ರೇರೇಪಿಸಿದರು. ಇಲ್ಲಿ ತರಬೇತಿ ಪಡೆಯಲು ಬರುವ ಮಹಿಳೆಯರ ಮತ್ತು ಕೆಲಸದವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಕನ್ಯಾ ವಿದ್ಯಾಲಯವನ್ನು ಸ್ಥಾಪಿಸಿ, ಆ ಮೂಲಕ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯವನ್ನು ನೀಡಿದರು.

1962ರ ಸಾರ್ವತ್ರಿಕ ಚುನಾವಣೆಯಲ್ಲಿ ಅರಸೀಕೆರೆ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಜಯಗೊಳಿಸಿದ ಯಶೋಧರಮ್ಮನವರು ಎಸ್.ಆರ್.ಕಂಠಿ ಮತ್ತು ಎಸ್.ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಸಮಾಜಕಲ್ಯಾಣ ಖಾತೆಯ ಮಂತ್ರಿಯಾಗಿ ಪ್ರಥಮ ಮಹಿಳಾಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಮಂತ್ರಿ ಪದವಿಯಿಂದ ಹೊರಬಂದ ಮೇಲೆ ರಾಜ್ಯದ ಹಲವಾರು ಪ್ರದೇಶಗಳಲ್ಲಿ ಕಸ್ತೂರ ಬಾ ಗಾಂಧಿ ಸ್ಮಾರಕ ನಿಧಿಯ ಶಾಖೆಗಳನ್ನು ಸ್ಥಾಪಿಸಿದರು. ನಂತರದಲ್ಲಿ ಇವರ ಎಲ್ಲಾ ಯೋಜನೆಗಳು ಯಶಸ್ವಿಯಾಗಲು ಶ್ರಮಿಸಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ದಲಿತರ ಸರ್ವಾಂಗೀಣ ಅಭ್ಯುದಯ ಸಾಧನೆಗೆ ಗೋಶಾಲೆಯೂ ಸೇರಿದಂತೆ ಹೊಸಹೊಸ ಕಾರ್ಯಕ್ರಮಗಳು ರೂಪಿಸಿ ಕಾರ್ಯಗತ ಮಾಡುವಲ್ಲಿ ಯಶಸ್ವಿಯಾದರು. ಜೀವನದುದ್ದಕ್ಕೂ ಸ್ತ್ರೀಯರ ಬಗ್ಗೆ ಕಾಳಜಿ ಹೊಂದಿದ್ದ ಇವರು ಅವರ ಅಭಿವೃದ್ಧಿಗಾಗಿ ಮಹಿಳಾ ಸದನ, ವನಿತಾ ಸದನ, ಸ್ತ್ರೀ ಶಕ್ತಿ ಯೋಜನೆ, ಮಹಿಳಾ ಕಲ್ಯಾಣ ಕೇಂದ್ರಗಳು ಮತ್ತು ಗೃಹ ವಿಜ್ಞಾನ ತರಬೇತಿ ಕೇಂದ್ರಗಳು, ಸಾಮಾಜಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ  ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿದರು. ಅವುಗಳ ಮುಖಾಂತರ ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸಿ ಸ್ತ್ರೀಯರ ಬದುಕಿಗೆ ನಾಂದಿ ಹಾಡಿದರು. ಭಾರತ ಸರ್ಕಾರ ಯಶೋಧರಮ್ಮನವರ ಸೇವಾ ಪರಂಪರೆಯನ್ನು ಗುರುತಿಸಿ 1973ರಲ್ಲಿ ಪದ್ಮ ಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

1980ರ ಜೂನ್ 30ರಂದು ಯಶೋಧರಮ್ಮನವರು ಅಸುನೀಗಿದರು. ಇವರು ಮಹಾತ್ಮಾ ಗಾಂಧೀಜಿ ನೀಡಿದ್ದ ಮಾತಿನಂತೆ ತಾವು ದುಡಿದು ಕಟ್ಟಿದ ಅರಸೀಕೆರೆಯ ಕಸ್ತೂರ ಬಾ ಗ್ರಾಮದಲ್ಲಿ ತಮ್ಮ ಅಂತ್ಯಕ್ರಿಯೆ ಬಯಸಿದ್ದರು. ಅವರ ಬಯಕೆಯಂತೆ ಎಲ್ಲವೂ ನೆರವೇರಿತು.

ಆನಂತರವೂ ಬದಲಾಗುತ್ತಿರುವ ಸಮಯದೊಂದಿಗೆ ನಡೆಯುತ್ತಿರುವ ಈ ಕೇಂದ್ರದ ಚಟುವಟಿಕೆಗಳು ಯಶೋಧರಮ್ಮನವರ ಅವಶ್ಯಕತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಕೇಂದ್ರೀಕೃತವಾಗಿದೆ.  ಇತ್ತೀಚೆಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಆಶ್ರಯದಲ್ಲಿ ಅರಸೀಕೆರೆಯ ಕಸ್ತೂರ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಆವರಣದಲ್ಲಿ ರಾಜ್ಯ ಮಟ್ಟದ ಸಿಮೆಂಟ್ ಶಿಲ್ಪ ಕಲಾ ಶಿಬಿರ ನಡೆಯಿತು. ಆ ಸಂದರ್ಭದಲ್ಲಿ ಲೋಕಾರ್ಪಣೆಗೊಂಡ ಯಶೋಧರಮ್ಮನವರ ಸಮಾಧಿಯ ಮೇಲೆ ಯಶೋಧರಮ್ಮನವರ ಆಳೆತ್ತರದ ಪ್ರತಿಮೆ, ದಂಡೀಯಾತ್ರೆಯ ಚಿತ್ರಣ ಹಾಗೂ ಗಾಂಧೀಯವರ ಜೀವನ  ಚರಿತ್ರೆಯನ್ನು ಬಿಂಬಿಸುವ ಹಲವು ಶಿಲ್ಪ ಕಲಾಕೃತಿಗಳು ಜೀವಕಳೆಯಿಂದ ತುಂಬಿದೆ. ಮಹಾತ್ಮ ಗಾಂಧೀಜಿಯವರ ಚಿತಾಭಸ್ಮದ



**"ಯಶೋಧರಮ್ಮನವರನ್ನು ಮೈಸೂರು ಸಂಸ್ಥಾನದ ಕಸ್ತೂರ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ ಪ್ರತಿನಿಧಿಯನ್ನಾಗಿ 1947ರಲ್ಲಿ ಗಾಂಧಿಯವರೇ ನೇಮಿಸಿದರು. ಮೈಸೂರು ಸಂಸ್ಥಾನದ ಶಾಖೆಯ ಕೇಂದ್ರ ಸ್ಥಾನಕ್ಕೆ ಸೂಕ್ತ ಸ್ಥಳದಲ್ಲಿ ನಿವೇಶನ ಪಡೆದು ಒಂದು ಸೇವಾ ಗ್ರಾಮವನ್ನೇ ನಿರ್ಮಾಣ ಮಾಡಬೇಕೆಂದು ಯಶೋಧರಮ್ಮ ಸಂಕಲ್ಪ ಮಾಡಿ ಮಹಾತ್ಮರ ಬಳಿ ಹೋಗಿ ಆಶೀರ್ವಾದ ಮಾಡಿ ಎಂದು ಕೇಳಿದರು. ಆಗ ಗಾಂಧೀಜಿ "ನೀನು ಕಸ್ತೂರ ಬಾ ಗ್ರಾಮದಲ್ಲೇ ಇದ್ದು ಅಲ್ಲೇ ಸಮಾಧಿ ಮಾಡಿಕೊಳ್ಳುವುದಾದರೆ ನನ್ನ ಆಶೀರ್ವಾದ ಇರುತ್ತದೆ" ಎಂದು ಹರಿಸಿದರು."**

ಸಮಾಧಿಯನ್ನು ದೆಹಲಿಯಲ್ಲಿನ ರಾಜ್‌ಘಾಟ್ ಮಾದರಿಯಲ್ಲಿ ನಿರ್ಮಿಸಿರುವುದು ಎರಡನೆಯ ರಾಜ್‌ಘಾಟ್ ಎನಿಸಲಿದೆ ಎಂಬುದು ಅರಸೀಕೆರೆಯ ಶಾಸಕರ ಅಭಿಪ್ರಾಯ ಬಹು ಸೂಕ್ತವಾಗಿದೆ.

## ಸಾಮಾಜಿಕ ಅಭಿವೃದ್ಧಿ ಯೋಜನೆಯ ಹರಿಕಾರ

# ನಾಲ್ವಡಿ ಕೃಷ್ಣರಾಜ ಒಡೆಯರು

- ಹೆಚ್. ಹಾಲಪ್ಪ



(ಜೂನ್ 04, 1884 – ಆಗಸ್ಟ್ 03, 1940)

1900 ರಲ್ಲಿ ಏಷ್ಯಾ ಖಂಡದಲ್ಲಿಯೇ ಶಿವನ ಸಮುದ್ರ ಬಳಿ ಕಾವೇರಿ ನದಿಯಿಂದ ಮೊದಲ ಜಲ ವಿದ್ಯುತ್ ಯೋಜನೆಯನ್ನು ಪ್ರಾರಂಭಿಸಿದ ಕೀರ್ತಿ ಇವರದಾಗಿದೆ.1902 ರಲ್ಲಿ ಕೋಲಾರದ ಚಿನ್ನದ ಗಣಿಗೆ ಮತ್ತು 1905 ರಲ್ಲಿ ಬೆಂಗಳೂರು ನಗರಕ್ಕೆ ವಿದ್ಯುತ್ ಬೆಳಗಿಸಿದರಿಂದ ಪ್ರಜೆಗಳು ನಾಲ್ವಡಿ ಕೃಷ್ಣರಾಜ ಒಡೆಯರನ್ನು " ಕೃಷ್ಣರಾಜ ಭೂಪ ಮನೆ ಮನೆಗೆ ದೀಪ " ಎಂದೂ ಕೊಂಡಾಡಿದರು. ಕೃಷಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಲು ಬೇತಮಂಗಲ , ಬೈರಮಂಗಲ , ತಿಪ್ಪಗೊಂಡನಹಳ್ಳಿ ಮುಳಲವಾಡಿ ,ಮುಂತಾದ ಕಡೆ ಕೆರೆಗಳನ್ನು ನಿರ್ಮಿಸಿದರು. 1911 ರಲ್ಲಿ ಆರಂಭವಾದ ಭಾರತದ ಮೊಟ್ಟ ಮೊದಲ ಕೃಷ್ಣರಾಜ ಸಾಗರ ಬೃಹತ್ ಜಲಾಶಯವನ್ನು ಮೈಸೂರು ಸಂಸ್ಥಾನದ ಆಗ ಮುಖ್ಯ ಇಂಜಿನಿಯರ್ ಆಗಿದ್ದ ಸರ್ ಎಂ ವಿಶ್ವೇಶ್ವರಯ್ಯ ನವರು ಯೋಜನೆಯನ್ನು ರೂಪಿಸಿದನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಕಾರ್ಯಗತಗೊಳಿಸಿದರು

ಮೈಸೂರು ಸಂಸ್ಥಾನದ ಒಡೆಯರ್ ರಾಜ ಸಂತತಿಯ 24 ನೇ ರಾಜರು ನಾಲ್ವಡಿ ಕೃಷ್ಣರಾಜ ಒಡೆಯರು. ಇವರ ಆಳ್ವಿಕೆ 1902–1940 ರವರೆಗೆ ನಡೆಯಿತು. ನಾಲ್ವಡಿ ಕೃಷ್ಣರಾಜ ಒಡೆಯರು 1895 ರಲ್ಲಿ ಪಟ್ಟಾಭಿಷೇಕ್ತರಾದರೂ ಸಹ ಕೇವಲ 10 ವರ್ಷದ ಬಾಲಕರಾಗಿದ್ದುದರಿಂದ ಅವರ ತಾಯಿಯವರಾದ ಮಾತೃಶ್ರೀ ಮಹಾರಾಣಿ ವಾಣಿವಿಲಾಸ ಸನ್ನಿಧಾನದವರು ಆಡಳಿತ ನಿರ್ವಹಣೆ ಮಾಡಿದರು. ರಾಜಕುಮಾರನಿಗೆ ಸೂಕ್ತ ವಿದ್ಯಾಭ್ಯಾಸ, ಆಡಳಿತ ತರಬೇತಿಗಳನ್ನು ಮಹಾರಾಣಿಯವರು ತೀವ್ರ ನಿಗಾ ವಹಿಸಿ ನಡೆಸಿದುದರ ಪರಿಣಾಮವಾಗಿ ಮೈಸೂರು ರಾಜ್ಯಕ್ಕೆ ಒಬ್ಬ ಸಮರ್ಥ ಆಡಳಿತಗಾರರಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ದೊರಕಿದರು.

ಮೈಸೂರು ಸಂಸ್ಥಾನದ ವಿವಿಧ ಒಡೆಯರಲ್ಲಿ ಸುಪ್ರಸಿದ್ಧರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯ ಅವಧಿಯ ಒಂದು ನಿರಂತರ ಸಾಮಾಜಿಕ ಪರಿವರ್ತನೆಯ ಕಾಲ ಮತ್ತು ನಿರ್ಣಯಘಟ್ಟ .ಊಳಿಗಮಾನ್ಯ ಮತ್ತು ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಕಾಣಿಸಿಕೊಂಡಿದ್ದ ಜಾತೀಯತೆ, ಅಸ್ಪೃಶ್ಯತೆ, ವರ್ಣಭೇದ ಮೊದಲಾದ ಅನಿಷ್ಟ ಪಿಡುಗುಗಳು ಭಾರತೀಯ ಸಾಂಸ್ಕೃತಿಕ ಪರಂಪರೆಗೆ ದೋಷಯುಕ್ತ ಅಂಶಗಳಾಗಿ ದಲಿತ ಮತ್ತು ಹಿಂದುಳಿದ ವರ್ಗದವರ ಬದುಕು ಅಸಹನೀಯವಾಗಿತ್ತು. ಇಂತಹ ಸಂದರ್ಭದಲ್ಲಿ ಭಾರತದಾದ್ಯಂತ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಸಾಮಾಜಿಕ ಸುಧಾರಣೆ ಚಳವಳಿಯ ನಾಯಕತ್ವವನ್ನು ಮಹಾತ್ಮ ಜ್ಯೋತಿ ಬಾ ಫುಲೆ, ಡಾ॥ ಟಿ. ಎಂ. ನಾಯರ್, ಪಿ.ಟಿ. ಚೆಟ್ಟಿಯಾರ್, ರಾಮಾಸ್ವಾಮಿ ಮೊದಲಿಯಾರ್, ಪೆರಿಯಾರ್ ರಾಮಾಸ್ವಾಮಿ ನಾಯ್ಕರ, ನಾರಾಯಣ ಗುರು, ಶಾಹು ಮಹಾರಾಜ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಮೊದಲಾದವರು ವಹಿಸಿದರು. ಕೊಲ್ಲಾಪುರದ ಛತ್ರಪತಿ ಶಾಹೂ ಮಹಾರಾಜರು ಮತ್ತು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಇವರಿಬ್ಬರೂ ದಲಿತ ಮತ್ತು ಹಿಂದುಳಿದ ವರ್ಗದವರ ಕತ್ತಲ ಬದುಕಿನಲ್ಲಿ ಸೂರ್ಯ ಚಂದ್ರರಂತೆ ಇಂದಿಗೂ ಬೆಳಗುತ್ತಿದ್ದಾರೆ .

ಬ್ರಾಹ್ಮಣೇತರ ಸಮೂಹಗಳಾದ ವೀರಶೈವರು, ಒಕ್ಕಲಿಗರಿಗೆ ಹಾಗೂ ಮುಸ್ಲಿಂರು ಒಟ್ಟಾಗಿ ಮದ್ರಾಸಿನ ಜಸ್ಟೀಸ್ ಪಾರ್ಟಿಯ ಮಾದರಿಯಲ್ಲಿ ಮೈಸೂರಿನಲ್ಲಿ ಪ್ರಜಾಮಿತ್ರ ಮಂಡಳಿ ಎಂಬ ರಾಜಕೀಯ ಪಕ್ಷವನ್ನು ಹುಟ್ಟು ಹಾಕಿದರು .ಪ್ರಜಾಮಿತ್ರ ಮಂಡಳಿಯ ನೇತಾರುಗಳಾದ ಸಿ.ಆರ್. ರೆಡ್ಡಿ , ಎಂ.ಬಸವಯ್ಯ , ಎಚ್ ಚೆನ್ನಯ್ಯ ಮುಂತಾದವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಭೇಟಿಯಾಗಿ ಸರ್ಕಾರಿ ನೌಕರಿಗಳಲ್ಲಿ ,ಸ್ಥಳೀಯ ಸಂಸ್ಥೆಗಳಲ್ಲಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಕಲ್ಪಿಸಬೇಕೆಂದು ಬೇಡಿಕೆಯಿಟ್ಟರು. ಇದನ್ನು ಪರಿಶೀಲಿಸಲು ಮೈಸೂರು ಸಂಸ್ಥಾನದ ಅಂದಿನ ಮುಖ್ಯ ನ್ಯಾಯಾಧೀಶರಾಗಿದ್ದ ಸರ್ ಲೆಸ್ಲಿ ಮಿಲ್ಲರ್ ರವರ ಅಧ್ಯಕ್ಷತೆಯಲ್ಲಿ 1917 ರಲ್ಲಿ ಮಿಲ್ಲರ್ ಸಮಿತಿಯನ್ನು ನೇಮಕ ಮಾಡಿದರು. ಈ ಸಮಿತಿಯ ವರದಿಯಂತೆ ಮೇಲ್ಮಟ್ಟದ ಹುದ್ದೆಗಳಲ್ಲಿ ಶೇ 50 ರಷ್ಟು ಹಾಗೂ ಕೆಳಮಟ್ಟದ ಹುದ್ದೆಗಳಲ್ಲಿ ಶೇ2/3 ರಷ್ಟು ಮೀಸಲಿಡಬೇಕು ಹಾಗೂ ಇದನ್ನು 7 ವರ್ಷದೊಳಗೆ ಸಾಧಿಸಬೇಕು ಎಂದು ನಿಗದಿಪಡಿಸಿತು . 1921 ರಲ್ಲಿ ಮಿಲ್ಲರ್ ಸಮಿತಿ ಜಾರಿಗೆ ಬಂದಾಗ ಆಗ ಮೈಸೂರಿನ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯನವರು ಬುದ್ಧಿವಂತಿಕೆ ಮತ್ತು ಸಾಮರ್ಥ್ಯವನ್ನು ಕಡೆಗಣಿಸಿದರೆ ಅಭಿವೃದ್ಧಿ ಕಾರ್ಯಗಳಿಗೆ ಕುಂದಾಟಾಗುತ್ತದೆ, ವ್ಯಕ್ತಿಯ ಸಾಮರ್ಥ್ಯ ಅರ್ಹತೆಯ ಮೇಲೆ ಸರ್ಕಾರಿ ಉದ್ಯೋಗ ನೀಡಬಾರದು ಎಂದು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. " ಬ್ರಾಹ್ಮಣೇತರರಲ್ಲಿ ಅರ್ಹತೆ ಮತ್ತು ಸಾಮರ್ಥ್ಯ ಇಲ್ಲದಿದ್ದರೆ ನಾನು ಅವರಲ್ಲಿ ಅರ್ಹತೆ ಮತ್ತು ಸಾಮರ್ಥ್ಯವನ್ನು ಬೆಳೆಸುತ್ತೇನೆ " ಎಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಘೋಷಿಸಿದರು.

ಇವರು ರಾಜಮನೆತನದಿಂದ ಬಂದವರಾಗಿದ್ದರೂ ಕೂಡ ಜನರು ಆಡಳಿತದಲ್ಲಿ ಪಾಲ್ಗೊಳ್ಳುವ ದೃಷ್ಟಿಯಿಂದ ಜನಪ್ರತಿನಿಧಿ ಸಭೆಯನ್ನು ಜಾರಿಗೆ ತಂದರು. ಇದಕ್ಕೆ 1923 ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಪ್ರಜಾತಂತ್ರದ ದೃಷ್ಟಿಯಿಂದ ಭಾರತದಲ್ಲಿಯೇ ಮಾದರಿಯಾದ ಸಂಸ್ಥೆಯಾಗಿ ಕಾರ್ಯನಿರ್ವಹಿಸಿತು. ಸ್ಥಳೀಯ ಸಂಸ್ಥೆಗಳನ್ನು ರಚಿಸುವ ಮೂಲಕ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟರು.

ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ರಾಜರ್ಷಿಗಳೆಂದು ಹೆಸರು ಪಡೆದ ನಾಲ್ವಡಿ ಕೃಷ್ಣರಾಜ ಒಡೆಯರು ಅತ್ಯಂತ ಶ್ರೇಷ್ಠ ಸ್ಥಾನವನ್ನು ಪಡೆದಿದ್ದಾರೆ. ಇವರ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ರಾಮರಾಜ್ಯದ ಸ್ಥಾಪನೆಯನ್ನು ಮಾಡಿದ ಕೀರ್ತಿ ಇವರದೆಂದು ಗಾಂಧೀಜಿಯವರು ಹೇಳಿದ್ದಾರೆ. ರಾಜ್ಯದ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಲು ಕೃಷಿ, ಉದ್ದಿಮೆ ಮತ್ತು ಗೃಹ ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸಲು ಅನೇಕ ವಿನೂತನ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತಂದರು. " ದುಡಿದು ಗಳಿಸಬೇಕು, ಗಳಿಸಿ ಉಳಿಸಬೇಕು " ಎಂಬುದು ಇವರ ಆರ್ಥಿಕ ನೀತಿಯ ಉದ್ದೇಶವಾಗಿತ್ತು .ಪ್ರಜೆಗಳ ಸ್ವಸ್ಥತೆ ಮತ್ತು ಆರೋಗ್ಯದ ರಕ್ಷಣೆ ಮಾಡಲು ಬೆಂಗಳೂರಿನಲ್ಲಿ ವಾಣಿವಿಲಾಸ ಹೆರಿಗೆ ಆಸ್ಪತ್ರೆ , ಕೃಷ್ಣರಾಜಮ್ಮಣಿ ಕ್ಷಯರೋಗದ ಆಸ್ಪತ್ರೆ ಮತ್ತು ಶಿವಮೊಗ್ಗದಲ್ಲಿ ಮೆಗಾನ್ ಆಸ್ಪತ್ರೆಗಳನ್ನು ಆರಂಭಿಸಿದರು.

1900 ರಲ್ಲಿ ಏಷ್ಯಾ ಖಂಡದಲ್ಲಿಯೇ ಶಿವನ ಸಮುದ್ರ ಬಳಿ ಕಾವೇರಿ ನದಿಯಿಂದ ಮೊದಲ ಜಲ ವಿದ್ಯುತ್ ಯೋಜನೆಯನ್ನು ಪ್ರಾರಂಭಿಸಿದ ಕೀರ್ತಿ ಇವರದಾಗಿದೆ.1902 ರಲ್ಲಿ ಕೋಲಾರದ ಚಿನ್ನದ ಗಣಿಗೆ ಮತ್ತು 1905 ರಲ್ಲಿ ಬೆಂಗಳೂರು ನಗರಕ್ಕೆ ವಿದ್ಯುತ್ ಬೆಳಗಿಸಿದರಿಂದ ಪ್ರಜೆಗಳು ನಾಲ್ವಡಿ ಕೃಷ್ಣರಾಜ ಒಡೆಯರನ್ನು " ಕೃಷ್ಣರಾಜ ಭೂಪ ಮನೆ ಮನೆಗೆ ದೀಪ " ಎಂದೂ ಕೊಂಡಾಡಿದರು. ಕೃಷಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಲು ಬೇತಮಂಗಲ, ಬೈರಮಂಗಲ, ತಿಪ್ಪಗೊಂಡನಹಳ್ಳಿ ಮುಳಲವಾಡಿ, ಮುಂತಾದ ಕಡೆ ಕೆರೆಗಳನ್ನು ನಿರ್ಮಿಸಿದರು. 1911 ರಲ್ಲಿ ಆರಂಭವಾದ ಭಾರತದ ಮೊಟ್ಟ ಮೊದಲ ಕೃಷ್ಣರಾಜ ಸಾಗರ ಬೃಹತ್ ಜಲಾಶಯವನ್ನು ಮೈಸೂರು ಸಂಸ್ಥಾನದ ಆಗ ಮುಖ್ಯ ಇಂಜಿನಿಯರ್ ಆಗಿದ್ದ ಸರ್ ಎಂ ವಿಶ್ವೇಶ್ವರಯ್ಯ ನವರು ರೂಪಿಸಿದ ಯೋಜನೆಯನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಕಾರ್ಯಗತಗೊಳಿಸಿದರು.

1908 ರಲ್ಲಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಸಂಪೂರ್ಣ ಪ್ರವೇಶ ಶುಲ್ಕ ವಿನಾಯತಿ ನೀಡುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ವಿನೂತನ ಬದಲಾವಣೆ ತಂದರು. 1912 ರಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗ ಮತ್ತು 1915 ರಲ್ಲಿ ಮಾಧ್ಯಮಿಕ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಸೌಲಭ್ಯವನ್ನು ವಿಸ್ತರಿಸಿದರು. ದಲಿತ ವಿದ್ಯಾರ್ಥಿಗಳಿಗಾಗಿ ವಸತಿ ಶಾಲೆಗಳನ್ನು ತೆರೆದರು. ಇವರು ಸ್ಥಾಪಿಸಿದ ಶಾಲೆಗೆ ಬರುವ ಬಡ ಮಕ್ಕಳಿಗೆ 4 ರೂ ಪ್ರೋತ್ಸಾಹ ಧನ ನೀಡಲಾಗುತ್ತಿತ್ತು . ಮುಸ್ಲಿಂ ಹೆಣ್ಣು ಮಕ್ಕಳಿಗಾಗಿ ಜನಾನ ಸಂಸ್ಥೆಗಳನ್ನು ಆರಂಭಿಸಿದರು. ಮಹಾರಾಣಿ ರವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಅಂಗವಿಕಲರ ಶಿಕ್ಷಣಕ್ಕಾಗಿ ಪಾಠ ಶಾಲೆಗಳನ್ನು ಆರಂಭಿಸಿದರು. ಉನ್ನತ ವ್ಯಾಸಂಗಕ್ಕಾಗಿ ವಿದ್ಯಾರ್ಥಿ ವೇತನವನ್ನು ಜಾರಿಗೆ ತಂದರು. 1916 ರಲ್ಲಿ ಮೈಸೂರಿನಲ್ಲಿ ವಿಶ್ವವಿದ್ಯಾನಿಲಯ ಮತ್ತು ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪನೆ ಮಾಡಿದರು. ಇವರ ಆಳ್ವಿಕೆಯಲ್ಲಿ ಜಾರಿ ಮಾಡಿದ ಸಾಮಾಜಿಕ ಕಾನೂನುಗಳೆಂದರೆ.

**1905 ರಲ್ಲಿ ಸಹಕಾರಿ ಕಾರ್ಮಿಕ ಪರಿಹಾರ ಕಾಯ್ದೆ**
**1909 ರಲ್ಲಿ ದೇವದಾಸಿ ಪದ್ಧತಿ ನಿಷೇಧ**
**1910 ರಲ್ಲಿ ಬಸವಿ ಪದ್ಧತಿ ಮತ್ತು ಗೆಜ್ಜೆಪೂಜೆ ಪದ್ಧತಿ ನಿರ್ಮೂಲನೆ**
**1913 ರಲ್ಲಿ ಮೈಸೂರು ಗ್ರಾಮ ನ್ಯಾಯಾಲಯದ ಕಾಯ್ದೆ**
**1914 ರಲ್ಲಿ ಶಾಲಾ ಪ್ರವೇಶಕ್ಕೆ ಜಾತಿ ಪರಿಗಣನೆಯ ನಿಷೇಧ**
**1918 ರಲ್ಲಿ ಗ್ರಾಮ ಪಂಚಾಯಿತಿ ಕಾಯ್ದೆ**
**1919 ರಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣ ಶುಲ್ಕ ರದ್ಧತಿ**
**1927 ರಲ್ಲಿ ಸ್ತ್ರೀಯರಿಗೆ ಮತದಾನದ ಹಕ್ಕು**
**1936 ರಲ್ಲಿ ವಿಧವೆಯವರಿಗೆ ಮರು ವಿವಾಹ ಮತ್ತು ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ ಜಾರಿ.**

ಗಾಂಧೀಜಿಯವರು ಕಂಡ ರಾಮರಾಜ್ಯ ಕನಸನ್ನು ನನಸು ಮಾಡಿದ ಮಹಾಪುರುಷ ನಾಲ್ವಡಿ ಕೃಷ್ಣರಾಜ ಒಡೆಯರ್ ಆಗಿದ್ದರು. ಇವರು ಸರ್ವ ಜನಾಂಗವನ್ನು ಒಂದೇ ಸೂರಿನಲ್ಲಿ ಬದುಕುವಂತೆ ಮಾಡಿ ಸರ್ವರಿಗೂ ಸಮಾನತೆ ಸಾರಿ ದಲಿತರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಮೀಸಲಾತಿ ಕಲ್ಪಿಸುವುದು ಸೇರಿದಂತೆ ಎಲ್ಲರಿಗೂ ಎಲ್ಲಾ ವರ್ಗದ ಜನರಿಗೂ ವಿದ್ಯಾಭ್ಯಾಸ ಹಾಗೂ ಉದ್ಯೋಗವನ್ನು ಕಲ್ಪಿಸಿದರು.

ಬ್ರಿಟಿಷ್ ಸರ್ಕಾರ ಇವರಿಗೆ. "ಗ್ರ್ಯಾಂಡ್ ಕಮಾಂಡರ್ ಆಫ್ ದಿ ಇಂಡಿಯನ್ ಎಂಪಾಯರ್ ಎಂಬ ಬಿರುದನ್ನು ನೀಡಿ ಗೌರವಿಸಿತು. ಇತಿಹಾಸಕಾರರು ನಾಲ್ವಡಿ ರವರನ್ನು "ಸಾಮಾಜಿಕ ಕಾನೂನುಗಳ ಹರಿಕಾರ" ಎಂದಿದ್ದಾರೆ. ಸಭ್ಯ ಸುಸಂಸ್ಕೃತವಾದ ಇವರ ವ್ಯಕ್ತಿತ್ವವು ಆಕರ್ಷಕ ಆದರ್ಶ ಪ್ರಾಯವಾಗಿತ್ತು. ಸ್ವಧರ್ಮವೆಂದು ನಿಷ್ಠರಾಗಿದ್ದು ಪರ ಧರ್ಮಗಳನ್ನು ಗೌರವಿಸುತ್ತಿದ್ದರು. ಧರ್ಮನಿಷ್ಠರಾಗಿದ್ದ ಇವರು ಪ್ರಗತಿಪರ ಮತ್ತು ವೈಜ್ಞಾನಿಕ ಮನೋಭಾವ ಉಳ್ಳವರಾಗಿದ್ದರು. ಗಾಂಧೀಜಿಯವರು ಇವರನ್ನು " ರಾಜರ್ಷಿ " ಎಂದು ಕರೆದಿರುವುದು ಸಮರ್ಥನೀಯವಾಗಿದೆ.




# ಕೃಷಿಕರನ್ನು ಉತ್ತೇಜಿಸುವ 'ಕೃಷಿ ಜಯಂತಿ'

**ಸರಕಾರ, ಸ್ವಯಂ ಸೇವಾ ಸಂಸ್ಥೆಗಳು ಪ್ರಾದೇಶಿಕ ಬೆಳೆಗಳನ್ನು ಪರಿಚಯಿಸಲು, ಕೃಷಿಕರನ್ನು ಗೌರವಿಸಲು, ಕೃಷಿ ಚಟುವಟಿಕೆಗಳಿಗೆ ಅವಶ್ಯವಾಗಿ ಬೇಕಾಗುವ ಯಂತ್ರಗಳನ್ನು ಮತ್ತು ಹೊಸದಾಗಿ ಆವಿಷ್ಕಾರವಾದ ಕೃಷಿ ಉಪಕರಣಗಳನ್ನು ರೈತರಿಗೆ ಪರಿಚಯಿಸಲು ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಅಲ್ಲಲ್ಲಿ 'ಕೃಷಿ ಮೇಳ'ವನ್ನು ಸಂಘಟಿಸುವುದನ್ನು ನೋಡಿದ್ದೇವೆ. ಆದರೇ, ಧಾರ್ಮಿಕ ಕೈಂಕರ್ಯದಲ್ಲಿ ತೊಡಗಿಕೊಂಡ ಮಠವೊಂದು ಕೃಷಿ ಕ್ಷೇತ್ರವನ್ನು ಬಲ ಪಡಿಸುವ ಸಲುವಾಗಿ ಕೃಷಿ ಮೇಳವನ್ನು ವೈಭವದಿಂದ ಆಚರಿಸುವುದನ್ನು ಎಲ್ಲಿಯಾದರೂ ನೋಡಿದ್ದೀರಾ? ಅಂಥದೊಂದು ಹೊಸ ಭಾಷ್ಯೆಯನ್ನು ಬರೆದು, ಕೃಷಿಕರನ್ನು ಹುರಿದುಂಬಿಸುತ್ತಿದೆ ಸ್ವರ್ಣವಲ್ಲೀ ಮಠ.**

▪ *ಗಣಪತಿ ಹಾಸ್ಪುರ*

ನಿಜ, ಶಿರಸಿ ತಾಲೂಕಿನ ಸೋಂದಾ–ಸ್ವರ್ಣವಲ್ಲೀ ಮಠವು ಧಾರ್ಮಿಕ ಕ್ಷೇತ್ರಕ್ಕೆ ಹೆಸರಾಗಿರುವ ಪವಿತ್ರ ಸ್ಥಳ. ಈ ಮಠದ ಸ್ವಾಮಿಗಳು ಧರ್ಮದ ಜಾಗೃತಿಯೊಂದಿಗೆ ಸಂಪ್ರದಾಯದ ಆಚರಣೆಗಳನ್ನು.... ಪೂಜಾ ವಿಧಿ–ವಿಧಾನಗಳನ್ನು ಶ್ರದ್ಧಾ, ಭಕ್ತಿ, ಶಿಸ್ತಿನಿಂದ ನಡೆಸಿಕೊಂಡು ಬರುತ್ತಿದ್ದಾರೆ. "ಹಸಿರು ಸ್ವಾಮೀಜಿ" ಎಂದೇ ಹೆಸರಾದ ಇಲ್ಲಿನ ಶ್ರೀಗಳು ಮಠದ ಕಾರ್ಯ ವ್ಯಾಪ್ತಿಯನ್ನು ಸೀಮಿತ ಕ್ಷೇತ್ರಕ್ಕೆ ಇರುವಂತೆ ನಿರ್ಬಂಧ ಹಾಕಿಕೊಳ್ಳದೇ; ಅನೇಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿದ್ದಾರೆ. ಅಂದರೇ – ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ, ಶೈಕ್ಷಣಿಕ ಕ್ಷೇತ್ರ, ಪರಿಸರ ಹೋರಾಟ, ವ್ಯಸನ ಮುಕ್ತ ಸಮಾಜದ ನಿರ್ಮಾಣ, ಧ್ಯಾನ–ಯೋಗ ಶಿಬಿರಗಳನ್ನು ಸಹಾ ನಡೆಸುತ್ತಿದೆ. ಈ ಮಠವು ರಾಜರಾಜೇಶ್ವರಿ ಸಂಸ್ಕೃತ ಮಹಾ ವಿದ್ಯಾಲಯ ಸೇರಿದಂತೆ ಹದಿನೆಂಟು ಅಂಗ ಸಂಸ್ಥೆಗಳನ್ನು ನಡೆಸುತ್ತಿರುವುದು ವಿಶೇಷ. "ಭಗವದ್ಗೀತಾ ಅಭಿಯಾನ"ವನ್ನು ನಾಡಿನಾದ್ಯಂತ ಅಚ್ಚುಕಟ್ಟಾಗಿ ಸಂಘಟಿಸುವುದರ ಮೂಲಕ ಈ ಮಠದ ಕೀರ್ತಿ ಇನ್ನಷ್ಟು ಎತ್ತರಕ್ಕೆ ಏರಿದೆ.

ಉತ್ತರ ಕನ್ನಡ ಜಿಲ್ಲೆಯ ಹದಿನಾರು ಸೀಮೆ ಹಾಗೂ ರಾಜ್ಯ – ದೇಶದ ವಿವಿಧ ಭಾಗಗಳಲ್ಲಿ ಅಪಾರ ಭಕ್ತಾಧಿಗಳನ್ನು ಹೊಂದಿರುವ ಈ ಹೊನ್ನಳ್ಳಿ ಮಠವು 2008 ರಿಂದ ಲಕ್ಷ್ಮೀ ನೃಸಿಂಹ ಜಯಂತಿಯ ಶುಭ ಸಂದರ್ಭದಲ್ಲಿಯೇ "ಕೃಷಿ ಜಯಂತಿ"ಯನ್ನು ವೈಭವದಿಂದ ಸಂಘಟಿಸುವುದರ ಮೂಲಕ ಕೃಷಿಕರ ಪ್ರೀತಿಗೂ ಭಾಜನವಾಗಿದೆ.

ಕೃಷಿ ಕ್ಷೇತ್ರವಿಂದು ವಿಭಿನ್ನ ಸಮಸ್ಯೆಗಳಿಂದ ಬಳಲುತ್ತಿದೆ. ಕೃಷಿಕರು ಶ್ರದ್ಧೆಯಿಂದ ಬೆಳೆದ ಬೆಳೆಗಳಿಗೆ ಸ್ಥಿರವಾದ ಬೆಲೆ ಇಲ್ಲದಿರುವುದು, ಕೃಷಿ ಭೂಮಿಯನ್ನು ಅಭಿವೃದ್ಧಿ ಪಡಿಸಲು ಕಾರ್ಮಿಕರು ಸಿಗದೇ ಇರುವುದು, ಕೂಲಿಯ ದರ ಗಗನದತ್ತ ಮುಖ ಮಾಡಿರುವುದು, ಸಕಾಲದಲ್ಲಿ ಮಳೆ ಆಗದೇ ಇರುವುದು, ಅಕಾಲಿಕವಾಗಿ ಮಳೆ ಸುರಿದು ಬೆಳೆ ನಷ್ಟವಾಗುವುದು, ಕಾಡು ಪ್ರಾಣಿಗಳ ದಾಳಿ ತಪ್ಪಿಸಲು ಅಸಾಧ್ಯವಾಗಿರುವುದು, ರೋಗಗಳನ್ನು ನಿಯಂತ್ರಿಸಲು ಆಗದೇ ಇರುವುದು.... ಹೀಗೆ ಹಲವಾರು ಸಮಸ್ಯೆಗಳಿವೆ. ಇದು ಆ ಕ್ಷೇತ್ರದ ತುಂಬಾ ಕಾಡ್ಗಿಚ್ಚಿನಂತೆ ಹಬ್ಬಿಕೊಂಡಿರುವುದರಿಂದ, ಕೃಷಿಯನ್ನೇ ಉಸಿರಾಗಿಸಿಕೊಂಡವರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಮಾತ್ರವಲ್ಲ, ಮಲೆನಾಡಿನ ಪ್ರದೇಶದಲ್ಲಿಯೂ ಸಹಾ ಕೃಷಿಕರ ಮಕ್ಕಳು ಮಹಾನಗರದತ್ತ ತೆರಳಿ, ಅಲ್ಲಿಯೇ ನೆಲೆಯೂರಲು ಆರಂಭಿಸಿದ್ದಾರೆ. ಇದರ ಪರಿಣಾಮ ಹಳ್ಳಿಗಳು 'ವೃದ್ಧಾಶ್ರಮ'ವಾಗಿ ಪರಿವರ್ತನೆಗೊಂಡು, ಕೃಷಿಗೆ ಯೋಗ್ಯವಾದ ಭೂಮಿಗಳು ಪಾಳು ಬೀಳುತ್ತಿರುವುದು ನಿಜಕ್ಕೂ ಬೇಸರದ ಸಂಗತಿ.

ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಬೇಕು, ಕೃಷಿಕರು ಉತ್ಸಾಹದಿಂದ ಬೆಳೆಗಳನ್ನು ಬೆಳೆಯಲು ಪ್ರೇರಣೆ ನೀಡಬೇಕು, ಫಸಲಿನ ಗುಣಮಟ್ಟ ಕಾಯ್ದುಕೊಳ್ಳಲು ಹಾಗೂ ಮಾರುಕಟ್ಟೆಯ ವ್ಯವಸ್ಥೆಯ ಬಗ್ಗೆ ತಜ್ಞರಿಂದ ಮಾರ್ಗದರ್ಶನ ನೀಡಬೇಕು. ಫಸಲಿನ ಗುಣಮಟ್ಟ ಕಾಯ್ದುಕೊಳ್ಳಲು ಹಾಗೂ ಮಾರುಕಟ್ಟೆಯ ವ್ಯವಸ್ಥೆಯ ಬಗ್ಗೆ ತಜ್ಞರಿಂದ ಮಾರ್ಗದರ್ಶನ ನೀಡಬೇಕು. ಈಗಿನ ಯುವ ಜನಾಂಗ ಕೃಷಿಯಿಂದ ವಿಮುಖ ಆಗುತ್ತಿರುವುದನ್ನು ತಡೆದು, ಅವರನ್ನು ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಳ್ಳಲು ಧೈರ್ಯ ತುಂಬಿ ಉತ್ತೇಜಿಸಬೇಕು, ಕೃಷಿ ಮಹಿಳೆಯನ್ನು ಗೌರವಿಸಬೇಕು. ಅವಿಭಕ್ತ ಕುಟುಂಬವನ್ನು ಅಭಿನಂದಿಸಬೇಕು.... ಹೀಗೆ ಹಲವಾರು ಉದ್ದೇಶಗಳನ್ನು ಇಟ್ಟುಕೊಂಡು ಕಳೆದ ಎಂಟು ವರ್ಷದಿಂದ 'ಕೃಷಿ ಜಯಂತಿ'ಯನ್ನು ಸ್ವರ್ಣವಲ್ಲೀ ಮಠದಲ್ಲಿ ಹಮ್ಮಿಕೊಂಡು ಬರಲಾಗುತ್ತಿದೆ. ಮಠದ ಅಂಗ ಸಂಸ್ಥೆಯಾದ 'ಕೃಷಿ ಪ್ರತಿಷ್ಠಾನ'ದ ಸಾರಥ್ಯದಲ್ಲಿ ನಡೆಯುವ ಈ ಕೃಷಿ ಜಯಂತಿ ಪ್ರತಿ ವರುಷವೂ ಒಂದೊಂದು ವಿಷಯದ ಮೇಲೆ ನಡೆಯುತ್ತಿದೆ. 2016ರ ಕೃಷಿ ಜಯಂತಿ "ಕೃಷಿ ಪೂರಕ ಗೃಹೋದ್ಯಮ ಮೇಳ" ಎಂಬ ವಿಷಯದ ಮೇಲೆ ಆಯೋಜಿಸಲ್ಪಟ್ಟಿತ್ತು.

**ಮೇಳದ ವಿಶೇಷ:** ಸ್ವರ್ಣವಲ್ಲೀ ಮಠದ ಕಾರ್ಯವ್ಯಾಪ್ತಿಯ ಗ್ರಾಮೀಣ ಪ್ರದೇಶದಲ್ಲಿ ನೆಲೆಯೂರಿ ವಿವಿಧ ಉತ್ಪನ್ನಗಳನ್ನು ಸಿದ್ಧಪಡಿಸಿ ಸ್ವ–ಉದ್ಯೋಗವನ್ನು ಕೈಗೊಂಡಿರುವ ಅನೇಕ ಕುಟುಂಬಗಳಿವೆ. ಅದರಲ್ಲಿಯೇ ವಿಶಿಷ್ಟ ಸಾಧನೆ ಮಾಡಿದವರು ಹಲವರು ಇದ್ದಾರೆ. ಅಂಥಹ ಸಾಧಕರನ್ನು ಗೌರವಿಸಬೇಕು. ಅವರು ಸಿದ್ಧಪಡಿಸಿದ ಉತ್ಪನ್ನಗಳನ್ನು, ಅದರ ವಿಶೇಷತೆಗಳನ್ನು ಇತರರಿಗೆ ಪರಿಚಯಿಸಬೇಕು ಎನ್ನುವ ಉದ್ದೇಶದಿಂದಲೇ ಈ ವರ್ಷದ ಕೃಷಿ ಜಯಂತಿಯಲ್ಲಿ "ಗೃಹ ಉದ್ಯಮ"ಕ್ಕೆ ಆದ್ಯತೆ ನೀಡಲಾಗಿತ್ತು.

ಭಟ್ಕಳ, ಸಿದ್ದಾಪುರ, ಯಲ್ಲಾಪುರ.... ತಾಲೂಕಿನ ವಿವಿಧ ಭಾಗಗಳಿಂದ ಹಾಗೂ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಗೃಹ ಉದ್ಯಮಿಗಳು ಸಹಾ ಮಳಿಗೆಗಳನ್ನು ಹಾಕಿದ್ದರು. ಸಿಂಹ ಶಕ್ತಿ ಒಕ್ಕೂಟದವರು ಅಶ್ವಗಂಧಿ ಪೌಡರ್, ನೆಲ್ಲಿ ಪೌಡರ್, ವಾಟೆ ಹುಳಿ, ಜ್ಯೇಷ್ಠ ಮಧು ಪೌಡರ್, ಮಧುನಾಶಿನಿ, ಕಾವೆ ಹಿಟ್ಟು, ಕೋಕಂ ಪೌಡರ್, ಹರಿದ್ರಾ ಕುಂಕುಮ, ಸಾವಯವ ಒಂದೆಲಗ.... ಇತ್ಯಾದಿ, ದೀಪಾ ಹೋಂ ಪ್ರಾಡಕ್ಟ್‌ನವರ ಜೇನು ತುಪ್ಪ, ಬಾಳೆಕಾಯಿ ಹಪ್ಪಳ.... ಕೋಟೆಗದ್ದೆಯ ಸ್ನೇಹಿತರ ಎರೆಹುಳು ಗೊಬ್ಬರ, ತ್ಯಾಗಲಿಯ ಓಂ ನಮಃ ಶಿವಾಯಾ ಇಂಡಸ್ಟ್ರೀಸ್‌ನವರು ಅಡಿಕೆ ಹಾಳೆಯಿಂದ ಸಿದ್ಧಪಡಿಸಿದ ವಿಭಿನ್ನ ಆಕಾರದ ಪ್ಲೇಟ್‌ಗಳು.... ಸೋಂದಾದ ಮೈತ್ರಿ ಹೋಂ ಪ್ರಾಡಕ್ಟ್‌ನವರ ಸುಖೇಳಿ, ಅರಿಶಿಣದ ಪೌಡರ್, ಅನ್ನಪೂರ್ಣ ಹೋಂ ಪ್ರಾಡಕ್ಟ್‌ನವರ ಹಲಸಿನ ಕಾಯಿ ಹಪ್ಪಳ, ಬಾಳೆಕಾಯಿ ಚಿಪ್ಸ್, ಹಲಸಿನ ಕಾಯಿ ಚಿಪ್ಸ್, ಅಕ್ಕಿ ಹಪ್ಪಳ.... ಇತ್ಯಾದಿ

ಅಲ್ಲದೇ ಉಮ್ಮಚ್ಗಿಯ ವಿಜಯಾ ಸ್ಟೋರ್ಸ್‌ನವರ ಕಷಾಯದ ಪುಡಿ, ಡ್ರೈಯ್ ಮಸಾಲಾ, ಪಲಾವ್ ಮಸಾಲಾ, ಉಪ್ಪಿನಕಾಯಿ ಮಸಾಲಾ, ಚಟ್ನಿ ಪುಡಿ, ರಸಂ ಪುಡಿ.... ಬೇಂಗ್ರಯ ಉಸಿರಾ ಇಂಡಸ್ಟ್ರೀಯವರ ಲಾವಂಚಾದಿಂದ ಸಿದ್ಧಪಡಿಸಿದ ಹಲವಾರು ಬಗೆಯ ಐಟಂಗಳು ಆಕರ್ಷಣೀಯ ಕೇಂದ್ರವಾಗಿತ್ತು. ಉಡುಪಿಯ ಶ್ರೀಕೃಷ್ಣ ಹೋಂ ಪ್ರಾಡಕ್ಟ್‌ನವರ ಚಟ್ನಿ ಪುಡಿ, ರಸಂ ಪೌಡರ್, ಸಾಂಬಾರ ಪುಡಿ, ಪುಳಿಯೋಗರೆ, ಬೀಟ್‌ರೂಟ್ ಹಪ್ಪಳ, ಬಾಳೆಕಾಯಿ ಹಪ್ಪಳ.... ಇತ್ಯಾದಿ. ಬಿಲ್ಲಂಪದವು (ದಕ್ಷಿಣ ಕನ್ನಡ) ನಾರಾಯಣ ಭಟ್ ಅವರು ಐವತ್ತಕ್ಕೂ ಹೆಚ್ಚು ಬಗೆಯ ಸಾವಯವ ಕೃಷಿ ಬೀಜದ ಪ್ರದರ್ಶನ ಮತ್ತು ಮಾರಾಟವು ಇತ್ತು. ತಟ್ಟಿಕೈಯ ಗಣಪತಿ ಹೆಗಡೆ ಅವರು ನೇಯ್ದಿರುವ ಕೂಗಲ ಬಳ್ಳಿಯ ವಿವಿಧ ಅಲಂಕಾರಿಕ ವಸ್ತುಗಳು, ಪುಸ್ತಕಗಳ ಪ್ರದರ್ಶನ, ಕೃಷಿಯ ಯಂತ್ರೋಪಕರಣಗಳು, ತೋಟಗಾರಿಕೆ ಇಲಾಖೆ, ಪಶು ಇಲಾಖೆ, ಅರಣ್ಯ ಇಲಾಖೆಗಳ ಮಳಿಗೆಯೂ ಇದ್ದವು. ಎಲ್ಲಕ್ಕಿಂತ ಹೆಚ್ಚಾಗಿ ಬೆಳ್ಳಿಕೇರಿಯ ಜಿ. ಪಿ. ಎಂಟರ್ ಪ್ರೈಸಸ್‌ನವರು ಸಿದ್ಧಪಡಿಸಿದ 'ಸಾತ್ವಿಕ್ ರಾಗಿ ಪಾಪ್'ನ ಉತ್ಪನ್ನ ಕುತೂಹಲ ಹುಟ್ಟಿಸಿದ್ದು ಸುಳ್ಳಲ್ಲ. ಈ ಉತ್ಪನ್ನವನ್ನು ರಾಗಿ, ಬಾದಾಮಿ ಮತ್ತು ಹಾಲನ್ನು ಸೇರಿಸಿ ತಯಾರಿಸಲಾಗಿದೆ. ಜೊತೆಗೆ ಒಂದೆಲಗವನ್ನು ಸೇರಿಸಿದ್ದರಿಂದ ಮಕ್ಕಳ ಮೆದುಳಿನ ಬೆಳವಣಿಗೆಗೆ ಮತ್ತು ಜ್ಞಾಪಕ ಶಕ್ತಿ ವೃದ್ಧಿಗೂ ಸಹಕಾರಿ. ಈ ಪದಾರ್ಥ ನೈಸರ್ಗಿಕ ವಿಧಾನದಿಂದ ಕೃತಕ ಬಣ್ಣವನ್ನು ಸೇರಿಸದೇ ಉತ್ಪಾದಿಸಲ್ಪಟ್ಟಿದೆ.

ಗೃಹ ಉದ್ಯಮದಲ್ಲಿ ಸಕ್ರಿಯವಾಗಿ ತೊಡಗಿಕೊಂಡ ಸಾಧಕರೇ ತಮ್ಮ ಉತ್ಪನ್ನದ ಮಳಿಗೆಗಳನ್ನು ತೆರೆದಿದ್ದರು. ಅದರ ವಿಶೇಷತೆಯನ್ನು, ಮಾರುಕಟ್ಟೆಯ ವ್ಯವಸ್ಥೆ, ಪ್ಯಾಕಿಂಗ್ ಮಾಡುವ ಕೌಶಲ್ಯವನ್ನು ಆಸಕ್ತರಿಗೆ ತಿಳಿಸುತ್ತಿದ್ದರು. ಸ್ವರ್ಣವಲ್ಲೀಯ ಕೃಷಿ ಪ್ರತಿಷ್ಠಾನವು ಗೃಹ ಉದ್ಯಮದಲ್ಲಿ ಸಾಧನೆ ಮಾಡುತ್ತಿರುವ 25 ಸಾಧಕರನ್ನು ಗುರುತಿಸಿ ಈ ಕೃಷಿ ಜಯಂತಿಯಲ್ಲಿ ಸನ್ಮಾನಿಸಿರುವುದು ಶ್ಲಾಘನೀಯ.

**ಕೃಷಿ ಸಾಧಕರಿಗೆ ಪ್ರಶಸ್ತಿ:** ಸ್ವರ್ಣವಲ್ಲೀಯ ಮಠವು ನೈಸರ್ಗಿಕವಾಗಿ ಬೆಳೆದಿರುವ ಕಾಡು, ಅಡಿಕೆ ತೋಟದ ಮಧ್ಯೆಯೇ ನೆಲೆಯೂರಿದೆ. ಮಠದ ಕಾರ್ಯವ್ಯಾಪ್ತಿಯ 16 ಸೀಮೆಯ ಭಕ್ತಾದಿಗಳು ಕೃಷಿಯನ್ನೇ ಉಸಿರಾಗಿಸಿಕೊಂಡು, ಬದುಕನ್ನು ಕಟ್ಟಿಕೊಂಡವರು. ಮಠದ ಶಿಷ್ಯಂದಿರು ಕೃಷಿ ಭೂಮಿಯಲ್ಲಿ ದುಡಿದು, ತಮ್ಮ ಸಂಸಾರದ ನೌಕೆಯನ್ನು ಸಾಗಿಸುವುದರ ಜೊತೆಗೆ ಸ್ವರ್ಣವಲ್ಲೀ ಮಠದ ಜೀರ್ಣೋದ್ಧಾರ, ಧಾರ್ಮಿಕ ಆಚರಣೆಗೆಲ್ಲಾ ತಮ್ಮ ಕೈಯಲ್ಲಾದ ತನು–ಮನ–ಧನ ಸಹಾಯವನ್ನು ನೀಡುತ್ತಾ ಬಂದವರು. ಒಂದರ್ಥದಲ್ಲಿ ಈ ಮಠವನ್ನು 'ಕೃಷಿಕರ ಮಠ'ವೆಂದರೂ ಅತಿಶಯೋಕ್ತಿ ಆಗಲಾರದು. ಈ ಕೃಷಿಕರ ಮಠವು ಕೃಷಿಕರ ಏಳಿಗೆಗೆ, ಸಹಾಯಕ ಆಗುವಂತಹ ಕಾರ್ಯಕ್ರಮಗಳನ್ನು ಆಗಾಗ ಹಮ್ಮಿಕೊಳ್ಳುತ್ತಿದೆ. ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡು ವಿಶಿಷ್ಟ ಸಾಧನೆ ಮಾಡುತ್ತಿರುವ ಕೃಷಿಕರಿಗೆ ವಿವಿಧ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಿದೆ. 2016ರ ಕೃಷಿ ಜಯಂತಿಯಲ್ಲಿ ಬನವಾಸಿಯ ಹನುಮಂತಪ್ಪ ಮಡ್ಲೂರ್ ಅವರಿಗೆ "ಕೃಷಿ ಕಂಠೀರವ" ಪ್ರಶಸ್ತಿ; ಕಲ್ಲೇಮನೆಯ ದಾಕ್ಷಾಯಣಿ ಭಟ್ ಅವರಿಗೆ "ಉತ್ತಮ ಕೃಷಿ ಮಹಿಳೆ" ಪ್ರಶಸ್ತಿ; ಶಿರಗುಣಿಯ ವೆಂಕಟ್ರಮಣ ಭಟ್ ಕುಟುಂಬಕ್ಕೆ "ಉತ್ತಮ ಕೃಷಿ ಕುಟುಂಬ" ಪ್ರಶಸ್ತಿ; ತಟ್ಟಿಕೈನ ಗಣಪತಿ ಹೆಗಡೆ ಅವರಿಗೆ "ಕೃಷಿ ಕುಶಲಕರ್ಮಿ" ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಅಲ್ಲದೇ ಸೊಪ್ಪಿನ ಬೆಟ್ಟವನ್ನು ಉತ್ತಮವಾಗಿ ನಿರ್ವಹಣೆ ಮಾಡುತ್ತಿರುವ ಕೃಷಿಕರನ್ನು ಸಹಾ ಈ ಸಂದರ್ಭದಲ್ಲಿ ಪುರಸ್ಕರಿಸಲಾಯಿತು.

**ತಿಳುವಳಿಕೆಗಾಗಿ ಗೋಷ್ಠಿ:** ಈ ಕೃಷಿ ಜಯಂತಿಯಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವ ಕೃಷಿಕರಿಗೆ ವಿವಿಧ ವಿಷಯಗಳ ಮಾಹಿತಿಗಳು ಸಿಗಲಿ ಎಂಬ ಕಾರಣಕ್ಕಾಗಿ 'ಗೋಷ್ಠಿ'ಗಳನ್ನು ಸಹಾ ಹಮ್ಮಿಕೊಳ್ಳಲಾಗಿತ್ತು. "ಆಹಾರೋತ್ಪನ್ನ ಮಾರುಕಟ್ಟೆಯ ಅವಕಾಶಗಳು ಮತ್ತು ಸವಾಲುಗಳು", "ಮಲೆನಾಡಿನ ತರಕಾರಿ ಹಾಗೂ ಹಣ್ಣುಗಳ ಸಂಸ್ಕರಣೆಯಲ್ಲಿ ಅವಕಾಶಗಳು", "ವಸ್ತುಗಳ ಗುಣಮಟ್ಟ ಮತ್ತು ಪ್ಯಾಕಿಂಗ್", "ಸಂರಕ್ಷಿತ ಬೇಸಾಯ ಪದ್ಧತಿ", "ಕೃಷಿಕರ ಸುರಕ್ಷತೆ ಕುರಿತು ವಿಶೇಷ ವಿಮಾ ಯೋಜನೆಗಳು".... ಈ ವಿಷಯಗಳ ಕುರಿತು ವಿವಿಧ ಸಂಪನ್ಮೂಲ ವ್ಯಕ್ತಿಗಳು ಸಮಗ್ರ ಮಾಹಿತಿಗಳನ್ನು ನೀಡಿದರು. ಈ ಗೋಷ್ಠಿಯೂ ಕೃಷಿಕರಲ್ಲಿ ಗೃಹ ಉದ್ಯಮದಾರರಲ್ಲಿ ಅಡಕವಾಗಿದ್ದ ಸಂಶಯ, ಸಮಸ್ಯೆಗಳಿಗೆಲ್ಲ ಪರಿಹಾರ ದೊರಕಿಸಿಕೊಳ್ಳಲು ಸಹಕಾರಿ ಆಯಿತೆಂದರೂ ತಪ್ಪಾಗಲಾರದು.

**ಪ್ರೋತ್ಸಾಹಕ್ಕೆ ವಿವಿಧ ಸ್ಪರ್ಧೆಗಳು:** ಸ್ವರ್ಣವಲ್ಲೀ ಮಠದ ಕೃಷಿ ಜಯಂತಿಯೂ ಕೇವಲ ಒಂದು ವರ್ಗಕ್ಕಾಗಲೀ, ಒಂದು ಜಾತಿ, ಪಂಗಡದ ಜನರನ್ನು ಸಂತೃಪ್ತಿ ಪಡಿಸಲು ಸೀಮಿತವಾಗಿಲ್ಲ. ಇಲ್ಲಿ ಬಾಲವಾಡಿ ಮಕ್ಕಳಿಂದ ಹಿಡಿದು ವೃದ್ಧಾಪ್ಯದ ಜನರವರೆಗೆ ಪುರುಷರು, ಮಹಿಳೆಯರು ಉತ್ಸಾಹದಿಂದ ಭಾಗವಹಿಸಲು ಅನುಕೂಲವನ್ನು ಕಲ್ಪಿಸುವ ಸಲುವಾಗಿಯೇ ಅನೇಕ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ. ಅವರವರ ವಯಸ್ಸಿನ ಆಧಾರದ ಮೇಲೆ, ಅವರಿಗಿಷ್ಟವಾದ ಸ್ಪರ್ಧೆಯಲ್ಲಿ ಸ್ವ–ಇಚ್ಛೆಯಿಂದ ಭಾಗವಹಿಸಬಹುದು. ■



# ಶಾಂತಿ ಮತ್ತು ಸಾಮರಸ್ಯಕ್ಕಾಗಿ ಯೋಗ

▪ ಮಂಜುನಾಥ ಉಲುವತ್ತಿ ಶೆಟ್ಟರ್

**'ಶಾಂತಿ ಮತ್ತು ಸಾಮರಸ್ಯಕ್ಕಾಗಿ ಯೋಗ'** ಎಂಬ ಧ್ಯೇಯ ವಾಕ್ಯದಡಿ ಕಳೆದ ವರ್ಷ ರಾಜಪಥ್‌ನ ವಿಶಾಲ ಜಾಗದಲ್ಲಿ 35 ನಿಮಿಷ ನಡೆದ ಯೋಗ ದಿನಾಚರಣೆಯಲ್ಲಿ ವಿವಿಧ ಕ್ಷೇತ್ರದ ಗಣ್ಯರು, ವಿದ್ಯಾರ್ಥಿಗಳು, ಯೋಧರು ಅಧಿಕಾರಿಗಳು ಅಂದಾಜು 35 ಸಾವಿರಕ್ಕಿಂತ ಹೆಚ್ಚಿನ ಜನರು ಪಾಲ್ಗೊಂಡು ಜಗತ್ತಿಗೆ ಯೋಗದ ಸಾರ್ಥಕತೆಯ ಮಹತ್ವವನ್ನು ತಿಳಿಸಿದ್ದಾಯಿತು.

ನಿಸರ್ಗದತ್ತವಾಗಿಯೇ ಉತ್ತಮ ಆರೋಗ್ಯವನ್ನು ವೃದ್ಧಿಸಿಕೊಳ್ಳಬೇಕಾದರೆ ದೈಹಿಕವಾಗಿ ಶ್ರಮಪಡದ ಹೊರತು ಯೋಗದ ಸಾರ್ಥಕತೆಯ ಅರಿವು ಯಾರಿಗೂ ಬರಲಾರದು. ದೇಹವು ದಣಿದಾಗ ಬಿಡುಗಡೆಯಾಗುವ ದ್ರವ ರೂಪದ ತ್ಯಾಜ್ಯವನ್ನು ಬೆವರಿನ ರೂಪದಲ್ಲಿ ಹೊರಹಾಕಿ ನಂತರದಲ್ಲಿ ದೇಹವು ವಿಶ್ರಮಿಕೊಳ್ಳುತ್ತಿರುವ ಸಮಯದಲ್ಲಿ ಪ್ರಾಣಾಯಾಮ ಪೂರೈಸಿ ನಂತರದಲ್ಲಿ ಧ್ಯಾನಕ್ಕೆ ಕುಳಿತುಕೊಂಡರೆ ಅದರ ಸಾರ್ಥಕತೆ ಅನುಭವಿಸಿದ ಸಾಧಕರ ಅರಿವಿಗೆ ಮಾತ್ರ ಬರುತ್ತದೆ. ಯಾರಿಗೆ ಸುಸ್ಥಿರ,ಉತ್ತಮ ಆರೋಗ್ಯ ಬೇಕೋ ಅವರು





ಯೋಗದಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಆರೋಗ್ಯವನ್ನು ವೃದ್ಧಿಸಿಕೊಂಡು ಸದಾಕಾಲ ಲವಲವಿಕೆಯಿಂದ ಹಸನ್ಮುಖರಾಗಿರಬಹುದು. ಈ ಯೋಗ ದಿನದ ಆಚರಣೆಯು ಕೇವಲ ಈ ಒಂದು ದಿನಕ್ಕಷ್ಟೇ ಸೀಮಿತವಾಗದೇ ನಿರಂತರವಾಗಿ ಬದುಕಿನಲ್ಲಿ ಮುಂದುವರಿದುಕೊಂಡು ಹೋದರೆ ಆರೋಗ್ಯವು ವೃದ್ಧಿಸುವುದರ ಜೊತೆಗೆ ಮಾನಸಿಕ ಒತ್ತಡ ಕಡಿಮೆಯಾಗಿ ನೆಮ್ಮದಿ ಇಮ್ಮಡಿಗೊಳ್ಳುತ್ತದೆ. ಇದನ್ನು ಅಳವಡಿಸಿಕೊಳ್ಳಲು ಬೃಹತ್ ಪ್ರಮಾಣದ ಬಂಡವಾಳ ತೊಡಗಿಸುವ ಅಗತ್ಯವಿಲ್ಲ ಕ್ರಮಬದ್ಧವಾಗಿ ಪ್ರಶಾಂತ ಸ್ಥಳದಲ್ಲಿ ಏಕಾಂತವಾಗಿ ಅನುಸರಿಸುವ ಮನಸ್ಸೊಂದಿದ್ದರೆ ಸಾಕಷ್ಟೇ.

'ವಿಶ್ವ ಯೋಗ ದಿವಸ' ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಸಂದ ಜಯವೆಂಬುದು ಈಗ ಜಗಜ್ಜಾಹಿರ. ಪ್ರಧಾನಿಯವರ ಮೊದಲ ಪ್ರಯತ್ನದಲ್ಲಿಯೇ ವಿಶ್ವಸಂಸ್ಥೆ ಇದಕ್ಕೆ ಅನುಮೋದನೆ ನೀಡಿರುವುದು ಭಾರತೀಯರೆಲ್ಲರಿಗೂ ಮತ್ತು ಭಾರತೀಯ ಸಂಸ್ಕೃತಿಗೆ ಸಂದ ಜಯವೇ. ಈಗ ನಮ್ಮ ಯೋಗ ಪದ್ಧತಿಗೆ ಜಾಗತಿಕ ಮಾನ್ಯತೆ ಸಿಕ್ಕಿದೆ. ಇಡೀ ವಿಶ್ವಮಟ್ಟದಲ್ಲಿ ಇದನ್ನು ವಿಜೃಂಭಣೆಯಿಂದ ಪ್ರದರ್ಶಿಸಬೇಕೆಂಬುದು ಪ್ರಧಾನಿಗಳ ಆಶಯ.

ಯೋಗ ಎಂದರೇನು? ಎಂಬ ಪ್ರಶ್ನೆಗೆ ಉತ್ತರ ಕಂಡುಕೊಂಡು ನಂತರ ಮುಂದೆ ಸಾಗೋಣ. ಯೋಗ ಎಂದರೆ ನಮ್ಮ ಉಸಿರಾಟದ ಮೇಲೆ ನಿಯಂತ್ರಣ ಸಾಧಿಸುವುದು ಎಂದರ್ಥ. ಯೋಗವೆಂಬುದು ಕೇವಲ ದೈಹಿಕ ಆರೋಗ್ಯವನ್ನು ನೀಡದೇ ಮಾನಸಿಕವಾಗಿ ಚೈತನ್ಯವನ್ನು ವೃದ್ಧಿಸಿಕೊಳ್ಳಲು ಅನುವು ಮಾಡಿಕೊಡುವುದಾಗಿದೆ. ಇದರ ಮೂಲಕ ಆರೋಗ್ಯವನ್ನು ವೃದ್ಧಿಸಿಕೊಳ್ಳುವ ಇಚ್ಛೆಯಿರುವವರು ಅವರ ಒಳಿತಿಗನುಸಾರ ಮಾಡುವುದು ಬಿಡುವುದು ಅವರ ವೈಯುಕ್ತಿಕ ಇಚ್ಛೆಯೇ ಹೊರತು ಬೇರೆಯೇನೂ ಅಲ್ಲ. ಇದಕ್ಕಾಗಿ ಪ್ರತಿ ಜೂನ್ 21ರಂದು ವಿಶ್ವ ಯೋಗ ದಿವಸ ಆಚರಣೆಯ ನಿಗದಿಯು ಭಾರತೀಯರೆಲ್ಲರೂ ಸಂತಸಪಡಬೇಕಾದ ಸಂಗತಿ.

ಭೂಮಿಯ ಮೇಲೆ ಮಾನವ ಜನ್ಮತಳೆದ ನಂತರ ಸದಾ ಒಳ್ಳೆಯದನ್ನೇ ಮಾಡುತ್ತಾ ಆನಂದದ ತನ್ನ ಅವಧಿಯನ್ನು ಮುಗಿಸಲು ಮಾನವ ಜೀವಿಯೇ ಸೃಷ್ಟಿಸಿಕೊಂಡು ಬಂದ ಬದುಕಿನ ಪರಿ ಇದಾಗಿದೆ. ಸೂರ್ಯನಿಂದ ಘನಭವಿಸಿ ಹೊರಬಂದ ಭೂ–ಭಾಗವೇ ಸೌರ ಮಂಡಲದ ಒಂದು ಉಪಗ್ರಹವಾಗಿದೆ. ಸಾವಿರಾರು ವರ್ಷಗಳ ಪೂರ್ವ ನಿರ್ಮಾಣಗೊಂಡ ನಮ್ಮ ಸೌರಮಂಡಲ ತರಹದ್ದೇ ಆ ಇನ್ನೆರಡು ಸೌರಮಂಡಲಗಳಿರಬಹುದೇ? ಮೂರು ಲೋಕದ ಕಲ್ಪನೆ ಹೊಂದಿದ ಭಾರತೀಯರಿಗೆ ನಾಲ್ಕು ಯುಗಗಳ ಜ್ಞಾನ ಲಭಿಸಿದೆ.





ಕಲಿಯುಗದ 5117ನೇ ವರ್ಷದಲ್ಲಿ ಬದುಕಿನಲ್ಲಿ ಮುನ್ನುಗ್ಗುತ್ತಿರುವ ನಮಗೆ ಈ ಜಗತ್ತಿನ ಅನೇಕ ಸಭ್ಯತೆಗಳ ಕಲ್ಪನೆಯಿದೆ. ಯೋಗದ ಮಾಧ್ಯಮದಿಂದ ಮೂಲಕ ದೇಹದಲ್ಲಿರುವ ಮಾಂಸಖಂಡಗಳಿಗೆ, ಎಲುಬುಗಳಿಗೆ,ಇಡಾ ಪಿಂಗಳಗಳಿಗೆ ಮತ್ತು 72000ಸಾವಿರ ನರಮಂಡಲಗಳಿಗೆ ಯೋಗದ ಮೂಲಕ ಇನ್ನು ಹೆಚ್ಚಿನ ಚೈತನ್ಯ ವೃದ್ಧಿಸಿಕೊಳ್ಳಬಹುದು. ಅದರಿಂದ ನಮ್ಮ ದೇಹ ಮತ್ತು ಮನಸ್ಸಿಗೆ ಉತ್ತಮ ಸಂಸ್ಕಾರ ಕೊಡುತ್ತಾ ಮನಸ್ಸನ್ನು ಆನಂದಮಯವಾಗಿಟ್ಟುಕೊಂಡು ನಮ್ಮ ಬದುಕನ್ನು ಶ್ರಮದಾನದ ಮೂಲಕ 'ಸರ್ವೆಜನಂ ಸುಖೀನೋಭವಂತು' ಎಂಬ ವಾಣಿಯ ಮೂಲಕ ಎಲ್ಲರ ಜೊತೆ ಸುಖಿಗಳಾಗಿ ಬದುಕಲು ಸಹಕಾರಿ ಮತ್ತು ಸಾರ್ಥಕತೆಯಾಗುತ್ತದೆ.

ಪ್ರಪಂಚದ 175ಕ್ಕಿಂತಲೂ ಹೆಚ್ಚಿನ ದೇಶಗಳಲ್ಲಿ ಯೋಗ ದಿನ ಆಚರಿಸಲು ಯಾವುದೇ ಮತ ಬೇಧಗಳನ್ನು ಮರೆತು ಯೋಗವನ್ನು ಅಳವಡಿಸಿಕೊಳ್ಳಲು ಒಪ್ಪಿರುವುದು ಯೋಗದಲ್ಲಿ ಆರೋಗ್ಯದ ವೃದ್ಧಿಗೆ ಉತ್ತಮ ಅಂಶಗಳಿರುವುದು ಮನವರಿಕೆಯಾದ ಮೇಲೆಯೇ. ಈಗ ಆಧುನಿಕವಾಗಿ ಬಹುಮುಂದೆ ಸಾಗಿರುವ ಜಗತ್ತಿನ ಮನುಕುಲವು ಒತ್ತಡದ ಮಧ್ಯೆ ಸಿಕ್ಕಿ ನಲುಗುತ್ತಿದೆ. ಪ್ರತಿ ನಿಮಿಷವೂ ಹರಣ ಮಾಡದೇ ಅದರದೇ ಆದ ಮೌಲ್ಯ ಮತ್ತು ಕೊಳ್ಳುಬಾಕ ಸಂಸ್ಕೃತಿಯನ್ನು ವೃದ್ಧಿಸುವ ಈ ಕಾಲಘಟ್ಟದಲ್ಲಿ ಅದನ್ನು ಪಾಲನೆ ಮಾಡಲು ಅವರವರ ವೈಯುಕ್ತಿಕ ಆರೋಗ್ಯವನ್ನು ವೃದ್ಧಿಸಿಕೊಳ್ಳುವ ಅವಶ್ಯಕತೆಯಿದೆಯೇ ಹೊರತು ಬೇರೆನೂ ಇಲ್ಲ. ಇದಕ್ಕೆ ಒಳ್ಳೆಯ ವಿಚಾರಗಳು ಪ್ರಪಂಚದ ಯಾವುದೇ ದಿಕ್ಕಿನಿಂದ ಹರಿದುಬಂದರೂ, ನಮ್ಮದನ್ನು ಕೊಟ್ಟು ನಂತರದಲ್ಲಿ ಸ್ವೀಕರಿಸುವ ಗುಣಗಳನ್ನು ಬೆಳೆಸಿಕೊಂಡು ನಾವೆಲ್ಲರೂ ಇಂದಿನ ನಮ್ಮ ಕೆಲ ಅನಾರೋಗ್ಯಕರ ಚಿಂತನೆಯಿಂದ ಮುಕ್ತಿ ಪಡೆದು ನಮ್ಮ ದೇಹವನ್ನು ನಾವು ಆರೋಗ್ಯಕರವಾಗಿ ಪರಿವರ್ತಿಸಿಕೊಳ್ಳಲು ಈ ಒಂದು ಕ್ರಮದ ಮೂಲಕ ಪ್ರಯತ್ನಿಸಬಹುದು.

ನಮಗೆ ಯೋಗದಿಂದ ಆಗುವ ಪ್ರಯೋಜನಗಳು ವೈಜ್ಞಾನಿವಾಗಿ, ವೈದ್ಯಕೀಯವಾಗಿ, ನುರಿತ ಆರೋಗ್ಯ ತಜ್ಞರಿಂದ ದೃಢೀಕರಿಸಲ್ಪಟ್ಟಿವೆ. ಈ ಯೋಗದ ಕ್ರಮಬದ್ಧ ಅನುಸರಣೆಯಿಂದ ಭಿನ್ನತೆಯಿಂದ ಕೂಡಿದ ಮನಸ್ಸನ್ನು ಏಕಾಗ್ರತೆ ಕಡೆ ತಿರುಗಿಸುವ ಶಕ್ತಿಯು ಯೋಗಕ್ಕಿದೆ. ಭಾರತೀಯರೆಲ್ಲರ ಉತ್ತಮ ಆರೋಗ್ಯಕ್ಕಾಗಿ ಈ ಯೋಗದ ಮಹತ್ವವನ್ನು ಅರಿಯದ ನಾವು ಗಂಭೀರವಾಗಿ ಅಲೋಚಿಸುವ ಕಾಲ ಇದಾಗಿದೆ. ಇಡೀ ವಿಶ್ವಕ್ಕೆ ಭಾರತವು ನೀಡಿದ ಶ್ರೇಷ್ಠ ಕೊಡುಗೆ ಯೋಗ ಎಂಬುದು ನಿರ್ವಿವಾದ. ಪ್ರಾಣಯಾಮ ಮತ್ತು ಧ್ಯಾನದಿಂದ ನಾವು ಅಪಾರವಾದ, ಮೌಲ್ಯಯುತವಾದ ಆರೋಗ್ಯವೃದ್ಧಿಯನ್ನು ಪಡೆದುಕೊಂಡು ನೆಮ್ಮದಿಯ ಬದುಕು ನಡೆಸಬಹುದು.

ಲಕ್ಷಾಂತರ ರೂಪಾಯಿ ವ್ಯಯ ಮಾಡಿದರೂ ವಾಸಿಯಾಗದಂಥ ಮತ್ತು ದೀರ್ಘಕಾಲ ಕಾಡುವ ಮಾರಕ ರೋಗಗಳಿಂದ ಬಳಲಿ ಈ ಯೋಗ ಪಾಲನೆ ಮಾಡಿದ ಮೇಲೆ ಗುಣವಾಗಿರುವ ಸಾಕಷ್ಟು ಉದಾಹರಣೆಗಳು ನಮ್ಮ ಕಣ್ಣೆದುರಿಗಿವೆ. ಇಂದು ಯೋಗವು ಉಳಿದೆಲ್ಲಾ ಶ್ರೂಶ್ರೂಷೆಗಳಿಗೆ ಪೂರಕವಾಗಿ ತನ್ನ ಕೆಲಸವನ್ನು ನಿರ್ವಹಿಸುತ್ತಿದೆ. ನಾವು ಈ ದೇಶದಲ್ಲಿ ಜಾಗತೀಕರಣವನ್ನು ಒಪ್ಪಿಕೊಂಡ ಮೇಲೆ ನಮ್ಮ ಒತ್ತಡ ನಿರ್ವಹಣೆ,ಉದ್ವೇಗ,ಮನೋಕ್ಲೇಷ ಮತ್ತು ಹತಾಶೆಗಳಿಂದ ಪಾರಾಗಲು ನಮಗೆ ಇರುವ ಸುಲಭ ಮಾರ್ಗವೆಂದರೆ ಯೋಗ.

ಕನ್ನಡದ ವರನಟ ಡಾ//ರಾಜ್‌ಕುಮಾರ್ ಅವರು ಯೋಗದಲ್ಲಿ ಹೆಚ್ಚಿನ ಪರಿಣತಿ ಪಡೆದುಕೊಂಡಿದ್ದರಿಂದಲೇ ಕಾಡುಗಳ್ಳ ವೀರಪ್ಪನ್‌ನಿಂದ ಅಪಹರಣಕ್ಕೊಳಗಾದಾಗ 105ದಿನಗಳ ಕಾಲ ಅರಣ್ಯದಲ್ಲಿ ಅದು ದಟ್ಟಕಾಡಿನಲ್ಲಿ ದಿನಗಳನ್ನು ಕಳೆದು ಆರೋಗ್ಯವಂತರಾಗಿ ಹಿಂತಿರುಗಿ ಬರಲಿಲ್ಲವೇ! ಅದ್ದರಿಂದ ಯಾರಿಗೆ ಇದರಿಂದ ಒಳಿತನ್ನು ಪಡೆಯಲು ಇಚ್ಛೆಯಿದೆಯೋ ಅವರೆಲ್ಲರೂ ಉತ್ತಮ ಸಾಧಕರಾಗಬಹುದು.

ಕೊನೆಯದಾಗಿ, ಈ ಯೋಗದ ಮತ್ತೊಂದು ಮಹತ್ವದ ಶಕ್ತಿಯೆಂದರೆ ನಮ್ಮ ಹರಿದಾಡುವ ಮನಸ್ಸನ್ನು ನಿಯಂತ್ರಣ ಮಾಡುವ ಶಕ್ತಿ ಈ ಯೋಗಕ್ಕಿದೆ ಎಂಬುದನ್ನು ಗಂಭೀರವಾಗಿ ಪರಿಗಣಿಸಲೇಬೇಕು. ಏಕೆಂದರೆ ದೈನಂದಿನಲ್ಲಿ ನಾವು ನಾವಾಡುವ ಮಾತು ನಮ್ಮ ತುಟಿಯಲ್ಲಿರುವವರೆಗೂ ಅದು ನಮ್ಮ ಆಳು, ಅದು ತುಟಿಯಿಂದ ಹೊರ ಹೋದ ಕೂಡಲೇ ನಾವು ಅದರ ಆಳೆಂಬುನ್ನು ಮರೆಯಬಾರದು. ಇದನ್ನು ನಾವು ನಮ್ಮ ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಎಲ್ಲಾ ಕಾಲದಲ್ಲಿಯೂ ಅಂತರಿಕ ಶಾಂತಿ ನೆಲಸಲಿಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ 'ಯಶಸ್ವಿ ಮನುಷ್ಯನೆಂದು ಕರೆಸಿಕೊಳ್ಳುವುದಕ್ಕಿಂತ ಮಿಗಿಲಾಗಿ ಮೌಲ್ಯಯುತ ಮನುಷ್ಯನೆಂದು ಕರೆಸಿಕೊಳ್ಳಲು ಪ್ರಯತ್ನಿಸು' ಎನ್ನುವ ಐನ್‌ಸ್ಟೀನ್‌ರ ಚಿಂತನೆ ಸರಿಯೆನಿಸುತ್ತದೆ.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050